ಕರ್ನಾಟಕ ಲೋಚನ

ಸಂಪುಟ ೬ | ಡಿಸೆಂಬರ್ ೧೯೯೩ | ಸಂಚಿಕೆ ೨

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

" ಕರ್ನಾಟಕ ಲೋಚನ "

ಲೇಖನಗಳು—ಟಿಪ್ಪಣಿಗಳು

ಸಂಶೋಧನಾತ್ಮಕ ಪಾಂಡಿತ್ಯ, ವಿದ್ವತ್ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರಸಾಹಿತ್ಯದ ಗ್ರಂಥಗಳು—ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣಿಗಳು–ಇವುಗಳಿಗೆ 'ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪ ವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊ ಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗ ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳ ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳ (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವ ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯ ಉಳಿಸಿಕೊಂಡಿರಬೇಕಾಗಿ ಕೋರಿಕೆ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

54, 3ನೇ ಕ್ರಾಸ್, ಗವೀಪುರ ವಿಸ್ತರಣ, ಬೆಂಗಳೂರು–560 019

ಸಂಪಾದಕರು ; **ವಿದ್ವಾನ್ ಟಿ. ಕೇಶವ ಭಟ್ಟ**

ಸಹಾಯಕ ಸಂಪಾದಕರು : **ಎನ್. ಎಸ್. ರಾಮಸ್ವಾಮಿ ಅಯ್ಯರ್**

ಸಂಪುಟ ೬ ಡಿಸೆಂಬರ್ ೧೯೯೩ ಸಂಚಿಕೆ ೨

ಪ ರಿ ವಿ ಡಿ

Karnataka Lochana

Half-Yearly Journal, Published by B. M. Sri Memorial Foundation, 54, 3rd Cross, Gavipura Extension
Bangalore-560 019

Chairman; Editorial Board : *Shri N. Basavaradhya*
Editor : *Vidwan T. Keshava Bhat*

Vol. VI *December 1993* *No. 2*

CONTENTS

"ಸಮಸ್ಯಾಪೂರಣ"

[ಕಳೆದ ಸಂಚಿಕೆಯಿಂದ ಆರಂಭಿಸಿರುವ ಈ ಹೊಸ ಅಂಕಣಕ್ಕೆ ವಿದ್ವಾಂಸರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿರುವುದರಿಂದ ಈ ಅಂಕಣವನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಪ್ರಾಚೀನ ಮಾದರಿಯ ಛಂದೋರಚನೆಗಳಲ್ಲಿ ಆಧುನಿಕ ಚಿಂತನೆಗಳನ್ನು ಮೂಡಿಸಲು, ಸಮರ್ಥವಾಗಿ ನಿರೂಪಿಸಲು ಸಾಧ್ಯವಿದೆ ಎಂಬುದನ್ನೂ ಆಧುನಿಕರೂ ಛಂದೋಬದ್ಧವಾದ ಕವಿತೆಗಳನ್ನು ರಚಿಸಬಲ್ಲರು ಎಂಬುದನ್ನೂ ಈ ಪ್ರಯೋಗಗಳು ಸ್ಪಷ್ಟಪಡಿಸುತ್ತವೆ. 'ಕರ್ನಾಟಕ ಲೋಚನ' ಪತ್ರಿಕೆಯ ಮುಖ್ಯ ಉದ್ದೇಶ ಶಾಸ್ತ್ರಸಾಹಿತ್ಯ–ಸಂಶೋಧನೆ–ಪಾಂಡಿತ್ಯದತ್ತ ಪ್ರೀತಿ–ಆಸಕ್ತಿ ಮೂಡಿಸುವುದೇ ಆಗಿರುವುದರಿಂದ ಈ ಹೊಸ ಅಂಕಣ ಅದಕ್ಕೆ ಪೂರಕವಾಗಿದೆ ಎಂದು ಭಾವಿಸುತ್ತೇವೆ—ಸಂ]

ಕಳೆದ ಸಂಚಿಕೆಯಲ್ಲಿ ನೀಡಿದ್ದ ಸಮಸ್ಯೆ

'ಕಸವರಮಂ ಕಳೆದು ಕಸವನಾಂತವೊಲಕ್ಕುಂ'

ಇದಕ್ಕೆ ವಿದ್ವಾಂಸರು ಈ ರೀತಿ ಸಮಸ್ಯಾಪೂರ್ತಿ ಮಾಡಿದ್ದಾರೆ.

೧. ಸೊಸೆಯಾಗಿ ಬಂದಳಂ ತ
ಕ್ಕಿಸಿ ಸೂಳೆಯನಪ್ಪುಗೈವ ಗಂಡನ ಕೃತ್ಯಂ
ಕಿಸಿವಾಯ್ಯೇಡಿಕೆಗಕ್ಕುಂ
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ಶಾಳ್ತಜೆ ಕೃಷ್ಣ ಭಟ್ಟ, ವಿದ್ವಾನ್

೨. ಮಿಸುಪ ಗುಣ ಲಕ್ಷಣಾನ್ವಿತ
ರಸಕೃತಿಯಂ ಪಳಿದು ದೂಷ್ಯಮಂ ನವ್ಯದ ನೀ
ರಸರಚನೆಯನುಗ್ಗಡಿಪುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ಟಿ. ಕೇಶವ ಭಟ್ಟ

೩. ಸಂಸಾರದೊಳೊಲುಮೆ ಜ್ಯೋ
ತಿ ಸಾರ್ಥಕಮೆನೆ ಬೆಳಗುತಿರ್ಪುದಂ ಕಿಡಿಸುತೆ
ದ್ವೇಷದ ಪೊಗೆಯಂ ಪರೆವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ರಾ. ಲಕ್ಷ್ಮೀನಾರಾಯಣ

೪. ನೀತಿನಯಂಗಳ ಕಲಿಯದೆ
ಸ್ವಪರೋನ್ನತಿಮಾರ್ಗವನ್ನೆ ತಿಳಿಯದೆ ಮನುಜಂ ।
ಹೊತ್ತಗೆಯ ಬರಿದೆ ಹೊತ್ತೊಡೆ
ಕಸವರಮಂ ಕಳೆದು ಕಸವನಾಂತವೊಲಕ್ಕುಂ ॥

—ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ

೫. ಅಸಮಾಽಽತ್ಮಾಽಽನಂದಾಮೃತ-
ರಸಮಂ ತೊರೆದಿಲ್ಲಿ ವಿರಸ ವಿಷಯದೊಳೆ ನಿರೀ ।
ಕ್ಷಿಸುವುದು ಸೊಗವುಣ್ಣುವುದಂ
ಕಸವರಮಂ ಕಳೆದು ಕಸವನಾಂತವೊಲಕ್ಕುಂ ॥

—ದರ್ಭೆ ನಾರಾಯಣ ಭಟ್ಟ

೬. ಪಶುಪತಿಯಂ ಕಳೆದು ಪಶುವ
ವಿಷಧರನಂ ಕಳೆದು ವಿಷವ ಶೂಲಿಯ ಕಳೆದಾ
ತಿಸುಳವನಾಂತನ ಕೃತ್ಯಂ
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ಕೆ. ಎಸ್. ಮಧುಸೂದನ
—ಎಚ್. ಎನ್. ಮುರಳೀಧರ

೭. ಕಸುಗಾಯ ಪಿಡಿದು ಪಣ್ಣಂ
ಅಸುರರ ಪಿಡಿದು ಸುರಸಮಿತಿಯ ಚಾಡಿಯ ಪಿಡಿದಾ
ಸುಸತ್ಯವ ತೊರೆವನ ಕಜ್ಜಂ
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ಕೆ. ಎಸ್. ಮಧುಸೂದನ

ಮುಂದಿನ ಸಂಚಿಕೆಯ ಸಮಸ್ಯೆ :

"ತರುಣೀಜನಮೊಲಿಯದಿರ್ದೊಡೇಂ ಶೋಕಿಪೆಯೋ"

ಸೂಚಿಸಿದವರು : ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ

ವಿ.ಸೂ. : ಮಾನ್ಯ ವಿದ್ವಾಂಸರು ಈ ಸಮಸ್ಯೆಯನ್ನು ಛಂದೋಬದ್ಧ ಕವಿತೆಗಳಲ್ಲಿ **ಪೂರ್ತಿ** ಮಾಡಿ ಕಳುಹಿಸಿದಲ್ಲಿ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು —ಸಂ

ಪಂಪನು ಮೊದಲು ಸಮಸ್ತಭಾರತವನ್ನು ಬರೆದು ಮತ್ತೆ ಅದನ್ನು ವಿಕ್ರಮಾರ್ಜುನವಿಜಯವನ್ನಾಗಿಸಿದನೆ ?

ನ. ಸುಬ್ರಹ್ಮಣ್ಯಂ

ಸಾವಿರ ವರ್ಷಗಳಿಂದ ಶ್ರೇಷ್ಠಕವಿಯೆಂದು ಕನ್ನಡ ಸಾಹಿತ್ಯ ಪ್ರೇಮಿಗಳಿಂದ ಆರಾಧಿಸಲ್ಪಡುತ್ತಿರುವವನು ಪಂಪ. ಅವನು ಕನ್ನಡದ ಅಗ್ರಮಾನ್ಯ ಕವಿ. ಸಂಸ್ಕೃತಕ್ಕೆ ವಾಲ್ಮೀಕಿಯಂತೆ ಕನ್ನಡಕ್ಕೆ ಆದಿಕವಿ.ಅವನ **ಆದಿಪುರಾಣ,ವಿಕ್ರಮಾರ್ಜುನ ವಿಜಯ** ಎರಡೂ ಮಹಾಕಾವ್ಯಗಳು. ಆ ಎರಡು ಕಾವ್ಯಗಳೂ ಆ ಮುಂಚಿನ ಕಾವ್ಯಗಳನ್ನೆಲ್ಲ ಇಕ್ಕಿಮೆಟ್ಟಿದುವು ಎಂದು ಕವಿಯ ಹೇಳಿಕೆ. ಅವನಿಗಿಂತ ಪೂರ್ವದಲ್ಲಿದ್ದ ಕವಿಗಳ ಸಮಗ್ರ ಕಾವ್ಯವಾವುದೂ ಉಳಿದು ಬಂದಿಲ್ಲವಾದುದರಿಂದ ಆ ಹೇಳಿಕೆ ಸತ್ಯವಿರಬಹುದು. ಮುಂದೆ ನೂರಾರು ವರ್ಷಕಾಲ ಪಂಪನ ಕಾವ್ಯಗಳು ಇತರ ಕವಿಗಳಿಗೆ ಮಾರ್ಗದರ್ಶನ ಮಾಡಿರುವುದೂ ನಿಜ.

ಇಂತಹ ಪ್ರತಿಭಾವಂತ ಕವಿಯ ಒಂದು ಕಾವ್ಯ **ವಿಕ್ರಮಾರ್ಜುನ ವಿಜಯ**ದಲ್ಲಿ ಅನೇಕ ಅಸಾಂಗತ್ಯಗಳೂ ಅಸಾಮುಂಜಸ್ಯಗಳೂ ತಲೆಹಾಕಿವೆಯೆಂದರೆ ನಮಗೆ ಸೋಜಿಗ ವೆನಿಸುತ್ತದೆ. ಹಾಗೆ ಅವು ತಲೆಹಾಕಿದ್ದರೂ ಕಾವ್ಯದ ರೋಚಕತೆಯೆದುರು ಅದು ಪರಿಗಣ ನೆಗೆ ಬರುವುದಿಲ್ಲ. **ಕಲೆಗಾರನ ಕಲೆ ಸಹೃದಯರಿಗೆ ಮೆಚ್ಚಿಕೆಯಾಯಿತೆಂದರೆ ಕಲೆಗಾರನ ದೋಷಗಳೆಲ್ಲ ಗೌಣವಾಗಿಬಿಡುತ್ತವೆ.** ಆ ದೋಷಗಳತ್ತ ಜನ ಕಣ್ತೆರೆದು ನೋಡುವುದಕ್ಕೇ ಹೋಗುವುದಿಲ್ಲ. ಆದರೂ ಆ ಅಸಾಂಗತ್ಯಗಳ ಯುಕ್ತಾಯುಕ್ತತೆ ಯನ್ನು ಕುರಿತು ಪರಿಶೀಲಿಸುವುದು ವಿಮರ್ಶಕನ ಕೆಲಸ.

ಪರಂಪರೆಯಿಂದಲೋ ಕೇಳ್ಮೆಯಿಂದಲೋ ಮಹಾಭಾರತದ ಕಥೆಯನ್ನು ತಿಳಿದಿರುವ ವರಿಗೆ ವಿಕ್ರಮಾರ್ಜುನ ವಿಜಯವನ್ನು ಓದಿದಾಗ ಹಲವು **ಅಸಾಂಗತ್ಯಗಳು** ಎದುರಾಗು ತ್ತವೆ. ಅವನ್ನು **ಎರಡು ಬಗೆಗಳಾಗಿ** ವಿಂಗಡಿಸಬಹುದು.

ಅ. ಅರಿಕೇಸರಿಯ ವೈಯಕ್ತಿಕ ವಿಷಯಗಳ ಸೇರ್ಪಡೆ.

ಆ. ಅರಿಕೇಸರಿಯ ಪ್ರಸನ್ನತೆಗಾಗಿ ಮಾಡಿಕೊಂಡಿರಬಹುದಾದ ಮಾರ್ಪಾಡುಗಳು.

ಅ. ಚಾಲುಕ್ಯ ರಾಜನಾದ ಅರಿಕೇಸರಿಯ ಆಪ್ತಮಿತ್ರನೂ ಆಸ್ಥಾನಕವಿಯೂ ಆಗಿದ್ದವನು ಪಂಪ. ಅವನನ್ನು ಆತ ಪ್ರೀತಿಯಿಂದ ಬರಮಾಡಿಕೊಂಡು ಸಮಸ್ತ ಭಾರತವನ್ನು ಬರೆಯುವಂತೆ ಪ್ರೇರಿಸಿದನಂತೆ. ಅವನು ಬರೆದ ಆ ಕಾವ್ಯಕ್ಕೆ ಅರ್ಜುನ

ಕಥಾನಾಯಕನಾದುದರಿಂದ ಅದು ವಿಕ್ರಮಾರ್ಜುನ ವಿಜಯವೆನಿಸಿತು. ಅರಿಕೇಸರಿಯನ್ನು ಕಂಡಾಗಲೆಲ್ಲ ಪಂಪನಿಗೆ ಅರ್ಜುನನ ನೆನಪೇ ಬರುತ್ತಿತ್ತಂತೆ. ಹಾಗಾಗಿ ಅರಿಕೇಸರಿಯ ಕಥೆಯನ್ನು ಅರ್ಜುನನ ಕಥೆಯೊಡನೆ ಅಭೇದ ಕಲ್ಪನೆಯಿಂದ ಸಮ್ಮೇಳಗೊಳಿಸಿ ಬರೆದ. ಆದರೆ ಭಾರತದ ಕೆಲವು ಸನ್ನಿವೇಶಗಳಲ್ಲಿ ಅರಿಕೇಸರಿಯ ಕಥೆ ಹೆಣೆದುಕೊಂಡಿರುವುದು ಅಪ್ರಕೃತವೂ ಅಸಂಗತವೂ ಆಗಿ ತೋರುತ್ತದೆ. ಅಂತಹ ಸಂಗತಿಗಳನ್ನು ಹೀಗೆ ವಿಶ್ಲೇಷಿಸಬಹುದು.

೧) ಗ್ರಂಥಾರಂಭದಲ್ಲಿ ದೇವತಾಸ್ತುತಿ ಮಾಡುವೆಡೆಯಲ್ಲಿ ಅರಿಕೇಸರಿಯ ಬಿರುದುಗಳಾದ **ಉದಾತ್ತನಾರಾಯಣ, ಉದಾರಮಹೇಶ್ವರ, ಪ್ರಚಂಡ ಮಾರ್ತಾಂಡ, ಸಹಜಮನೋಜ** ಎಂಬುವನ್ನು ಬಳಸಿಕೊಂಡು ನಾರಾಯಣನಿಗಿಂತಲೂ ಉದಾತ್ತನಾರಾಯಣನೇ ಮೇಲೆಂಬಂತೆ, ಮಹೇಶ್ವರನಿಗಿಂತಲೂ ಉದಾರಮಹೇಶ್ವರನೂ, ಮಾರ್ತಾಂಡನಿಗಿಂತಲೂ ಪ್ರಚಂಡ ಮಾರ್ತಾಂಡನೂ, ಮನೋಜನಿಗಿಂತಲೂ ಸಹಜಮನೋಜನೂ ಮೇಲೆಂಬಂತೆ ಕವಿ ಸ್ತುತಿಸಿದ್ದಾನೆ.

೨) ಅರಿಕೇಸರಿಗೆ ಸಂಬಂಧಿಸಿದ ಆನುವಂಶಿಕ ವಿಷಯಗಳು ಪ್ರಾರಂಭದ ೫೧ ಪದ್ಯಗಳಲ್ಲಿ ಅಡಕವಾಗಿವೆ.

೩) ಪ್ರತಿ ಆಶ್ವಾಸದ ಮೊದಲನೆಯ ಹಾಗೂ ಕೊನೆಯ ಪದ್ಯ ಅರ್ಜುನನ ಪರವಾದುದಾಗಿರುತ್ತದೆ. ಅಲ್ಲಿ ಸಾಮಾನ್ಯವಾಗಿ "ಅರಿಗ, ಹರಿಗ, ಪರಾಕ್ರಮಧವಳ, ಉದಾತ್ತನಾರಾಯಣ" ಇತ್ಯಾದಿಯಾಗಿ ಅರಿಕೇಸರಿಯ ನಾಮಕರಣೋತ್ಸವದಲ್ಲಿ ಹೆಸರೋ ಬಿರುದೋ ಬಳಕೆಯಾಗುತ್ತದೆ.

೪) ಅರ್ಜುನನ **ದೇವಸಭೆಯೂ ಬ್ರಹ್ಮಸಭೆಯೂ** ಬಂದು ಸೇರಿ **ಅರಿಕೇಸರಿಯ ನೂರೆಂಟು ಬಿರುದುಗಳನ್ನು ಬಳಸಿ ಅಷ್ಟೋತ್ತರ ಶತನಾಮಗಳಿಂದ** ಅವನಿಗೆ ಆಶೀರ್ವಾದ ನಡೆಯುತ್ತದೆ.

೫) ಅರ್ಜುನನಿಗೆ **ಯೌವನ** ಪ್ರಾಪ್ತವಾದಾಗ ಅವನ ಅಂಗಾಂಗಗಳನ್ನು ಆಮಸ್ತಕಪಾದವಾಗಿ (ಆಪಾದಮಸ್ತಕವಾಗಿ ವರ್ಣಿಸುವುದು ವಾಡಿಕೆ) ವರ್ಣನೆ ಮಾಡುವ ನೆಪದಲ್ಲಿ **ಅರಿಕೇಸರಿಯ ಬಿರುದುಗಳನ್ನು** ವ್ಯಾಖ್ಯಾನಿಸಿ ಅವುಗಳ ಸಾಮಂಜಸ್ಯವನ್ನು ಕಲ್ಪಿಸುತ್ತಾನೆ.

೬) ಕೃಷ್ಣದೌತ್ಯದ ಸಂದರ್ಭದಲ್ಲಿ ದುರ್ಯೋಧನನೆದುರು **ಅರ್ಜುನನ** ಪ್ರತಾಪವನ್ನು ವರ್ಣಿಸುವ ನೆಪದಲ್ಲಿ ಅರಿಕೇಸರಿಯ ಒಂದೊಂದು ಬಿರುದನ್ನೂ ಹೇಳಿ ಅರ್ಜುನನಿಗನ್ವಯಿಸಿ ಹೊಗಳಲಾಗಿದೆ.

೭) ಯುದ್ಧದಲ್ಲಿ ಕರ್ಣನಿಂದ ಪೆಟ್ಟುತಿಂದು ಹಿಂದಿರುಗಿದ ಯುಧಿಷ್ಠಿರ ಅರ್ಜುನನ ಪರಾಕ್ರಮದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿದಾಗ ಅಣ್ಣನ

ಮಾತಿಗೆ ಕಡುನೊಂದ ಅರ್ಜುನ, ಸೂರ್ಯ ಮುಳುಗುವುದರೊಳಗೆ ಕರ್ಣ ನನ್ನು ಕೊಲ್ಲದೆ ನಿನ್ನ ಪಾದದರ್ಶನ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವ ಸಂದರ್ಭದಲ್ಲಿ ತಾನು ನರಸಿಂಗನಿಗೂ ಜಾಕಬ್ಬರಸಿಗೂ ಮಗ ನಾಗಿ ಹುಟ್ಟಿದ ಅರಿಕೇಸರಿ ಎನಿಸಿ ಪ್ರಸಿದ್ಧನಾದವನು ಶತ್ರುಗಳಿಗೆ ಸಾಟಿ ಯಾದನೆಂದರೆ ನೀವೇ ನಗಿರೆ ಎನ್ನುವನು.

ಲ) ೧೪ನೇ ಆಶ್ವಾಸದ ೩೭ನೇ ಪದ್ಯದನಂತರದ ವಚನದಲ್ಲಿ ಅರಿಕೇಸರಿಯ **ಬಿರುದಾವಳಿಗಳ** ವ್ಯಾಖ್ಯಾನ ಬರುತ್ತದೆ.

ಆ. ಅರಿಕೇಸರಿಯನ್ನು ಅರ್ಜುನನೊಡನೆ ಸಮೀಕರಿಸಿದಮೇಲೆ ಅವನ ಪತ್ನಿಗೂ ಅರ್ಜುನನ ಪತ್ನಿಗೂ ಸಮೀಕರಣವಾಗಬೇಕು. ಆದ್ದರಿಂದ ಅರ್ಜುನಪತ್ನಿಯಾದ ದ್ರೌಪದಿಯನ್ನು ಇತರ ಪಾಂಡವರಿಗೂ ಪತ್ನಿ ಎಂದಲ್ಲಿ ಅರಿಕೇಸರಿಗೆ ಎಲ್ಲಿ ಅಸಮಾಧಾನ ವಾದೀತೋ ಎಂದು ದ್ರೌಪದಿಯನ್ನು ಅರ್ಜುನನಿಗೆ ಮಾತ್ರ ವಿವಾಹ ಮಾಡಿಸುತ್ತಾನೆ. ಅದರಿಂದ ಮುಂದೆ ಹಲವೆಡೆ ಅವನು ಇಕ್ಕಟ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ.

ಪಂಪ ಜೈನಧರ್ಮೀಯನಾದುದರಿಂದ ಪ್ರಾರ್ಥನಾವಸರದಲ್ಲಿ ತನ್ನ ಒಡೆಯನ ಸಂಕೀರ್ತನೆ ಮಾಡಬೇಕೆಂಬ ಮೂಲೋದ್ದೇಶದಿಂದ ನಾರಾಯಣ, ಮಹೇಶ್ವರ, ಮಾರ್ತಾಂಡ ಮತ್ತು ಮನೋಜರಿಗಿಂತ ಉದಾತ್ತನಾರಾಯಣಾದಿಗಳೇ ಮೇಲೆಂದು ನಿರೂಪಿಸ ಹೊರಟಿರುವುದನ್ನು ಸಹೃದಯರು ಅಷ್ಟಾಗಿ ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ.

ಪ್ರಾರಂಭದಲ್ಲಿ ವಿವರವಾಗಿ ಬರುವ ಅರಿಕೇಸರಿಯ ಅನುವಂಶಿಕ ವಿಷಯಗಳೂ ಭಾರತ ಕಥೆಗೆ ಅಡ್ಡಿಯಾಗವು.

ಆಶ್ವಾಸಾಂತ್ಯದ ಪದ್ಯಗಳಲ್ಲಿ ಬರುವ ಅರಿಕೇಸರಿಯ ನಾಮಗಳು ಆರ್ಜುನನಿಗೂ ವಿಶೇಷಣಗಳಾಗುವುದರಿಂದ ಅವುಗಳಿದ್ದರೂ ತೊಂದರೆಯಿಲ್ಲ.

ದೇವಸಭೆ, ಬ್ರಹ್ಮಸಭೆಯ ಅಷ್ಟೋತ್ತರ ಶತನಾಮಗಳ ಆಶೀರ್ವಾದವನ್ನು ಸಹಿಸಿ ಕೊಳ್ಳಬಹುದು. ಆದರೆ ಅರ್ಜುನನಿಗೆ ಯೌವನ ಪ್ರಾಪ್ತವಾದಾಗ ಆವನ ಅಂಗಾಂಗ ವರ್ಣನೆ ಮಾಡುತ್ತಾ ಅರಿಕೇಸರಿಯ ಬಿರುದುಗಳ ವ್ಯಾಖ್ಯಾನ ಮಾಡುವುದು ಸಹಜವೆನಿ ಸುವುದಿಲ್ಲ.

ಕೃಷ್ಣ ಸಂಧಾನದ ಸಮಯದಲ್ಲಿ ಅರಿಕೇಸರಿಯ ಬಿರುದೊಂದೊಂದನ್ನೂ ಅರ್ಜುನನಿಗೆ ಅನ್ವಯಿಸುವಾಗ "........ತ್ರಿನೇತ್ರನೊಳ್ ಕಾದಿ ಪಾಶುಪತಾಸ್ತ್ರಮಂ ಪಡೆದ ಕದನ ತ್ರಿಣೇತ್ರನ ಗಂಡಗರ್ವಮುಮನ್, ಇಂದ್ರಲೋಕಕ್ಕೆ ಹೋಗಿ ದೇವೇಂದ್ರನ ಪಗೆವರಪ್ಪ ನಿವಾತಕವಚ ಕಾಳಕೇಯ ಪೌಳೋಮ ತಳತಾಳುಕರೆಂಬ ದೈತ್ಯರಂ ಪಡಲ್ವಡಿಸಿದ ಪಡೆ ಮೆಚ್ಚೆಗಂಡುಮಂ, ದೇವೇಂದ್ರನೊಳರ್ಧಾಸನಮೇಱಿದ ಗುಣಾರ್ಣವನ ಮಹಿಮೆ ಯುಮಂ........" ಎಂದು ಹೇಳಿದಾಗ ಅರ್ಜುನನಿಗೆ ಆ ಬಿರುದುಗಳು ವಿಶೇಷಣಗಳಾಗು

ವುವೆಂದು ನಾವು ಸುಮ್ಮನಿರಬಹುದು. ಆದರೆ "ಚಳುಕ್ಯತಿಳಕನಪ್ಪ ವಿಜಯಾದಿತ್ಯಂ ಗೋವಿಂದರಾಜಂ ಮುಳಿಯೆ ತಳರದೆ ಪೆಱಗಿಕ್ಕಿ ಕಾದ ಶರಣಾಗತಜಳನಿಧಿಯೆ ಪೆಂಪುಮಂ, ಗೊಜ್ಜಿಗನೆಂಬ ಸಕಲ ಚಕ್ರವರ್ತಿ ಬೆಸಸೆ ದಂಡುವಂದ ಮಹಾಸಾಮಂತರಂ ಮರಲಿಱಿದು ಗೆಲ್ದ ಸಾಮಂತಚೂಡಾಮಣಿಯ ಬೀರಮುಮಂ... ...." ಎಂದು ಅರಿಕೇಸರಿಯ ಚಾರಿತ್ರಿಕ ವಿಷಯಗಳನ್ನು ಜೋಡಿಸಿರುವುದು ನುಂಗಲಾರದ ತುತ್ತಾಗುತ್ತದೆ.

ಚಂದ್ರವಂಶದ ರಾಜಪುತ್ರನೂ ಪಾಂಡವ ಮಧ್ಯಮನೂ ಕೌಂತೇಯನೂ ದೇವೇಂದ್ರನ ಅನುಗ್ರಹದಿಂದ ಜನಿಸಿದವನೂ ಆದ ಅರ್ಜುನನು ಸ್ವಯಂ ತನ್ನ ಅಣ್ಣನ ಮುಂದೆಯೇ ತನ್ನನ್ನು ನರಸಿಂಗ ಜಾಕಬ್ಬೆಯರ ಮಗನೆಂದು ಸಾರಿದರೆ ಹೇಗೆ ತಾನೇ ಸಹನೀಯವೆನಿಸೀತು ?

ದ್ರೌಪದಿ ಪಾಂಡವರೈವರಿಗೂ ಪತ್ನಿಯಲ್ಲವೆಂದುದರಿಂದ ನಾರದ ಕಲ್ಪಿಸಿದ ಸಮಯಪಾಲನೆ ಹಾಗೂ ಅರ್ಜುನ ತೀರ್ಥಯಾತ್ರೆ ಬೇಕಾಗಲಿಲ್ಲ. ಒಂದೆಡೆಯಿರಲು ಬೇಸರಿಸಿ ದಿಗಂಗನಾಮುಖಾವಲೋಕನಕ್ಕೆ ಅರ್ಜುನ ಹೊರಟನೆಂದು ಪಂಪ ಜಾರಿಸುತ್ತಾನೆ. ಆದರಿಂದ ಕೃತಿಗೆ ಬಾಧೆಯೇನೂ ಇಲ್ಲ. ಆದರೆ ದ್ಯೂತದಲ್ಲಿ ಯುಧಿಷ್ಠಿರ ರಾಜ್ಯಸರ್ವಸ್ವವನ್ನೂ ಒತ್ತೆಯಿಟ್ಟು ಸೋತುಕೊಂಡಮೇಲೆ "**ಚಲದಿಂದ ದ್ರೌಪದಿಯನ್ನು ಸೋತನು**" ಎಂದು ಬರುತ್ತದೆ. ಪಂಪನಲ್ಲಿ ಸೋದರರನ್ನು ಒಡ್ಡಿ ಸೋಲಬೇಕಾದ ಪ್ರಮೇಯವೇ ಬರಲಿಲ್ಲ. ಹಾಗಿರುವಾಗ ದ್ರೌಪದಿಯನ್ನು ಒಡ್ಡಿ ಸೋಲಬೇಕಾದ ಪರಿಸ್ಥಿತಿ ಎಲ್ಲಿಬಂತು ? ಅಲ್ಲದೆ ಅವಳನ್ನು ಒಡ್ಡಿ ಸೋಲಲು ಯುಧಿಷ್ಠಿರನಿಗೆ ಅಧಿಕಾರವೆಲ್ಲಿ ಬಂತು ?

ಮುಂದೆ ಕೀಚಕವಧೆಯ ಪ್ರಸಂಗದಲ್ಲಿ ದ್ರೌಪದಿ ಇರುಳಿನಲ್ಲಿ ರಹಸ್ಯವಾಗಿ ಭೀಮನನ್ನಾಶ್ರಯಿಸುವುದೂ ಸಮಂಜಸವಾಗುವುದಿಲ್ಲ.

ಅರ್ಜುನ ಸುಭದ್ರೆಯರ ಅನುರಾಗ ಮತ್ತು ಪರಿಣಯಕ್ಕೆ ಪಂಪ ವಿಶೇಷ ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆ, ಅದು ತಪ್ಪೆನಿಸುವುದಿಲ್ಲ. ಆದರೆ ಕೊನೆಯಲ್ಲಿ ಯುಧಿಷ್ಠಿರ ದ್ರೌಪದಿಯ ಬದಲು **ಅರ್ಜುನ ಸುಭದ್ರೆಯರಿಗೆ ರಾಜ್ಯಾಭಿಷೇಕ** ಮಾಡಿಸುವುದು ಬರುತ್ತದೆ. ಅರ್ಜುನನಿಗಾದರೂ ಪರವಾಗಿಲ್ಲ, ಜೀವನವೆಲ್ಲ ಪಡಬಾರದ ಕಷ್ಟಗಳನ್ನನುಭವಿಸಿದ ದ್ರೌಪದಿಗೆ ಇನ್ನೇನು ಸುಖ ಕೈಗೆ ಬಂದಿತೆನ್ನುವಾಗ ಅವಳ ಕೈತಪ್ಪಿಸಿ, ಸುಖವಾಗಿ ತೆಪ್ಪಗೆ ಕುಳಿತಿದ್ದ ಸುಭದ್ರೆಗೆ ಮಹಾರಾಣಿಯ ಪಟ್ಟ ಕಟ್ಟಿದುದು ಮನಸ್ಸಿಗೆ ಹರ್ಷತರುವುದಿಲ್ಲ.

ಇವಲ್ಲದೆ ಪಂಪನ ಉದ್ದೇಶದ ಮೇರೆಯನ್ನು ಮೀರಿ ಕಥೆ ಹೇಗೆ ಪ್ರವಹಿಸಿದೆಯೆಂಬುದನ್ನು ನೋಡಿ.

ದ್ಯೂತದಲ್ಲಿ ಸೋಲಿಸಲ್ಪಟ್ಟ ದ್ರೌಪದಿಯನ್ನು ದುಶ್ಶಾಸನ ಸಭೆಯ ಮಧ್ಯಕ್ಕೆಳೆತಂದು ಅವಳ ಮುಡಿಯೆಳೆದು ಉಟ್ಟ ಸೀರೆಯವರೆಗೆ ಕೈನೀಡಿದಾಗ ಕಣ್ಣಿಂದ ರಕ್ತ

ತುಳುಕುವ ಹಾಗೆ ಪ್ರಚಂಡವಾಗಿ **ಮೊದಲು ಕೋಪತಾಳಿದವನು** ಭೀಮ ! ಆಮೇಲೆ ಅರ್ಜುನ, ನಕುಲ, ಸಹದೇವ. ಅಣ್ಣ ಕಣ್ಣಿನಿಂದ ಸಂಜ್ಞೆಮಾಡಲು ಎಲ್ಲರೂ ಸುಮ್ಮನಾದರು.

ಅಪಮಾನಿತಳಾದ ದ್ರೌಪದಿ ತನ್ನ ಮುಡಿಯನ್ನು ಹಿಡಿದೆಳೆದವನನ್ನು ಕೊಂದು ಅವನ ಕರುಳ ದಂಡೆಯನ್ನು ತನಗೆ ಮುಡಿಸಿದಲ್ಲದೆ ತನ್ನ ಮುಡಿಯನ್ನು ಕಟ್ಟುವುದಿಲ್ಲ ವೆಂದು ಶಪಥಮಾಡಿದ ಕೂಡಲೆ ಕೆರಳಿದ ಭೀಮ "ಮುಳಿಸಿಂದಂ ನುಡಿದೊಂದು ನಿನ್ನ ನುಡಿ ಸಲ್ಗೆ. ಅರಾಗದೆಂಬರ್" ಎಂದು, ದುಶ್ಶಾಸನನ ಹೊಟ್ಟೆಯನ್ನು ಸೀಳಿ ಕರುಳನ್ನು ತೆಗೆದು ಮುಡಿಸುವೆನು, ಎದೆಯನ್ನು ಬಗೆದು ರಕ್ತವನ್ನು ಕುಡಿಯುವೆನು, ದುರ್ಯೋಧನನ ತೊಡೆಯನ್ನು ಮುರಿದು ಕಿರೀಟವನ್ನು ನುಚ್ಚುನೂರಾಗೊಡೆಯುವೆನು, ನೂರ್ವರು ಕೌರವರನ್ನೂ ಕೊಲ್ಲುವೆನು" ಎಂದು ಭಯಂಕರವಾಗಿ ಪ್ರತಿಜ್ಞೆ ಮಾಡುವನು.

[೭–೧೨–೧೫೭]

ಭೀಮನಿಗೆ ಮರುಕಳಿಸಿದ ಕೋಪ ಹದ್ದುಮೀರಿ ಭಯಂಕರ ಪ್ರತಿಜ್ಞೆಯನ್ನು ಮಾಡುವಂತಾದುದು **ಐದು ವೃತ್ತಗಳಲ್ಲಿ** ಸೊಗಸಾಗಿ ಚಿತ್ರಿತವಾಗಿದೆ.

ಮುಂದೆ ಇದೇ ಭೀಮ ಯುದ್ಧದಲ್ಲಿ ದುಶ್ಶಾಸನನನ್ನು ಹೊಡೆದು ಕೆಡವಿ, ಗಂಟಲನ್ನೊತ್ತುತ್ತಾ ದ್ರೌಪದಿಯನ್ನು ಕರೆಸಿದಾಗ ಮಿಲಮಿಲ ಒದ್ದಾಡುವ ಅವನನ್ನು ನೋಡಿ ದ್ರೌಪದಿ ತನ್ನ ಅರಣ್ಯವಾಸದ ಅಳಲನ್ನೆಲ್ಲ ಕಳೆದುಕೊಳ್ಳುತ್ತಾಳೆ.

"ಆಗಳ್ ವೃಕೋದರಂ **ತನ್ನ ತಳೋದರಿಯ ಮುಖಮಂನೋಡಿ** "ನಿನ್ನೆನ್ನ ಪ್ರತಿಜ್ಞೆಯಂ ನೆಱಪುವಂ ಬಾ," ಎಂದು ಅವಳನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಹಿರಣ್ಯಾಕ್ಷನ ಉರವನ್ನು ಬಗೆದ ನರಸಿಂಹನಂತೆ ದುಶ್ಶಾಸನನ ಎದೆಯನ್ನು ಬಗೆದು ಬೊಗಸೆಯಿಂದ ರಕ್ತವನ್ನು ತೆಗೆತೆಗೆದು ದ್ರೌಪದಿಯ ಮುಡಿಗೆರೆದು, ಅವನ ಹಲ್ಲ ಹಣಿಗೆಯಿಂದ ಬಾಚಿ, ಅವನ ಕರುಳದಂಡೆಯನ್ನು ಮುಡಿಸಿದ. ಅನಂತರ ಅವಳ ಮುಖವನ್ನು ನೋಡಿ ಹರ್ಷಿಸಿ "ಇದಱಿಂಕೊಳ್ ಶ್ವೇತಾತಪತ್ರಸ್ಥಗಿತದಶದಿಶಾಮಂಡಲಂ ರಾಜಚಕ್ರಂ ಪುದಿದಟ್ಟಾಡಿತ್ತು, ಆಡಂಗಿತ್ತಿದಱಿಂಕೊಳೆ ಕುರುರಾಜಾನ್ವಯಂ ಮತ್ಪ್ರತಾಪ ಕ್ಕಿದಱಿಂದಂ ನೋಡಗುರ್ವುರ್ವಿದುದು, ಇದುವೆ ಮಹಾಭಾರತಕ್ಕಾದಿಯಾಯ್ತು. ಅಬ್ಜದಳಾಕ್ಷೀ. ಪೇಱ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ !" ಎಂದು ಕೊಂಡಾಡಿದ. [೧೨–೧೫೭]

ಅರ್ಜುನನ ತಳೋದರಿಯನ್ನು ಭೀಮ ತನ್ನ ತಳೋದರಿಯನ್ನಾಗಿಸಿಕೊಳ್ಳಬಹುದೆ ? ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಎಣ್ಣೆಯೊತ್ತಿ ತಲೆ ಬಾಚಿ ಪೂಮುಡಿಸಿ ಸಿಂಗರಿಸಿ ಅಂದವನ್ನು ನೋಡಿ ಹಿಗ್ಗುವುದು ಸಮಂಜಸವೆ ?

ಇದನ್ನೆಲ್ಲ ನೋಡಿದರೆ ನಮಗೆ ಬರುವ ಪ್ರಶ್ನೆಯಿದು. ಪಂಪನಿಗೆ ಸಮಯ ಪ್ರಜ್ಞೆಯಿರಲಿಲ್ಲವೆ? ಅವನೇನು ಮರಗುಳಿಯೆ ? ಅದು ಅಲಕ್ಷ್ಯಮಾಡುವ ಸನ್ನಿವೇಶವೆ ?

ಆ ಪ್ರಸಂಗ ಮೂಲಭಾರತದಲ್ಲಿಲ್ಲದುದು, ಪಂಪನೇ ಅನ್ಯತ್ರಪ್ರೇರಣೆಯಿಂದ ಕಲ್ಪಿಸಿಕೊಂಡುದು. ಹಾಗಾಗಿ ಅದು ಮೈಮರೆತು ಬರೆದದ್ದಂತೂ ಅಲ್ಲ.

ಮುಂದೆ ಅಜ್ಞಾತವಾಸದ ಅವಧಿಯಲ್ಲಿ ದ್ರೌಪದಿ ಕೀಚಕನ ಲಾಲಸೆಗೆ ಮಣಿಯದೆ ಹೆಳವ ಬಡಿತ ತಿಂದಂತೆ ಅವನಿಂದ ಬಡಿಸಿಕೊಂಡು ಏನೂ ಮಾಡಲು ತಿಳಿಯದೆ "ಪರಿಭವಾನಿಲನಿಂ ಶೋಕಾನಲನಿರ್ಮಡಿಸೆ ನಡುನಡುಗಿ ಕಾಯ್ಪಿನೊಳ್ ಪುದುಗಿ **ತಳೋದರಿ ವೃಕೋದರನಲ್ಲಿಗೆ ವಂದು ಕಟ್ಟೇಕಾಂತದೊಳ್ ಇಂತೆಂದಳ್**........"

[೮-೭೦ವ]

ಕೀಚಕನಿಂದಾದ ಅಪಮಾನವನ್ನು ಭೀಮನಲ್ಲಿ ಹೇಳಿಕೊಂಡು "ಇಂ ನೀನಜೀವಯ್ ಪೂಣ್ದೆನ್ನದೊಂದಂ ಪರಿಭವಮುನ್, ಇದಂ ನೀಗು ನೀ ಭೀಮಸೇನಾ" ಎಂದು ಬೇಡಿದಳು.

[೮-೭೧]

ದ್ರೌಪದಿ ಇಂತಹ ಸಂದರ್ಭದಲ್ಲಿ ತನ್ನ ಪತಿಯಾದ ವಿಕ್ರಮಾರ್ಜುನನ ಬಳಿ ಹೋಗಿ ತನ್ನ ಕಷ್ಟ ಹೇಳಿಕೊಳ್ಳಬೇಕಾಗಿತ್ತಲ್ಲವೆ ? ರಾತ್ರಿಯ ಕತ್ತಲಲ್ಲಿ ಕಟ್ಟೇಕಾಂತದಲ್ಲಿ ಭೀಮನ ಬಳಿ ಹೋಗಿ ಹೇಳಿಕೊಂಡಳು. ಆಗ ಭೀಮ "ಕಣ್ಗಾಣದಿವನೊರ್ವಂ ದುಶ್ಶಾಸನನ ನೆಂಟನಕ್ಕುಂ ! ಆದೊಡೇನಾಯ್ತು" ಎಂದು ಅವಳಿಗೆ ಧೈರ್ಯಹೇಳಿ, ಸಂಚನ್ನು ಹೇಳಿಕೊಟ್ಟು, ಅನಂತರ ಕೀಚಕನನ್ನು ಕೊಂದು ಆಪತ್ತಿನಿಂದ ಅವಳನ್ನು ಪಾರುಮಾಡಿದ.

"ತಳೋದರಿ" ಎಂದರೆ ಭೀಮನ ತಳೋದರಿ ಎಂದೇ ಅಲ್ಲಿ ಧ್ವನಿತವಾಗುತ್ತದೆ. ಆದ್ದರಿಂದಲೇ ಅವಳು ಕಟ್ಟೇಕಾಂತದಲ್ಲಿ ಅವನ ಬಳಿಗೆ ಹೋದದ್ದು.

ಆಗ ಪಂಪನ ಎಚ್ಚರ ಎಲ್ಲಿ ಹೋಗಿತ್ತು ?

ಇನ್ನು ಕರ್ಣನ ಪ್ರಸಂಗವನ್ನು ನೋಡಿ;

ದುರ್ಯೋಧನನ ಆಪ್ತ ದುಷ್ಟಚತುಷ್ಟಯದಲ್ಲಿ ಒಬ್ಬನೂ, ದುರಭಿಮಾನಿಯೂ, ಅಪ್ರಾಮಾಣಿಕನೂ, ಅಹಂಕಾರಿಯೂ, ವಿವೇಚನೆಯಿಲ್ಲದ ಉದಾರಿಯೂ ಆದ ಕರ್ಣನಿಗೆ ತನ್ನ ಜನನವೃತ್ತಾಂತ ತಿಳಿದಿರಲಿಲ್ಲವೆಂದು ಕಲ್ಪಿಸಿ ಪಂಪ, ಕೃಷ್ಣಸಂಧಾನ ನಡೆದ ಸಂದರ್ಭದಲ್ಲಿ ಏಕಾಂತದಲ್ಲಿ ಕೃಷ್ಣನಿಂದ ಅವನಿಗೆ ಜನನ ವೃತ್ತಾಂತವನ್ನು ಹೇಳಿಸಿ ಧರ್ಮಸಂಕಟವನ್ನು ತಂದಿಡುತ್ತಾನೆ. ಅವನನ್ನು ಉದಾತ್ತೀಕರಿಸಿ ಅದುವರೆಗಿನ ಅವನ ಪಾಪವನ್ನೆಲ್ಲ ತೊಳೆದು. ಅವನ ವ್ಯಕ್ತಿತ್ವವನ್ನು ಕಾಳಿಕೆ ಕಳೆದ ಚಿನ್ನವನ್ನಾಗಿಸಿದ್ದಾನೆ. ಅತ್ತ ತಾಯಿಯ ಮಾತನ್ನೂ ನಡೆಸಿ ಇತ್ತ ತನ್ನ ಸ್ವಾಮಿಯ ಋಣವನ್ನೂ ತೀರಿಸಿ ಯುದ್ಧದಲ್ಲಿ ಸ್ವಯಂ ಬಲಿದಾನವಾಗುತ್ತಾನೆ. ಕರ್ಣನಿಗಾಗಿಯೇ ಅಣಿಯಾಗಿತ್ತು ಭಾರತದ ಯುದ್ಧ ! "ಕರ್ಣಂಗೊಡ್ಡಿತ್ತು ದಲ್ ಭಾರತಂ" ! ಎಂದು ಉದ್ಗರಿಸುತ್ತಾನೆ ಪಂಪ. ಕರ್ಣ ಎಂತಹ ಅಸಮಾನ ವೀರ, ಎಂತಹ ದಾನಶೂರ ! "ನೆತ್ತರ್ ಪನಪನಪರಿಯೆ ತಿವಿ

ಯುಗಿವಂತೆ" ಸುಲಿದುಕೊಟ್ಟ ತನ್ನ ವಜ್ರಕವಚವನ್ನು ಇಂದ್ರನಿಗೆ "ಎಂದುಂ ಪ್ರೋಗೆಂದನೆ, ಮಾಣ್ ಎಂದನೆ, ಪೆಱತೊಂದನೀವೆನೆಂದನೆ, ನೊಂದು ಆಃ ಎಂದನೆ ? ಸೆರಗಿಲ್ಲದೆ ಪಿಡಿ ಎಂದನ್ !" ಕೊನೆಗೆ ಪಂಪ ಅವನಿಗೆ ಚರಮಗೀತೆಯೊಂದನ್ನು ಹಾಡಿದ, "ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್. ಒಂದೇ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ. ಕರ್ಣನೊಳಾರ್ ದೊರೆ ? ಕರ್ಣನೇಱು, ಕರ್ಣನ ಕಡು ನನ್ನಿ, ಕರ್ಣನ ಳವು, ಅಂಕದ ಕರ್ಣನಚಾಗಂ—ಎಂದು ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ" ! [೧೨-೨೧೭]

ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನ ಪ್ರಾಧಾನ್ಯವೇ ಕವಿಯ ಆಶಯವಾಗಿದ್ದಿದ್ದರೆ ಅರ್ಜುನನ ಪಾತ್ರವನ್ನು ಕಳೆಗುಂದಿಸಿ ಭೀಮನ ಪಾತ್ರವನ್ನೂ ಕರ್ಣನ ಪಾತ್ರವನ್ನೂ ಕಳೆಯೇರಿಸುವಂತಹ ಸನ್ನಿವೇಶಗಳನ್ನೇಕೆ ಅವನು ಇಷ್ಟೊಂದು ವೈಭವದಿಂದ ಚಿತ್ರಿಸಿದ ? ಇಂತಹ ಅಸಾಮಂಜಸ್ಯಗಳೂ ಅಸಾಂಗತ್ಯಗಳೂ ತಲೆದೋರಿದುವೇಕೆ ?

"ಕತೆಯ ಮಯ್ಗಿಡಲೀಯದೆ" ಇಡೀ ಭಾರತ ಕಥೆಯನ್ನು ಹೇಳುವಲ್ಲಿ ತಾನೇ ಸಮರ್ಥನೆಂದು ತನ್ನನ್ನು ಪಂಡಿತರೇ ಹೊಗಳಿದರೆಂದು ಪಂಪ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಮುಖ್ಯ ಕಥೆಯ ದೃಷ್ಟಿಯಿಂದ ರಸಸ್ಥಾನಗಳಾವುವೆಂಬುದನ್ನರಿತು ಪಾತ್ರಗಳ ಗುಣಸ್ವಭಾವಗಳನ್ನು ತಿಳಿದು ಮೈಯೆಲ್ಲ ಕಣ್ಣಾಗಿ ಕಿರಿದರಲ್ಲಿ ಪಿರಿದರ್ಥವನ್ನು ಅಳವಡಿಸಿ ಹೇಳುವ ಸಾಮರ್ಥ್ಯವಿದ್ದವನು ಅವನು. ಪ್ರಸಿದ್ಧ ಪ್ರಾಚೀನ ಕಾವ್ಯಗಳನ್ನು ಓದಿ ಅವುಗಳಲ್ಲಿನ ಮನನೀಯ ಸಂಗತಿಗಳನ್ನು ತನ್ನ ಸುಪ್ತಚೇತನದಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದವನು. ಅವನ ಕಾವ್ಯಾನುಭವದ ಬೇರುಗಳು ವಾಲ್ಮೀಕಿ, ಭಾಸ, ಕಾಲಿದಾಸ ಮಾಘ, ಭಾರವಿ, ಭಟ್ಟನಾರಾಯಣ, ಬಾಣಾದಿಗಳ ಕಾವ್ಯಗಳಲ್ಲಿದ್ದು ಅವುಗಳ ಸಾರವನ್ನು ಸೆಳೆದುಕೊಂಡು ಸಮಯೋಚಿತವಾಗಿ ತನ್ನ ಕಾವ್ಯದಲ್ಲಿ ಬಳಸಿಕೊಂಡವನು. ತನ್ನ ಕಾವ್ಯವನ್ನು ರಚಿಸುವ ಮೊದಲೇ ಕಥಾಂಶಗಳ ಅನುಕ್ರಮಣಿಕೆಯನ್ನು ಸಿದ್ಧಮಾಡಿಕೊಂಡು ಕಾವ್ಯದ ಪೂರ್ಣ ಸ್ವರೂಪವನ್ನು ಚಿತ್ರಿಸಿಕೊಂಡಿದ್ದವನು. ಇಂತಹ ಕವಿ ಎಚ್ಚರತಪ್ಪಿದನೆಂದೂ ಮರೆಗುಳಿಯೆಂದೂ ಹೇಳಬಹುದೇ? ಹಾಗಾದರೆ ಅವು ಕವಿಯ ಅಚಾತುರ್ಯದಿಂದಾದುವೇ ? ಅಲಕ್ಷ್ಯದಿಂದಾದುವೇ ? ಉದ್ದೇಶಪೂರ್ವಕವಾಗಿ ಆದುವೇ ? ಅನಿವಾರ್ಯವಾಗಿ ಆದುವೇ ? ಅಥವಾ ಅವಕ್ಕೆ ಬೇರೇನಾದರೂ ಕಾರಣವಿರಬಹುದೇ ? ಇದನ್ನು ಕುರಿತು ಪರಿಶೀಲಿಸುವುದೇ ಪ್ರಕೃತ ಲೇಖನದ ಉದ್ದೇಶ.

ಅರಿಕೇಸರಿಯ ಇತಿಹಾಸವನ್ನೂ ಅವನ ವೈಯಕ್ತಿಕ ವಿಷಯಗಳನ್ನೂ ಅರ್ಜುನನ ಕಥೆಯೊಡನೆ ಬೆರೆಸಿರುವುದನ್ನು ಸದ್ಯಕ್ಕೆ ಒತ್ತಟ್ಟಿಗಿಡೋಣ.

ಪಂಪನು ಬರೆದದ್ದು ವಿಕ್ರಮಾರ್ಜುನ ವಿಜಯವೇ, ಸಮಸ್ತ ಭಾರತವೇ? ಅಥವಾ ಬೇರೆ ಮಾತುಗಳಿಂದ ಕೇಳಬೇಕೆಂದರೆ ಪಂಪ ಅರ್ಜುನಪ್ರಾಧಾನ್ಯವುಳ್ಳ ಭಾರತವನ್ನು ಬರೆದನೇ, ಸಮಗ್ರ ಭಾರತವನ್ನು ಬರೆದನೇ ?

ಈ ಪ್ರಶ್ನೆ ವಿಸ್ಮಯವನ್ನು ತರಬಹುದು. ಆದರಿಂದು ಪರಿಶೀಲನಾರ್ಹ.

ಆಶ್ವಾಸಾಂತ್ಯ ಗದ್ಯದಲ್ಲಲ್ಲದೆ ಬೇರೆಲ್ಲೂ ಕಾವ್ಯದ ಒಡಲಲ್ಲಿ ಪಂಪನು ಬರೆದದ್ದು ವಿಕ್ರಮಾರ್ಜುನ ವಿಜಯವೆಂದು ಸೂಚಿತವಾಗಿಲ್ಲ. ಹಲವುಬಾರಿ ಸಮಸ್ತಭಾರತವೆಂದೇ ಸೂಚಿತವಾಗಿದೆ.

i) ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮಂ........ [೧-೧೧]

ii) ಎಸೆಯೆ ಸಮಸ್ತಭಾರತಮನಾವ ನರೇಂದ್ರರುಂ........ [೧೪-೫೩]

iii) ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟೆದುವು ಸಮಸ್ತಭಾರತಮುಂ.. [೧೪-೫೯]

iv) ಬೆಳಗುವೆನಿಲ್ಲಿ ಲೌಕಿಕಮನಲ್ಲಿ...........ಸಮಸ್ತಭಾರತಮುಮಾದಿ ಪುರಾಣಮುಂ [೧೪-೬೦]

v) ಕ್ಷಿತಿಗೆ ಸಮಸ್ತಭಾರತಮುಮಾದಿ ಪುರಾಣಮುಂ........]೧೪-೬೧]

vi) ಇವರ್ಗಳಿನೀ ಭಾರತಂ ಲೋಕಪೂಜ್ಯಂ [೧೪-೬೪]

vii) ಕರಮುಟ್ಕಿರ್ತು ಸಮಸ್ತಭಾರತಕಥಾಸಂಬಂಧಮಂ........[೧೪-೬೫]

ಇಲ್ಲೆಲ್ಲ ಸಮಸ್ತ ಭಾರತವೆಂದರೆ ಸಮಗ್ರಭಾರತವೆಂದು ಅರ್ಥವೇ ಹೊರತು ವಿಕ್ರಮಿಯಾದ ಅರ್ಜುನನ ವಿಜಯವೆಂದಾಗಲಿ, ಅರಿಕೇಸರಿಯ ವಿಷಯದೊಡನೆ "ಸಮಾಸಗೊಂಡ" ಭಾರತವೆಂದಾಗಲಿ ಪಂಪನ ಆಶಯವಿದ್ದಂತೆ ಕಾಣುವುದಿಲ್ಲ.

ವ್ಯಾಸರ ಬಗ್ಗೆ ಪಂಪನಿಗೆ ಪೂಜ್ಯಭಾವನೆಯಿತ್ತು, ಗೌರವವಿತ್ತು ; ಆತನ ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಅವನಿಗೆ ಪೂರ್ಣಶ್ರದ್ಧೆಯಿತ್ತು ಎಂಬುದು ಆತನ ಮಾತುಗಳಿಂದಲೇ ವ್ಯಕ್ತವಾಗುತ್ತದೆ.

"ಶ್ರೌತಮಿದು ಗಂಗಾಸ್ರೋತದವೊಲಳುಂಬಮಾಗಿ........" [೧೪-೫೭]

"ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ,
ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ........" [೧-೧೩]

"ವ್ಯಾಸಪ್ರಣೂತಕೃತಿಯಂ ಸಲೆಪೇೞ್ದು ಸತ್ಕವಿವ್ಯಾಸಸಮಾನ್ವಿತನುಂ........" [೧೪-೬೭]

ಈ ಮಾತುಗಳನ್ನು ನೋಡಿದರೆ ಶ್ರದ್ಧೆಯಿಂದ ಮೂಲವನ್ನನುಸರಣೆ ಮಾಡುವ ಉದ್ದೇಶ ಕಾಣುತ್ತದೆಯಲ್ಲದೆ ಸ್ವ-ಇಚ್ಛೆಯಿಂದ ಕಥೆಯನ್ನು ಏರುಪೇರುಮಾಡುವ ಉದ್ದೇಶ ತೋರುವುದಿಲ್ಲ.

"ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾರತಮನ ಪೂರ್ವಮಾಗೆ ಸಲೆಪೇೞ್ದ ಕವೀಶ್ವರರಿಲ್ಲ, ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ ಎಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ" [೧-೧೧]—ಇದು ಪಂಪನೇ ಹೇಳಿಕೊಂಡಿರುವ ಮಾತು. ಮಹಾಭಾರತ ಕಥೆಯನ್ನು ಸಮಗ್ರವಾಗಿ, ಸಮರ್ಪಕವಾಗಿ, ಅವಿಕಾರವಾಗಿ ಹೇಳಬಲ್ಲವನು ಪಂಪನೊಬ್ಬನೇ ಎಂದು ಪಂಡಿತರ ಭರವಸೆ ಹಾಗೂ ನಿರೀಕ್ಷೆ. ಅದನ್ನು ಪೂರಯಿಸಲೆಂದೇ ಪಂಪ ಹೇಳತೊಡಗಿದುದು.

ತಾನು ಹೇಳಬೇಕಾಗಿರುವುದೇನೆಂದು ಪಂಪ ಮೊದಲೇ ಯೋಚಿಸಿಕೊಂಡು "ಆದಿವಂಶಾವತಾರ ಸಂಭವಂ ರಂಗಪ್ರವೇಶಂ ಜತುಗೃಹದಾಹಂ ಹಿಡಿಂಬ ವಧೆ ಬಕಾಸುರ ವಧೆ........" ಇತ್ಯಾದಿಯಾಗಿ ಪಟ್ಟಿ ಹಾಕಿಕೊಂಡು ಬರೆದ. ಬರೆದು ಮುಗಿಸಿದಮೇಲೆ, ಬರೆದದ್ದನ್ನು ಪರಿಶೀಲಿಸಿ "ಪೆಱವುಮುಪಾಖ್ಯಾನ ಕಥೆಗಳೊಳಮೊಂದುಂ ಕುಂದಲೀಯದೆ ಪೇೞ್ದಿಂ" [೧೪-೫೨] ಎಂದು ತೃಪ್ತಿಪಟ್ಟುಕೊಳ್ಳುತ್ತಾನೆ. ಇದರಿಂದ ಅವನ ಸಮಸ್ತ ಭಾರತದ ಸ್ವರೂಪ ಹೇಗಿತ್ತೆಂದು ತಿಳಿಯುತ್ತದೆ.

"ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟಿದುವು ಸಮಸ್ತಭಾರತಮುಂ ಆದಿಪುರಾಣಮುಂ" [೧೪-೫೯] ಎಂಬಲ್ಲಿ ಸಮಗ್ರಭಾರತದ ಕಥೆಗೇ ಅನ್ವಯವಾಗುವುದು.

"ಕ್ಷಿತಿಗೆ ಸಮಸ್ತಭಾರತಮುಮಾದಿಪುರಾಣಮುಮೀಗಳೊಂದಳಂಕೃತಿಯ ಪೊಲಿರ್ದುವು" [೧೪-೬೧] ಎಂಬಲ್ಲಿಯೂ ಸಮಗ್ರಭಾರತಕ್ಕನ್ವಯವಿರಬೇಕು. ವಿಕೃತ ಭಾರತಕ್ಕೆ ಸಾರ್ವಜನಿಕ ಮನ್ನಣೆ ಹೇಗೆ ದೊರೆತೀತು ?

"ಕರೆಮಟ್ಟಿರ್ತು ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್ ಬರೆಯಲ್ ಕೇೞಲೊಡರ್ಚುವಂಗಂ ಇಡಜಿಲೊಳ್ ತನ್ನಿಷ್ಟಮಪ್ಪನ್ನಮುತ್ತರಮಕ್ಕುಂ" [೧೪-೬೫] ಎಂದು ಕೊನೆಯಲ್ಲಿ ಕಾವ್ಯಪಠನದ ಫಲಶ್ರುತಿಯನ್ನುಗ್ಗಡಿಸುವಾಗಲೂ ಪಂಪ ಸಮಗ್ರ ಭಾರತಕ್ಕನ್ವಯಿಸುವಂತೆ ಹೇಳಿರಬೇಕೇ ಹೊರತು ಅರಿಕೇಸರಿಗೆ ಸಂಬಂಧಿಸಿದ ಕಥೆಯನ್ನು ಓದುವುದರಿಂದ ಎಂದಿರಲಾರದು.

ಸಮಸ್ತಭಾರತ ಆದಿಪುರಾಣ ಈ ಕಾವ್ಯಜೋಡಿಯ ಅನುಪೂರ್ವಿಯನ್ನು ನೋಡಿದರೆ ಪ್ರಥಮತಃ ಸಮಸ್ತಭಾರತವನ್ನು ಬರೆದು ಅನಂತರ ಆದಿಪುರಾಣವನ್ನು ಬರೆದಿರಬೇಕು.

ಸಮಸ್ತಭಾರತವನ್ನು ಬರೆಯುವಂತೆ ಅರಿಕೇಸರಿಯಿಂದ ಪ್ರಾರ್ಥಿಸಲ್ಪಟ್ಟ ಪಂಪ ಒಂದು ವರ್ಷದ ಅವಧಿಯಲ್ಲಿ ಅದನ್ನು ಬರೆದನಂತೆ. "ಬರಿಸದೊಳಗೆ ಸಮೆವಿನೆಗಮಿದಂ" ಎಂದು ಅವನೇ ಹೇಳಿದ್ದಾನೆ. [೧೪-೫೭]

ಆ ಸಮಸ್ತಭಾರತದಲ್ಲಿ ಅರ್ಜುನಪ್ರಾಧಾನ್ಯದ ವಿಷಯವಾಗಲಿ, ಅರಿಕೇಸರಿಯ ಐತಿಹಾಸಿಕ ಅಥವಾ ವೈಯಕ್ತಿಕ ವಿಷಯವಾಗಲಿ ಇದ್ದಿರಲಾರದು. ಅವು ಕವಿಯಿಂದಲೇ ಆದ ಅನಂತರದ ಸಂಯೋಜನೆಯಿರಬೇಕು.

ಆ ಸಮಸ್ತಭಾರತದಲ್ಲೇ ಭೀಮನಿಗೂ ಕರ್ಣನಿಗೂ ಸೂಕ್ತ ಪ್ರಾಶಸ್ತ್ಯ ದೊರೆತಿರುವುದು. ಸಮಗ್ರಭಾರತದ ಕಥೆಯಲ್ಲಿ ದ್ರೌಪದಿಗಾಗಿ ಭೀಮ ಪ್ರತಿಜ್ಞೆಮಾಡುವುದು. ಸೇಡು ತೀರಿಸಿಕೊಳ್ಳುವುದು, ಕೀಚಕನನ್ನು ಬಡಿದು ಕೊಲ್ಲುವುದು ಇಲ್ಲದಿರಲು ಹೇಗೆ ಸಾಧ್ಯ ? ಅರ್ಜುನನನ್ನು ಮಾತ್ರವೇ ನಾಯಕನನ್ನಾಗಿಸಿಕೊಂಡಿದ್ದರೆ ಭೀಮನ ಮಹಿಮೆಯನ್ನು ಅಷ್ಟೊಂದು ವಿಸ್ತಾರವಾಗಿ ವರ್ಣಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

"ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮಂ ಒಂದೇ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎನ್ನುವುದಕ್ಕೆ ಬದಲು ಆಗ ಪಂಪ "....ಒಂದೆ ಚಿತ್ತದಿಂ ನೆನೆವೊಡೆ ಅರಿಗನಂ ನೆನೆಯ, ಅರಿಗನೊಳಾರ್ ದೊರೆ, ಅರಿಗನೇಱು....[೨] ಇತ್ಯಾದಿಯಾಗಿ ಬರೆಯುತ್ತಿದ್ದನೇನೋ !

ಅವನು ರಚಿಸಿದ್ದು ಸಮಸ್ತಭಾರತವಾದ್ದರಿಂದಲೇ ಕಾವ್ಯದ ಕೊನೆಯಲ್ಲಿ ಮುಖ್ಯ ಪಾತ್ರಗಳ ಪಟ್ಟಿಮಾಡುವಾಗ ಮೊದಲು ದುರ್ಯೋಧನ, ಅನಂತರ ಕರ್ಣ ಆಮೇಲೆ, ಭೀಮ, ಶಲ್ಯ, ಭೀಷ್ಮ, ದ್ರೋಣ—ಇವರೆಲ್ಲ ಆದಮೇಲೆ ಅರ್ಜುನ ಬರುವುದು. ಅರ್ಜುನ ನಾಯಕನಾಗಿದ್ದಿದ್ದರೆ ಅವನ ಹೆಸರೇ ಅಗ್ರಸ್ಥಾನದಲ್ಲಿರುತ್ತಿತ್ತು.

ಹಾಗಾಗಿ ಸಮಸ್ತಭಾರತವನ್ನು ಮೊದಲು ಬರೆದು ಅರ್ಜುನನನ್ನು ನಾಯಕನನ್ನಾಗಿಸುವ ಮತ್ತು ಅರಿಕೇಸರಿಯನ್ನು ಅವನೊಡನೆ ಜೊತೆಗೂಡಿಸುವ ವಿಕ್ರಮಾರ್ಜುನ ವಿಜಯದ ಯೋಜನೆ ಅನಂತರ ನಡೆದಿರಬೇಕೆಂದು ತೋರುತ್ತದೆ.

ಕವಿ ತನ್ನ ಸ್ವಂತ ವಿಷಯಗಳನ್ನು ಕಾವ್ಯದ ಪ್ರಾರಂಭದಲ್ಲೇ ಹೇಳಿಕೊಳ್ಳುವುದು ಸಂಪ್ರದಾಯ. ಪಂಪನೂ ಅದರಿಂದ ಹೊರತಲ್ಲ. ಆದಿಪುರಾಣದಲ್ಲಿ ಪ್ರಾರಂಭದಲ್ಲಿಯೇ ಹೇಳಿಕೊಂಡಿದ್ದಾನೆ. "ಸಮಸ್ತಭಾರತ" ರಚನೆ ಮಾಡಿದಾಗಲೂ ಬಹುಶಃ ಪ್ರಾರಂಭದಲ್ಲೇ ಹೇಳಿಕೊಂಡಿದ್ದಿರಬೇಕು. ಅನಂತರ ಅರಿಕೇಸರಿಯ ಆನುವಂಶಿಕ ಮತ್ತು ವೈಯಕ್ತಿಕ ವಿಷಯಗಳನ್ನು ಸಂಯೋಜಿಸಿ ಅದನ್ನು ವಿಕ್ರಮಾರ್ಜುನ ವಿಜಯವನ್ನಾಗಿ ಮಾರ್ಪಡಿಸಬೇಕಾದಾಗ ಅವುಗಳಿಗೆ ಪೀಠಿಕಾಭಾಗದಲ್ಲಿ ಎಡೆಮಾಡಿಕೊಂಡು ಸ್ವವಿಷಯವನ್ನು ಕಾವ್ಯದ ಕೊನೆಗೆ ಸ್ಥಳಾಂತರಿಸಿದಂತೆ ತೋರುತ್ತದೆ. ಆದ್ದರಿಂದಲೇ ಸಮಸ್ತಭಾರತ ರಚನೆಯನ್ನು ಕುರಿತ ವಿಷಯವೆಲ್ಲ ಕೊನೆಯಲ್ಲೇ ಬರುವುದು. ಅರ್ಜುನನೊಡನೆ ಅರಿಕೇಸರಿಯನ್ನು ಹೋಲಿಸುವ ವಿಷಯ ಪ್ರಾರಂಭದಲ್ಲಿ ಬರುತ್ತದೆ. "**ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಿಱಿಯಯಾದುದು ಗುಣಾರ್ಣವ ಭೂಭುಜನಂ ಕಿರೀಟಯೊಳ್**"[೧–೧೪] ಎಂದು ಹೇಳಿ ಮುಂದೆ ೩೬ ಪದ್ಯಗಳಲ್ಲಿ ಅರಿಕೇಸರಿಯ ಆನುವಂಶಿಕ ವಿಷಯಗಳನ್ನು ಹೇಳುತ್ತಾನೆ. ಅದಾದಮೇಲೆ ಪುನಃ "....ಆರೂಢಸರ್ವಜ್ಞನಂ ಸಂದ

ರ್ಜುನನೊಳ್ ಪ್ರೀತಿಯಿಂ ಕಥಾಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ"[೧-೫೧]. ಅರ್ಜುನನ ಕಥೆಯೊಡನೆ ಹೋಲುವ ಈ ಅರಿಕೇಸರಿಯ ಕಥಾಪ್ರಸಂಗವನ್ನು ಹೇಳ ತೊಡಗುತ್ತೇನೆ ಎಂದು ಕಥೆಯನ್ನು ಪ್ರಾರಂಭಿಸುತ್ತಾನೆ. ಇದನ್ನು ಕವಿ ಅನುನಯ ದಿಂದ ಸ್ನೇಹದಿಂದ ಸ್ವಯಂಪ್ರೇರಣೆಯಿಂದ ಮಾಡುತ್ತಿದ್ದಾನೆಯೇ ಹೊರತು ಅರಿಕೇಸರಿಯ ಪ್ರೇರಣೆಯಿಂದಲ್ಲವೆಂಬುದನ್ನು ಗಮನಿಸಬೇಕು.

ಸಮಸ್ತಭಾರತದೊಳಕ್ಕೆ ಅರಿಕೇಸರಿಯ ವಿಷಯವನ್ನು ಪ್ರವೇಶಗೊಳಿಸುವ ಉದ್ದೇಶ ವ್ಯಕ್ತವಾಗಿರುವುದು ಇಲ್ಲೇ. ಅರಿಕೇಸರಿಗಾಗಿ ಅರ್ಜುನನನ್ನು ಕಥಾನಾಯಕ ನನ್ನಾಗಿ ಮಾಡಿಕೊಂಡು, ಸಮಸ್ತಭಾರತವನ್ನು ವಿಕ್ರಮಾರ್ಜುನ ವಿಜಯವನ್ನಾಗಿ ಮಾರ್ಪಡಿಸಿರಬೇಕೆಂದು ತೋರುತ್ತದೆ. ಆ ಮಾರ್ಪಡಿಕೆ ಅಲ್ಲಷ್ಟು ಇಲ್ಲಷ್ಟು ಮೇಲೆ ಮೇಲೆ ನಡೆದಿದೆಯಲ್ಲದೆ ಮೂಲೋತ್ಪಾಟನೆಮಾಡಿ ಮಾಡಿದ್ದಲ್ಲ. ಅರಿಕೇಸರಿಗಾಗಿ ಕಾಣಿಸಿಕೊಳ್ಳುವ ಸನ್ನಿವೇಶಗಳಲ್ಲಿ ಅರ್ಜುನ ಸ್ವಲ್ಪ ಹೆಚ್ಚುಕಾಲ ಕಾಣಿಸಿಕೊಳ್ಳುತ್ತಾನೆ. ಅವನ ತೀರ್ಥಯಾತ್ರೆ ವಿಲಾಸ ವಿಹಾರವಾಗುವುದು, ಸುಭದ್ರಾರ್ಜುನರ ಪ್ರಣಯ ಅತಿಶಯವಾಗುವುದು, ದ್ರೌಪದಿಯನ್ನು ಅರ್ಜುನನೊಬ್ಬನೇ ವಿವಾಹವಾಗುವುದು, ಕೊನೆಗೆ ದ್ರೌಪದಿಯ ಬದಲು ಸುಭದ್ರೆಯೊಡನೆ ಅರ್ಜುನನ ರಾಜ್ಯಾಭಿಷೇಕವಾಗುವುದು; ಉಳಿದ ಕಥೆಯೆಲ್ಲ ಮೊದಲಿನಂತೆಯೇ.

ಪಂಪನ ಕೃತಿ ವಿಕ್ರಮಾರ್ಜುನ ವಿಜಯವಾಗಿ ಮಾರ್ಪಡುವುದಕ್ಕೆ ಮೊದಲು ಸಮಸ್ತಭಾರತವಾಗಿ ಪ್ರಚಾರವಾಗಿತ್ತೆಂಬುದಕ್ಕೆ ಮತ್ತೊಂದು ಸಾಕ್ಷಿ ದೊರೆ ಯುತ್ತದೆ.

ಪಂಪನ ಭಾರತದ ಕೃತಿ ಸಹಸ್ರವರ್ಷಗಳಿಂದ ಕವಿಗಳ ಪಂಡಿತರ ಮೆಚ್ಚಿಗೆ ಪಡೆದು ಪ್ರಚುರವಾಗಿತ್ತಾದರೂ ನಮ್ಮ ಕಾಲಕ್ಕೆ ಅದರ ಪ್ರತಿಗಳದೇ ಅಭಾವ. ನಮಗೆ ಪ್ರಕೃತ ಸಿಕ್ಕಿರುವುದು ಕೇವಲ ಮೂರು ಓಲೆಯ ಪ್ರತಿಗಳು ಮೈಸೂರರನುನೆಯ ಓಲೆಯ ಪ್ರತಿ ಭಂಡಾರ್ಕರ್ ಪ್ರಾಚ್ಯ ಸಂಶೋಧನ ಪುಸ್ತಕ ಭಂಡಾರದ,ಪ್ರತಿ ಹಾಗೂ ಆರಾ ದ ಕೇಂದ್ರ ಜೈನ ಪ್ರಾಚ್ಯ ಗ್ರಂಥ ಭಂಡಾರದ ಪ್ರತಿ. ಆ ಮೂರರಲ್ಲೂ ಗ್ರಂಥಪಾತಗಳೂ ಪ್ರತಿಕಾರರಿಂದಾದ ದೋಷಗಳೂ ವಿಶೇಷ. ಆರಾದ ಪ್ರತಿ ಇದ್ದುದರಲ್ಲಿ ಅತ್ಯಂತ ಪೂರ್ವದ ಪ್ರತಿ, ಅಲ್ಲದೆ ಅದರಲ್ಲಿ ದೋಷಗಳೂ ಉಳಿದವಕ್ಕಿಂತ ಸ್ವಲ್ಪ ಕಡಮೆ. ಮತ್ತೊಂದು ಗಮನಾರ್ಹ ಸಂಗತಿ, ಗ್ರಂಥದ ಎರಡು ಸ್ಥಳಗಳಲ್ಲಿ ಪದ್ಯಗಳು ಹಿಂದುಮುಂದಾಗಿವೆ. ಮೂರೂ ಪ್ರತಿಗಳಲ್ಲಿ ಇದು ಸಮಾನವಾಗಿ ಕಾಣಿಸಿಕೊಂಡಿದೆ. ಇದನ್ನು ನೋಡಿದರೆ ಈ ಮೂರು ಪ್ರತಿಗಳಿಗೂ ಮಾತೃಕೆ ಒಂದೇ ಆಗಿದ್ದು ಅದರಲ್ಲಿ ಈ ದೋಷವಿದ್ದಿರ ಬೇಕೆಂದು ತೋರುತ್ತದೆ.

ಕೀಚಕವಧೆಯ ಪ್ರಸಂಗ ಮೂರೂ ಪ್ರತಿಗಳಲ್ಲಿ ಇರಲಿಲ್ಲ. ಆರಾ ಭಂಡಾರದ ಪ್ರತಿಯಲ್ಲಿ ಮಾತ್ರ ಬೇರೆಯ ಮೂಲದಿಂದ ಅನಂತರ ಸೇರಿಸಲ್ಪಟ್ಟಿರುವುದು ಕಾಣುತ್ತದೆ.

ಆರಾ ಪ್ರತಿಯ ಲೇಖಕನಿಗೆ ಪಂಪನ ಕೃತಿಯ ಎರಡು ಪ್ರತಿಗಳು ದೊರೆತಿದ್ದು ಮೊದಲ ಪ್ರತಿಯಲ್ಲಿಲ್ಲದ ಕೀಚಕ ವಧೆಯ ಪ್ರಸಂಗ ಎರಡನೆಯ ಪ್ರತಿಯಲ್ಲಿ ಕಂಡಾಗ ಬಿಟ್ಟು ಹೋಗಿದ್ದ ಆ ಭಾಗವನ್ನು ಹೊಸದಾದ ಎರಡು ಪತ್ರಗಳನ್ನು ತೆಗೆದುಕೊಂಡು ಅವುಗಳಲ್ಲಿ ಅದನ್ನು ಬರೆದು ಸೇರಿಸಿದ್ದಾನೆ. ಹಾಗೆ ಸೇರಿಸಿದ ಆ ಓಲೆಯ ಅಕ್ಷರಗಳಿಗೆ ಕಪ್ಪಿಟ್ಟಿಲ್ಲ.

ಕೀಚಕವಧೆಯ ಪ್ರಸಂಗ ೮ನೇ ಆಶ್ವಾಸದ ೫೮ ವಚನದಿಂದ ೮೫ ವಚನದವರೆಗೆ ಒಟ್ಟು ೨೭ ಪದ್ಯಗಳು ಹಾಗೂ ನಡುನಡುವಿನ ವಚನಗಳಿಂದ ಕೂಡಿದೆ. ಈ ಭಾಗವೂ ಪಂಪನಿಂದಲೇ ರಚಿತವಾದದ್ದೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ, ದುರ್ಯೋಧನನಿಂದ ಕಳಿಸಲ್ಪಟ್ಟ ವಿಷಖರ್ಪರನೊಡನೆ ಭೀಮ ಕಾದಿದಮೇಲೆ ಏನಾಯಿತೆಂಬುದನ್ನೇ ಹೇಳದೆ "ಅಂತು ಸುಯೋಧನನ" ಎಂದು ನಿಲ್ಲಿಸಿ, "ಮಾತಿಂಗಮರಾಪಗಾನಂದನನಿಂತೆಂದಂ...." [೮-೮೫ವ.] ಎಂದು ಮುಂದುವರಿಸಿದರೆ ಹೊಂದಾಣಿಕೆಯೇ ಬರುವುದಿಲ್ಲ. ಆ ಕೀಚಕ ವಧೆಯ ಭಾಗದ ಸಂಯೋಜನೆಯಿಂದ ಸರಿಹೋಗುತ್ತದೆ.

ಕೀಚಕವಧಾ ಪ್ರಸಂಗ ಭಾರತದ ಕಥೆಯಲ್ಲಿ ಪ್ರಮುಖವಾದ ಒಂದು ಅಂಗ. "ಆದಿವಂಶಾವತಾರ ಸಂಭವಂ...." ಇತ್ಯಾದಿಯಾಗಿ ಪಂಪನು ಕೊಡುವ ಅನುಪೂರ್ವಿಯಲ್ಲಿ 'ಕೀಚಕವಧೆ' ಸೇರಿದೆ. ಸಮಸ್ತಭಾರತದಲ್ಲಿ ಅದು ಸೇರಬೇಕಾದುದು ಸಹಜವೂ ಆಗಿದೆ.

ಅಭಿಮನ್ಯೂತ್ತರೆಯರ ವಿವಾಹದನಂತರ ಕೌರವರೊಡನೆ ಸಂಧಾನ ನಡೆಸಬೇಕೆಂಬ ಮಾತುಗಳನ್ನಾಡುತ್ತಿದ್ದಾಗ ಕ್ರುದ್ಧನಾದ ಭೀಮನನ್ನು ಸಾಂತ್ವನಗೊಳಿಸುತ್ತಾ ಯುಧಿಷ್ಠಿರ "ಬಕಕಿಮ್ಮೀರ ಜಟಾಸುರೋದ್ಧತ ಜರಾಸಂಧಕರ್ಕಳಂ ಸಂದ ಕೀಚಕರಂ ನೂರ್ವರುಮಂ ಪಡಲ್ವಡಿಸಿದೀ ತ್ವಚ್ಚಂಡದೋರ್ದಂಡಂ...." ಎಂದು [೯-೨೫] ಹೇಳುವಲ್ಲಿ ಕೀಚಕವಧೆ ನಡೆದ ಸೂಚನೆ ಬರುತ್ತದೆ.

ಆದ್ದರಿಂದ ಕೀಚಕವಧೆ ಸಮಸ್ತಭಾರತದ ಅಂಗವಾಗಿದ್ದು ಅರ್ಜುನ ಪ್ರಾಮುಖ್ಯದ ವಿಕ್ರಮಾರ್ಜುನ ವಿಜಯ ರಚಿತವಾದಾಗ ಅದನ್ನು ಕವಿಯೇ ಕೈಬಿಟ್ಟಿರಬಹುದಾದ ಸಾಧ್ಯತೆಯುಂಟು.

ಅರಿಕೇಸರಿಯ ವಿಷಯವನ್ನು ಕಾವ್ಯದಲ್ಲಿ ಮಿಶ್ರಗೊಳಿಸುವ ಯೋಜನೆ ಅನಂತರದ್ದು ಎಂಬುದನ್ನು ಕಂಡುಕೊಳ್ಳಲು ವಿಶ್ವಸನೀಯವಾದ ಪ್ರಾಯೋಗಿಕ ಸಾಕ್ಷ್ಯಾಧಾರವನ್ನು ಕೊಡಬಹುದು. ಅರ್ಜುನನ ನೆಪದಲ್ಲಿ ಅರಿಕೇಸರಿಯನ್ನು ಶ್ಲಾಘಿಸುವ ಒಂದೊಂದು ಭಾಗವೂ ಮೂಲಸ್ರೋತದೊಡನೆ ಕರಗಿಹೋಗದೆ ಪ್ರತ್ಯೇಕವಾಗಿಯೇ ಉಳಿಯುತ್ತದೆ– ಪುಸ್ತಕಗಳ ಕಪಾಟಿನಲ್ಲಿ ಹೊಸ ಪುಸ್ತಕಗಳು ಕೆಲವನ್ನು ಹಳೆಯ ಪುಸ್ತಕಗಳ ನಡು ನಡುವೆ ಅಲ್ಲೊಂದು ಇಲ್ಲೊಂದನ್ನು ತೂರಿಸಿಟ್ಟಂತೆ. ಆ ಹೊಸ ಪುಸ್ತಕಗಳನ್ನು ಮತ್ತೆ

ಹೊರಕ್ಕೆ ತೆಗೆದರೆ ಮೊದಲಿದ್ದ ಪುಸ್ತಕಗಳು ಹೇಗೆ ಮೊದಲಿದ್ದಂತೆಯೇ ಅಬಾಧಿತವಾಗಿ ಉಳಿಯುತ್ತವೋ ಹಾಗೆಯೇ ಅರಿಕೇಸರಿಗೆ ಸಂಬಂಧಿಸಿದ ಭಾಗಗಳನ್ನು ತೆಗೆದುಹಾಕಿ ದರೂ ಮೂಲ ಕಥೆಗೆ ಯಾವ ಅಪೋಹವೂ ಆಗದೆ ಹಾಗೆಯೇ ಉಳಿಯುತ್ತದೆಂಬದು ಸೋಜಿಗದ ಸಂಗತಿ.

ಗ್ರಂಥಾರಂಭದಲ್ಲಿ ದೇವತಾಸ್ತುತಿಯ ನೆಪದಲ್ಲಿ ಮಾಡುವ ಉದಾತ್ತನಾರಾಯಣ, ಉದಾರಮಹೇಶ್ವರ, ಪ್ರಚಂಡಮಾರ್ತಾಂಡ, ಸಹಜಮನೋಜರ ಸ್ತುತಿ, ಅನಂತರ ಅರಿ ಕೇಸರಿಗೆ ಸಂಬಂಧಿಸಿದ ಆನುವಂಶಿಕ ವಿಷಯಗಳು ನಾವು ಕಥೆಯನ್ನು ಪ್ರವೇಶಿಸುವುದಕ್ಕೆ ಮೊದಲೇ ಬರುವಂಥವು. ಪ್ರತಿ ಆಶ್ವಾಸದ ಮೊದಲ ಮತ್ತು ಕೊನೆಯ ಪದ್ಯಗಳು ಉದ್ದೇಶಪೂರ್ವಕವಾಗಿ ಲಗತ್ತಿಸಿದವು. ಪ್ರಥಮಾಶ್ವಾಸದ ೧೪೫ನೇ ಪದ್ಯದನಂತರ ಬರುವ ದೇವಸಭೆ ಮತ್ತು ಬ್ರಹ್ಮಸಭೆ ಅರ್ಜುನನಿಗೆ ಅಷ್ಟೋತ್ತರಶತನಾಮಗಳನ್ನಿಡುವ ವಚನ, ದ್ವಿತೀಯಾಶ್ವಾಸದ ೯ನೇ ಪದ್ಯದನಂತರ ಬರುವ ಅರ್ಜುನನ ಗುಣರೂಪ ವರ್ಣನೆಯ ದೊಡ್ಡ ವಚನ ಹಾಗೂ ಎರಡು ವೃತ್ತಗಳು, ೧೪ನೇ ಆಶ್ವಾಸದ ೩೭ನೇ ಪದ್ಯದ ನಂತರ ಬರುವ ಅರಿಕೇಸರಿಯ ಬಿರುದಾವಳಿಗಳನ್ನೊಳಗೊಂಡ ವಚನ— ಇವಿಷ್ಟೂ ಕಥೆಯೊಳಕ್ಕೆ ಹಾಸುಹೊಕ್ಕಾಗಿ ನೆಯ್ದುಕೊಳ್ಳದೆ ಹಾಗೆಯೇ ಸೇರಿಕೊಂಡಿರು ವಂಥವು. ಅವನ್ನು ಹೊರಹಾಕಿದರೂ ಕಥಾಧಾರೆಗೆ ಅಡ್ಡಿಯಿಲ್ಲ. ೧೨ನೇ ಆಶ್ವಾಸದಲ್ಲಿ ಅರ್ಜುನ ತನ್ನನ್ನು ನರಸಿಂಗ ಜಾಕಬ್ಬೆಯರ ಮಗನೆಂದು ಹೇಳಿಕೊಳ್ಳುವ ಅತ್ಯಂತ ಆಕ್ಷೇಪಕರವಾದ ೧೩೨, ೧೩೩ ಈ ಎರಡು ಕಂದ ಪದ್ಯಗಳನ್ನು ತೆಗೆದುಹಾಕಿದರೆ ಅರ್ಜುನನ ಗೌರವವೂ ಉಳಿಯುವುದಲ್ಲದೆ, ಮಾತುಗಳಲ್ಲಿ ಯಾವೊಂದು ವ್ಯತ್ಯಾಸ ವನ್ನೂ ಮಾಡದೆ ಕಥೆಯನ್ನು ಓದಿಕೊಂಡುಹೋಗಬಹುದು. ೫ನೇ ಆಶ್ವಾಸದಲ್ಲಿ ಬರುವ ಅರ್ಜುನ ದ್ರೌಪದಿಯರ ವಿವಾಹದ ವರ್ಣನೆ ಆ ಆಶ್ವಾಸಾಂತ್ಯಕ್ಕೆ ಬರುವುದ ರಿಂದ ಅದರಿಂದಲೂ ಅಡ್ಡಿಯಿಲ್ಲ.

ಇದನ್ನು ನೋಡಿದರೆ ಮೊದಲೇ ರಚಿತವಾಗಿದ್ದ ಭಾರತದ ಕಥೆಯ ನಡುನಡುವೆ ಅರಿಕೇಸರಿಯ ವಿಷಯವನ್ನು ಪ್ರಾಸಂಗಿಕವಾಗಿ ನೆಯ್ದು ಜೋಡಿಸಿರುವಂತೆ ಕಾಣುವುದಿಲ್ಲವೇ ?

ಸಮಸ್ತಭಾರತವನ್ನು ವಿಕ್ರಮಾರ್ಜುನ ವಿಜಯವನ್ನಾಗಿಸುವಾಗ ಕವಿ "ಸಂದ ರ್ಜುನನೊಳ್ ಪೋಲ್ವೀ ಕಥಾಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ" ಎನ್ನು ತ್ತಾನೆ. ಅಂದರೆ ಆಗಲೇ ಇದ್ದಂತಹ ಅರ್ಜುನನ ಕಥೆಗೆ ಹೋಲುವ, ಅದುವರೆಗೆ ೩೭ ಪದ್ಯಗಳಲ್ಲಿ ಹೇಳಿದ ಅರಿಕೇಸರಿಯ ಕಥೆಯನ್ನು ಹೇಳಲು ಹೊರಟಿದ್ದೇನೆ—ಎನ್ನುವುದು ಅವನ ಆಶಯ. ಹಾಗಾಗಿ ಸಮಸ್ತಭಾರತದ ಪದ್ಯಗಳಮೇಲೆ ಅಲ್ಲಲ್ಲಿ ಕೈಯಾಡಿಸಿ ಮಾರ್ಪಾಟುಗಳನ್ನು ಮಾಡಿರುವಂತೆ ತೋರುತ್ತದೆ (ಹಲಗೆ ಬಳಪವ ಪಿಡಿಯದೊಂದ ಗ್ಗಳಿಕೆ ಎಂದೇನೂ ಅವನು ಹೇಳಿಕೊಂಡಿರಲಿಲ್ಲವಲ್ಲ !) ಆ ಮಾರ್ಪಾಡುಗಳನ್ನು ಗುರುತಿ

ಸುವುದು ಸುಲಭವಲ್ಲವಾದರೂ ಒಂದು ನಿರ್ದಿಷ್ಟ ನಿದರ್ಶನ ನಮ್ಮ ಕಣ್ಣು ತೆರೆಸುತ್ತದೆ. ಇಲ್ಲಿ ನೋಡಿ.

ಕಾವ್ಯದ ಪ್ರಾರಂಭದಲ್ಲಿ "ವ್ಯಾಸಮುನೀಂದ್ರರುಂದ್ರವಚನಾಮೃತವಾರ್ಧಿಯ ನೀಸುವೆಂ...."[೧-೧೩] ಎಂಬ ಪ್ರಸಿದ್ಧ ವೃತ್ತ ಬರುತ್ತದೆಯಷ್ಟೇ? ಅದೇ ವೃತ್ತ ಆರಾದ ಓಲೆಯ ಪ್ರತಿಯಲ್ಲಿ "ವ್ಯಾಸಮುನೀಂದ್ರ" ಎಂದೇ ಪ್ರಾರಂಭವಾದರೂ ಬೇರೆಯ ರೀತಿಯಲ್ಲಿದೆ. ಛಂದಸ್ಸು ಅದೇ.ಆರಾದ ಪ್ರತಿ ನಮಗೆ ದೊರೆತಿರುವ ಮೂರೇ ಪ್ರತಿಗಳಲ್ಲಿ ಅತ್ಯಂತ ಪ್ರಾಚೀನವಾದದ್ದೂ ಉಳಿದೆರಡು ಪ್ರತಿಗಳಿಗಿಂತ ಕಡಮೆ ದೋಷಗಳುಳ್ಳದ್ದೂ ಆಗಿದೆಯೆಂಬುದೂ ಇಲ್ಲಿ ಗಮನಿಸಬೇಕಾದ ಅಂಶ. ಆದ್ದರಿಂದ ಇಲ್ಲಿನ ಪಾಠ ಹೆಚ್ಚು ವಿಶ್ವಸನೀಯ.ಆರಾದ ಪದ್ಯವೇ ಮೂಲತಃ ಇದ್ದ ಪದ್ಯವಾಗಿದ್ದು ಅನಂತರ ತನ್ನ ಲೌಕಿಕ ಉದ್ದೇಶದಿಂದ ಕವಿ ಮಾರ್ಪಡಿಸಿಕೊಂಡಿರುವ ಸಂಭವವಿದೆ. ಆರಾದ ಓಲೆಯಲ್ಲಿ ಬರುವ ವೃತ್ತ ಹೀಗಿದೆ :

ಉ|| ವ್ಯಾಸಮುನೀಂದ್ರನೀಶ್ವರನ ಪೇೞ್ದುಪದೇಶದೊಳೊಂದು ದಿಬ್ಯ ಕೈ
ಳಾಸದೊಳರ್ದು ತಿ.... ....
....ಶಿಷ್ಯನೆಯ್ದೆ ಜನಮೇಜಯನೆಂಬ ನೃಪಂಗೆ ಪೇೞ್ದಿಳಾ
ಶಾಸನಮಾಗೆ ಮಾಡಿದನಿಂತಿತಿಹಾಸ ಕಥಾ ಪ್ರಬಂಧಮಂ ||

ವ್ಯಾಸಮುನಿಯಿಂದ ಉಪದೇಶಿಸಲ್ಪಟ್ಟ ಮಹಾಭಾರತದ ಇತಿಹಾಸ ಕಥೆಯನ್ನು ಅವನ ಶಿಷ್ಯನಾದ ವೈಶಂಪಾಯನ ಜನಮೇಜಯರಾಜನಿಗೆ ಹೇಳಿದ. ಅದು ಭೂಮಿಯಲ್ಲಿ ನಟ್ಟ ಶಾಸನದಂತೆ ಸ್ಥಿರವಾಗಿ ನೆಲಸಿತು. ಅದನ್ನು ನಾನು ಹೇಳುತ್ತಿದ್ದೇನೆ ಎಂದು ಪಂಪ ಇಲ್ಲಿ ಸೂಚಿಸಿದ್ದಾನೆ.

ಅರಿಕೇಸರಿಯ ಕಥೆಯನ್ನು ಹೇಳಬೇಕೆಂಬ ಉದ್ದೇಶ ತಲೆದೋರಿದಾಗ ಈ ಮೇಲಿನ ಪದ್ಯದ ಆಶಯವನ್ನೇ ಬದಲಿಸಿ, ಅದನ್ನು ಎರಡು ವೃತ್ತಗಳನ್ನಾಗಿಸಿ, ಎರಡನೆಯದರ ಉತ್ತರಾರ್ಧದಲ್ಲಿ "....ಈ ಕಥೆಯೊಳ್ ತಗುಳ್ಚಿ ಪೊೞಲಿಪೊಡೆನೆಗಲ್ತಿಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್" ಎಂದು ಅರಿಕೇಸರಿಯ ಕಥೆಗೆ ಮೊದಲಿಡುತ್ತಾನೆ.

ಅರಿಕೇಸರಿಯ ಆಸ್ಥಾನವನ್ನು ಸೇರಿದಮೇಲೆ ಪಂಪ ಸಮಸ್ತಭಾರತ ಆದಿಪುರಾಣ ಎರಡನ್ನೂ ಬರೆದಂತೆ ತೋರುತ್ತದೆ. ಮೊದಲು ಬರೆದದ್ದು ಸಮಸ್ತಭಾರತ. ಅರಿಕೇಸರಿಯೇ ಪಂಪನನ್ನು ಬರಮಾಡಿಕೊಂಡು ಅವನಿಂದ ಹೇಳಿಸಿದ ಕಾವ್ಯ ಅದು.

"ಆತಂಗರಿಕೇಸರಿ ಸಂಪ್ರೀತಿಯೆ ಬೞಿಯಟ್ಟಿ ಪಿರಿದನಿತ್ತು ನಿಜಾಭಿಖ್ಯಾತಿಯನಿಳೆಯೊಳ್ ನಿಱಿಸಲ್ಕೀ ತೆಜದಿತಿಹಾಸ ಕಥೆಯುಮಂ ಸೊಪ್ಪಿಸೆ ಕುಱಿತಂ" ಇಲ್ಲಿ **ಇತಿಹಾಸ ಕಥೆಯೆಂದರೆ ಸಮಗ್ರಭಾರತಕಥೆಯೆಂದೇ** ಅರ್ಥ. ಏಕೆಂದರೆ ಒಂದು ಪದ್ಯ ದಾಟಿದ ನಂತರ

ಪಂಪನೇ "ಅದೆಂತೆನೆ" ಎಂದು ಪ್ರಸ್ತಾವನೆ ಹಾಕಿಕೊಂಡು "ಆದಿವಂಶಾವತಾರ ಸಂಭವಂ...." ಇತ್ಯಾದಿಯಾಗಿ ಅದರ ಸ್ವರೂಪವನ್ನು ವಿವರಿಸುತ್ತಾನೆ.

ರಾಮಾಯಣ ಪೌರಾಣಿಕ ಕಾವ್ಯವಾದರೆ ಮಹಾಭಾರತ ಇತಿಹಾಸಕಾವ್ಯ. ಅದು ಇತಿಹಾಸಕಾವ್ಯವೆಂದೇ ಮೊದಲಿಂದಲೂ ಪ್ರಸಿದ್ಧಿ. ಮೇಲೆ ಸೂಚಿಸಿರುವ ಪಂಪನ ಪಾಠಾಂತರದ ಪದ್ಯದಲ್ಲಿಯೂ ಸಹ "ಇತಿಹಾಸ ಕಥಾಪ್ರಬಂಧಮಂ" ಎಂದೇ ಬರುವುದನ್ನು ಗಮನಿಸಬಹುದು.

ಈ ಸಮಸ್ತಭಾರತವನ್ನು ಬರೆಯಲು ಪಂಪನಿಗೆ ಒಂದು ವರ್ಷ ಹಿಡಿಯಿತಂತೆ. "ಬರಿಸದೊಳಗೆ ಸಮೆವಿನೆಗಂ" ಎನ್ನುತ್ತಾನೆ. ಮತ್ತೆ ಮುಂದೆ "ಬೆಳಗುವೆನಿಲ್ಲಿ ಲೌಕಿಕ ಮನಲ್ಲಿ ಜಿನಾಗಮಮಂ...."ಎಂಬ ಪದ್ಯದಲ್ಲಿ "ಒಂದಱುದಿಂಗಳೊಳೊಂದು ಮೂರು ತಿಂಗಳೊಳೆ ಸಮಾಪ್ತಿಯಾದುದೆನೆ" ಎನ್ನುತ್ತಾನೆ. ಕಾವ್ಯರಚನೆಗೆ ಹಿಡಿದ ಕಾಲದ ಬಗ್ಗೆ ಒಂದೇ ಕಡೆಯಲ್ಲಿ ವಿರುದ್ಧ ಹೇಳಿಕೆಗಳೇಕೆ ಬಂದುವು ?

"ಬೆಳಗುವೆನಿಲ್ಲಿ ಲೌಕಿಕಮನ್" ಎಂದರೆ ನಾನಿಲ್ಲಿ ಲೌಕಿಕ ಕಾವ್ಯವನ್ನು ಬೆಳಗುತ್ತಿದ್ದೇನೆ ಎಂದು, "ಅಲ್ಲಿ ಜಿನಾಗಮಮಂ" ಎಂದರೆ ಇನ್ನೊಂದೆಡೆಯಲ್ಲಿ ಜಿನಾಗಮಕಾವ್ಯವನ್ನು ಆಗಲೇ ಬೆಳಗಿದೆ ಎಂದು. ಒಂದಕ್ಕೆ ಆರು ತಿಂಗಳೂ ಇನ್ನೊಂದಕ್ಕೆ ಮೂರು ತಿಂಗಳೂ ಹಿಡಿಯಿತಂತೆ. ಆದಿಪುರಾಣವನ್ನು ಬರೆದಾದಮೇಲೆ ಲೌಕಿಕ ಕಾವ್ಯವನ್ನು ಬರೆದುದರಿಂದ ಮೊದಲನೆಯದಕ್ಕೆ ಆರು ತಿಂಗಳೂ ಎರಡನೆಯದಕ್ಕೆ ಮೂರು ತಿಂಗಳೂ ಬೇಕಾಯಿತು.

ಲೌಕಿಕ ಕಾವ್ಯವೆಂದರೆ ಯಾವುದು ? ಅದು ಸಮಸ್ತಭಾರತವಲ್ಲ. ಸಮಸ್ತ ಭಾರತ ಸಮಗ್ರಭಾರತ. ಅದು ಇತಿಹಾಸಕಾವ್ಯವೂ ಹೌದು. ಪಂಚಮ ಶ್ರುತಿಯೂ ಹೌದು. ಅದೂ ಧಾರ್ಮಿಕ ಕಾವ್ಯವೇ. ವ್ಯಾಸಮಹರ್ಷಿ ಪ್ರಣೀತವಾದ ಈ ಪಂಚಮ ಶ್ರುತಿಯಲ್ಲಿ ಪಂಪನಿಗೂ ಪವಿತ್ರಭಾವನೆಯಿದೆ. ಕೃತಿರಚನೆಗೆ ಒಂದು ವರ್ಷ ಹಿಡಿಯಿತೆಂದು ಹೇಳುವ ಪದ್ಯದಲ್ಲಿಯೇ "ಶ್ರೌತಮಿದು ತನಗೆ ಗಂಗಾಸ್ರೋತದವೊಲಳುಂಬಮಾಗಿ, ಗೆಡೆಗೊಳ್ಳದೆ ವಿಖ್ಯಾತ ಕವಿವೃಷಭವಂಶೋದ್ಭೂತಮೆನಲ್ ಬರಿಸದೊಳಗೆ ಸಮೆವಿನೆಗಂ" ಎಂದಿದ್ದಾನೆ. ಆದ್ದರಿಂದ ಇಲ್ಲಿ **ಲೌಕಿಕ ಕಾವ್ಯವೆಂದರೆ ಲೋಕವ್ಯವಹಾರವನ್ನು ಒಳಗೊಂಡ ಕಾವ್ಯ.** ಸಮಸ್ತಭಾರತದೊಳಕ್ಕೆ ಅರಿಕೇಸರಿಯ ವೃತ್ತಾಂತವನ್ನು ಪ್ರವೇಶಗೊಳಿಸಿ, ಅರ್ಜುನ ಪ್ರಾಧಾನ್ಯವನ್ನಳವಡಿಸಿ ವಿಕ್ರಮಾರ್ಜುನ ವಿಜಯವನ್ನಾಗಿಸಿದ ಕಾವ್ಯ. ಅದಕ್ಕೆ ಮೂರೇ ತಿಂಗಳು ಹಿಡಿದದ್ದು ಸಹಜವೇ.

ಉಪಸಂಹಾರ :

೧. ಪಂಪ ಅರಿಕೇಸರಿ ರಾಜನ ಪ್ರೇರಣೆಯಿಂದ ಸಮಸ್ತಭಾರತವನ್ನು ಬರೆದ. ಅದು ಸಮಗ್ರಭಾರತ. ಅದಾದಮೇಲೆ ಆದಿಪುರಾಣವನ್ನು ಬರೆದ. ಅವೆರಡೂ ಧಾರ್ಮಿಕ ಕಾವ್ಯಗಳು.

೨. ಅನಂತರ, ಅರಿಕೇಸರಿಯ ವ್ಯಕ್ತಿತ್ವ ಅರ್ಜುನನ ವ್ಯಕ್ತಿತ್ವದೊಡನೆ ಹೋಲುತ್ತಿದ್ದುದನ್ನು ಗಮನಿಸಿದ ಪಂಪನಿಗೆ ಅರಿಕೇಸರಿಯ ಕಥೆಯನ್ನು ಅರ್ಜುನನ ಕಥೆಯೊಡನೆ ಸಮೀಕರಿಸಬೇಕೆಂಬ ಪ್ರೇರಣೆಯುಂಟಾಗಿ ಸಮಸ್ತಭಾರತದಮೇಲೆ ಕೈಯಾಡಿಸಿ, ಅರ್ಜುನನನ್ನು ಕಥಾನಾಯಕನನ್ನಾಗಿ ಭಾವಿಸಿ ಅರಿಕೇಸರಿಯ ವೈಯಕ್ತಿಕಾಂಶಗಳನ್ನು ಬೆರಸಿ "ವಿಕ್ರಮಾರ್ಜುನ ವಿಜಯ" ವನ್ನು ನಿರ್ಮಿಸಿದ. "ಬೆಳಗುವೆನಿಲ್ಲಿ ಲೌಕಿಕಮನ್" ಎಂದು ಅದನ್ನೇ ಅವನು ಹೇಳಿರುವುದು.

೩. ಹಾಗೆ ಮೂಲ ಕಾವ್ಯವನ್ನು ಕವಿಯೇ ರೂಪಾಂತರಿಸಿರಬೇಕೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ.

೪. ಕವಿ ಮಾಡಿದ ವ್ಯತ್ಯಾಸಗಳಿಂದ ಭಾರತದ ಕಥೆ ಸ್ವಲ್ಪ ಏರುಪೇರಾಗಿ ಭಾರತ ಕಥೆಯನ್ನು ಮಾತ್ರ ಬಯಸುವವರಿಗೆ ಹಲವೆಡೆ ಅಸಾಮಂಜಸ್ಯಗಳೂ ಅಸಾಂಗತ್ಯಗಳೂ ಕಾಣುವುದು ಸಹಜ.

೫. ಒಂದು ವಿಶೇಷವೆಂದರೆ ಕಾವ್ಯದೊಳಗೆ ಸೇರಿಕೊಂಡ ಅರಿಕೇಸರಿಯ ವೈಯಕ್ತಿಕಾಂಶಗಳೆಲ್ಲ ಹೊರಗಿನಿಂದ ಸೇರಿಸಿದಂತಿದ್ದು ಅವನ್ನು ತೆಗೆದುಹಾಕಿದರೂ ಭಾರತ ಕಥೆಯು ಅಬಾಧಿತವಾಗಿ ಉಳಿಯುತ್ತದೆ.

೦ ೦ ೦ ೦ ೦ ೦

"ಪಂಪನು ಮೊದಲು ಸಮಗ್ರಭಾರತವನ್ನು ಬರೆದು ಅನಂತರ ಅಲ್ಲಲ್ಲಿ ತಿದ್ದುಪಾಟುಗಳನ್ನು ಮಾಡಿ ವಿಕ್ರಮಾರ್ಜುನ ವಿಜಯವನ್ನಾಗಿಸಿರಬಾರದೇಕೆ ?" ಎಂದು ನಾನು ಗುರುವರ್ಯರಾದ ಪ್ರಾಚಾರ್ಯ ಡಿ.ಎಲ್.ಎನ್. ರವರನ್ನು ಒಮ್ಮೆ ಕೇಳಿದಾಗ ಅವರು ಸುಮ್ಮನೆ ಮೆಚ್ಚಿಕೆಯ ಮಂದಹಾಸನನ್ನು ಬೀರಿ "ಸರಿ, ಅದನ್ನು ನೀನು ಸಮರ್ಥನೆ ಮಾಡಿ ತೋರಿಸು" ಎಂದರು. ಅದರ ಬಗ್ಗೆ ಅವರೂ ಅನಂತರ ಚಿಂತನೆಯನ್ನು ನಡೆಸಿದಂತೆ ಕಾಣಲಿಲ್ಲ. ಆದರೂ ಅಂದು ನನ್ನ ಮನಸ್ಸಿನಲ್ಲಿ ಬೀಜಾವಾಪನೆಯಾದ ಚಿಂತನೆಗೆ ಹಲವು ಕಾಲದಲ್ಲಿ ಸಾಕ್ಷ್ಯಾಧಾರಗಳ ಪೋಷಣೆ ದೊರೆಯುತ್ತ ಹೋಯಿತು. ಆ ಚಿಂತನೆಯ ಒಟ್ಟಿನ ಫಲವೇ ಈ ಲೇಖನ.

ನಾನು ಮಾಡಿರುವುದೆಲ್ಲ ಊಹೆಗಳು ಮಾತ್ರ. ಪಂಪನ ಕಾವ್ಯದಲ್ಲೇ ದೊರೆಯುವ ಅಂಶಗಳ ಸಾಕ್ಷ್ಯಾಧಾರದಿಂದಲೇ ಮಾಡಿದ ಊಹೆಗಳು. ಮುಂದೆ ಎಂದಾದರೂ ಪ್ರಾಚೀನ ಓಲೆಯ ಪ್ರತಿಗಳು ದೊರೆತರೆ ಅಥವಾ ಕುರ್ಕ್ಯಾಲ್ ಶಾಸನದಂತಹ ಅಧಿಕೃತ ಬರಹಗಳು ದೊರೆತು ಹೆಚ್ಚಿನ ಮಾಹಿತಿ ಲಭ್ಯವಾದರೆ ಆ ಊಹೆಗಳು ಸತ್ಯವಾಗಬಹುದು ಅಥವಾ ಆಗದಿರಬಹುದು.

ಒಟ್ಟಿನಲ್ಲಿ ನಿರ್ಧಾರವನ್ನು ಸಹೃದಯರ ಪರಾಮರ್ಶೆಗೆ ಬಿಟ್ಟಿದ್ದೇನೆ.

ಕರ್ನಾಟಕದ ಪ್ರಾಚೀನ ದೇವಾಲಯಗಳು —ಒಂದು ಪರಿಶೀಲನೆ

—ಎಂ. ಎನ್. ಪ್ರಭಾಕರ್

ದೇವಾಲಯಗಳ ನಿರ್ಮಾಣ : ಉದ್ದೇಶ ಮತ್ತು ವ್ಯಾಪ್ತಿ :—

ಪ್ರಾಚೀನ ಕರ್ನಾಟಕದಲ್ಲಿ ಅಂದಿನ ರಾಜ ಮಹಾರಾಜರುಗಳ, ಸಾಮಂತರ ಹಾಗೂ ಶ್ರೀಸಾಮಾನ್ಯರ ಶ್ರದ್ಧೆ, ಭಕ್ತಿ, ನಿಷ್ಠೆಗಳೇ ಭವ್ಯ ದೇವಾಲಯಗಳ ಪರಂಪರೆಗೆ ಕಾರಣಮೂಲವಾಯಿತೆನ್ನಬಹುದು. ಅಂದಿನ ದಿನಗಳಲ್ಲಿ ಗಳಿಸಿದಷ್ಟನ್ನು ಧರ್ಮಕ್ಕಾಗಿ ವ್ಯಯಿಸುವ ಧೀಮಂತರಿದ್ದರು. "ಧರ್ಮಮೆನಗಾ ಆಚಂದ್ರಾರ್ಕಮಪ್ಪಂತು ಮಾಳ್ಪೆನಿದೊಂದೇ ಕಡಗಂಡ ಕಜ್ಜಂ"[1] ಎಂದು ದೇವಾಲಯ ನಿರ್ಮಾಣವನ್ನು ವ್ರತವೆಂಬಂತೆ ಸ್ವೀಕರಿಸುತ್ತಿದ್ದರು. ಉಳ್ಳವರು ಸಾಮಾಜಿಕ ಕಾರಣಗಳಿಗಾಗಿ ಧನವನ್ನು ವಿನಿಯೋಗಿಸುವುದು ಧಾರ್ಮಿಕ ಸತ್ಕಾರ್ಯಗಳಲ್ಲೊಂದೆನಿಸಿತ್ತು. ಐಹಿಕ ಸಂಪತ್ತನ್ನು ವ್ಯಯಿಸಿ, ಪುಣ್ಯವೆಂಬ ಸಂಪತ್ತನ್ನು ಗಳಿಸುವ ಕಾತರವೂ ಜನರನ್ನು ದೇವಾಲಯಗಳ ನಿರ್ಮಾಣದಲ್ಲಿ ಉಜ್ಜುಗಿಸಿತ್ತೆನ್ನಬಹುದು. "ಸಂಪತ್ತುಗಳ್ಗಂ ಪುಣ್ಯಮೆ ಮೊದಲಾ ಪುಣ್ಯಕ್ಕೆಲ್ಲ (ವೀ) ಈ*ಶ್ವರ ಪ್ರತಿಷ್ಠೆಯೆ ಮೊತ್ತಮೊದಲ್" ಎಂದೂ "ಪುಣ್ಯಂಗಳುಂ ದೊರೆಕೊಳ್ಗುಂ ಮತ್ತವೆಲ್ಲಾ ಪ್ರತಿಮೆಗಳಂ ಪ್ರತಿಷ್ಠೆಮಾಡಿದೊಡನಾದೇವರ್ಕಳ ಹೆಸರೆಯಕ್ಕು (ವೀ) ಈ*ಶ್ವರ ಪ್ರತಿಷ್ಠೆಮಾಡಿದವನ್ ಈಶ್ವರನೆಯಕ್ಕು" ಎಂದು ನಂಬಿದ್ದರು. "ದಾರುಕರ್ಮ, (ವೀ) ಇ*ಷ್ಟಿಕಾಕರ್ಮ ಶಿಳಾಕರ್ಮಂಗ(ಳೆ)ಳೊ*ಂದಕ್ಕೆ ಸಹಸ್ರಾಧಿಕ ಗುಣಫಳದಾಯಿಗಳೆಂದು ಶಿಳಾಕರ್ಮದಿಂ ದೇವಾಯತನಮಂ ನಿರ್ಮಿಸುವ" [2]ಕಾರ್ಯವನ್ನು ಶ್ರೀಮಂತರು ಶ್ರದ್ಧಾಭಕ್ತಿಗಳಿಂದ ಕೈಗೊಳ್ಳುತ್ತಿದ್ದರು. ದೇವಾಲಯಗಳಷ್ಟೇ ತಮ್ಮ ಹಿರಿಮೆಗರಿಮೆಗಳು ಶಾಶ್ವತವಾಗಿ ನಿಲ್ಲಲಿ ಎಂಬ ಆಸೆಯೂ ಅವರಲ್ಲಿತ್ತು ಎಂದಲ್ಲಿ ತಪ್ಪಾಗಲಾರದು. ದೇವಾಲಯಗಳೊಂದಿಗೆ, ಅವುಗಳ ನಿರ್ಮಾಣವನ್ನು ಕುರಿತು ಹೇಳುವ, ದಿನನಿತ್ಯದ ಕೈಂಕರ್ಯಗಳಿಗಾಗಿ ದಾನದತ್ತಿಗಳನ್ನು ನೀಡುವ, ಸ್ಥಿರೀಕರಿಸುವ ಶಿಲಾಶಾಸನಗಳು, ಮುಂದಿನ ಪೀಳಿಗೆಗೆ ಮಾಹಿತಿಯಾಗಿ, ಮಾದರಿಯಾಗಿ ನಿಂತಿವೆ.

ದೇವಾಲಯ ವಾಸ್ತು ಮತ್ತು ವಾಸ್ತು ಪರಿಭಾಷೆ

ವಿಜಯನಗರದ ದೇವರಾಯನ ಕಾಲದ ಶಾಸನವೊಂದು, ಮೂಡಬಿದರೆಯಲ್ಲಿ

† ಕಂಸದಲ್ಲಿರುವ ಅಕ್ಷರ ಶಾಸನ ಮೂಲವಲ್ಲಿದೆ.

ನಿರ್ಮಾಣಗೊಂಡ ತ್ರಿಭುವನಮಲ್ಲಚೂಡಾಮಣಿ ಚೈತ್ಯಾಲಯವನ್ನು ಕೆಳಕಂಡಂತೆ ಬಣ್ಣಿಸಿದೆ—

ಲಲಿತಸ್ತಂಭಕದಂಬಮಂ ಮದನಕೆಯ್ಯಂ ಲೋವೆಯುಂ ದ್ವಾರಚಿ
ತ್ರಲತಾಬಂಧ ಮನುದ್ಧಭಿತ್ತಿಯನಧಿಷ್ಠಾನಾದಿಯುಂ ಬೇಱಿಬೇ
ಱಿಕೊಲವಿಂ ಬಣ್ಣಿಸಿ ಪೇಳಲಾನಱಿಯೆನೊಂದಂ ಬಲ್ಲೆನಾಚೈತ್ಯಕೌ
ಶಲಮಂ ಭಾವಿಸಿ ವಿಶ್ವಕರ್ಮನಣುಗಿಂದಂ ಶೀರ್ಷಮಂ ತೂಗುವಂ[3]

ವಿಶ್ವಕರ್ಮನು ವಾಸ್ತುಶಾಸ್ತ್ರಕ್ಕೆ ಆಚಾರ್ಯಪುರುಷರಲ್ಲಿ ಒಬ್ಬನೆನಿಸಿದ್ದಾನೆ. ವಿಶ್ವಕರ್ಮನೂ ತಲೆತೂಗುವಂತೆ ತ್ರಿಭುವನಮಲ್ಲ ಚೂಡಾಮಣಿ ಚೈತ್ಯಾಲಯವು ನಿರ್ಮಾಣಗೊಂಡಿತ್ತು. ಭವನಭಕ್ತಿಗೆ ಮೆಚ್ಚಿ ವಿಶ್ವಕರ್ಮನೂ ಧರೆಗಿಳಿದು ದೇವಾಲಯವನ್ನು ಕಂಡರಿಸಿದ ಒಕ್ಕಣೆ[4] ಮತ್ತೊಂದು ಶಾಸನದಲ್ಲಿದೆ. ಪ್ರಸಿದ್ಧರೂವಾರಿಗಳನ್ನು ವಿಶ್ವಕರ್ಮನೆಂದೇ ಹೊಗಳುವುದು ಪ್ರಾಚೀನರಲ್ಲಿದ್ದ ಒಂದು ಸಂಪ್ರದಾಯ. ಶಾಸನಗಳಲ್ಲಿ ಗುರುತಿಸಲ್ಪಟ್ಟ ದಾರುಕರ್ಮ, ಇಷ್ಟಿಕಾಕರ್ಮ, ಶಿಲಾಕರ್ಮ, ಲೋವೆ (ಯಕಲ್ಲು), ದ್ವಾರ(ದ) ಚಿತ್ರಲತಾಬಂಧ, ಭಿತ್ತಿ, ಅಧಿಷ್ಠಾನ, ಲಲಿತಸ್ತಂಭ, ಮದನಿಕೆ ಇತ್ಯಾದಿಗಳು ದೇವಾಲಯ ವಾಸ್ತುವಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳು.

ಪ್ರಾಚೀನ ಸಂಪ್ರದಾಯ, ಶೈಲಿಗಳು

ದೇವಾಲಯ ನಿರ್ಮಾಣದಲ್ಲಿ, ಅಂದು ಪ್ರಚಲಿತದಲ್ಲಿದ್ದ ಶಾಸ್ತ್ರ ಸಂಪ್ರದಾಯಗಳನ್ನು ಆಧರಿಸಿ, ರಚನೆಗಳನ್ನು ಕೈಗೊಳ್ಳುತ್ತಿದ್ದರು. ಶಾಸ್ತ್ರಗ್ರಂಥಗಳ ಕಟ್ಟುಪಾಡು ಶಿಲ್ಪಿಗಳಿಗಿದ್ದರೂ ಮುಕ್ತಭಾವವನ್ನು ಪ್ರದರ್ಶಿಸಲು ಅವಕಾಶವಿತ್ತು. ಈ ಸ್ವಾತಂತ್ರ್ಯವೇ ಹಲವಾರು ಪ್ರಯೋಗ, ಶೈಲಿ, ವಿಕಾಸಕ್ಕೆ ನಾಂದಿಯಾಯಿತು. ಪ್ರಾಚೀನ ದೇವಾಲಯಗಳ ವಾಸ್ತುಪರಂಪರೆ ಹಾಗೂ ವಿಕಾಸದ ಹಾದಿಯನ್ನು ಕರ್ನಾಟಕದ ಐಹೊಳೆ, ಮಹಾಕೂಟ, ಬಾದಾಮಿ ಮತ್ತು ಪಟ್ಟದಕಲ್ಲು ದೇವಾಲಯಗಳಿಂದ ಗುರುತಿಸಬಹುದಾಗಿದೆ. ಪಟ್ಟದಕಲ್ಲಿನ ರಚನೆಗಳಿಂದ ಔತ್ತರೇಯ ಮತ್ತು ದಾಕ್ಷಿಣಾತ್ಯ ಸಂಪ್ರದಾಯಗಳನ್ನು ಗುರುತಿಸಲು ಸಾಧ್ಯವಿದ್ದು ಇಲ್ಲಿಯ ಪಾಪನಾಥ ದೇವಾಲಯ ಎರಡೂ ಸಂಪ್ರದಾಯಗಳ ಸಂಗಮಸ್ಥಾನವೆನಿಸಿದೆ. ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳು, ಮಹಾಕೂಟ, ಪಟ್ಟದಕಲ್ಲು ಹಾಗೂ ಬಾದಾಮಿಗಳಲ್ಲಿದ್ದು ಅನಂತರ ಈ ಸಂಪ್ರದಾಯದ ರಚನೆಗಳು ವಿರಳವೆನಿಸಿದ್ದು, ಕೋಲಾರ, ನಂದಿ, ಶ್ರವಣಬೆಳಗೊಳ, ಕಂಬದಹಳ್ಳಿ ಮುಂತಾದೆಡೆಯಲ್ಲಿ ಪ್ರಮುಖ ದೇವಾಲಯಗಳಿವೆ. ಹಂಪೆಯಲ್ಲಿರುವ ದೇವಾಲಯಗಳೂ ಈ ಸಂಪ್ರದಾಯಕ್ಕೆ ಸೇರುತ್ತವೆ. ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳ ಸಂಖ್ಯೆ ಕಡಿಮೆ ಎನಿಸಿದರೂ, ಈ ಸಂಪ್ರದಾಯ ಶೈಲಿಗಳ ಖಚಿತ

ನೋಟ ಲಭ್ಯವಿದೆ. ಔತ್ತರೇಯ ಸಂಪ್ರದಾಯದ ಕಳಿಂಗ, ಭೂಮಿಜ, ದ್ರಾವಿಡ, ಲತಿನ ಮತ್ತು ವಿಮಾನನಾಗರ ಶೈಲಿಗಳ ದೇವಾಲಯಗಳು ಕರ್ನಾಟಕದಲ್ಲಿವೆ. ಐಹೊಳೆಯ ಹುಚ್ಚುಮಲ್ಲಿಗುಡ್ಡಿ, ಹುಚ್ಚಪ್ಪಯ್ಯನ ಮಠ, ಪಟ್ಟದಕಲ್ಲಿನ ಗಳಗನಾಥ, ಕಾಶಿ ವಿಶ್ವೇಶ್ವರ, ಜಂಬುಲಿಂಗ, ಸಿದ್ದನಕೊಳ್ಳದ ಲಕುಲೀಶ, ಮಹಾಕೂಟದಲ್ಲಿರುವ ಸಂಗಮೇಶ್ವರ ಮುಂತಾದವು ಕಳಿಂಗ ಶೈಲಿಯ ಉದಾಹರಣೆಗಳು. ಭೂಮಿಜ ಶೈಲಿಯ ಪೂರ್ಣ ಪ್ರಮಾಣದ ದೇವಾಲಯಗಳು ಹೊಯ್ಸಳರ ಕಾಲದಲ್ಲಿ ಲಭ್ಯವಿದ್ದು ತುರುವೇಕೆರೆಯ ಮೂಲೆ ಶಂಕರೇಶ್ವರ, ನುಗ್ಗೇಹಳ್ಳಿಯ ಸದಾಶಿವ ದೇವಾಲಯಗಳು ಮಾದರಿಗಳೆನಿಸಿವೆ. ವಿಮಾನನಾಗರ ಶೈಲಿಗೆ ಉದಾಹರಣೆಯಾಗಿ ಹಾನುಗಲ್ಲಿನಲ್ಲಿ ಗಣಪತಿ ದೇವಾಲಯವಿದೆ. ಹತ್ತರಗಿರಿಯ ಶಿಖರೇಶ್ವರ ದೇವಾಲಯದ ಶಿಖರವು ಭಗ್ನಗೊಂಡಿದ್ದರೂ ಲತಿನ ಶೈಲಿಯೆಂದು ಗುರುತಿಸಬಹುದಾಗಿದೆ. ಕರ್ನಾಟಕದಲ್ಲಿ ಅರಳಿದ ಔತ್ತರೇಯ ದ್ರಾವಿಡ ಶೈಲಿಯು ಲಕ್ಕುಂಡಿ, ಕುಕ್ಕನೂರು, ಲಕ್ಷ್ಮೇಶ್ವರ, ಡಂಬಳಗಳಲ್ಲಿ ಆರಂಭದ ಬಣವೆನಿಸಿದ್ದು, ಬಳ್ಳಿಗಾಮೆ, ಕುಬಟೂರು, ತಿಳವಳ್ಳಿ, ಹಾನುಗಲ್ಲು, ಹಾವೇರಿ ಮುಂತಾದೆಡೆಯಲ್ಲಿ ಮತ್ತೊಂದು ಹಂತವನ್ನು ತಿದ್ದಿ ಬೆಳಸಿತು. ಹೊಯ್ಸಳರ ನಾಡಿನಲ್ಲಿ ರಚನೆಗೊಂಡ ದೇವಾಲಯಗಳು ಈ ಶೈಲಿಯ ಮತ್ತೊಂದು ಮಜಲನ್ನು ಪ್ರತಿಬಿಂಬಿಸುತ್ತವೆ.

ದೇವಾಲಯ ವಾಸ್ತು - ಕೆಲವು ಪ್ರಕಟಿತ ಗ್ರಂಥಗಳು

ಕರ್ನಾಟಕವು ಔತ್ತರೇಯ ಹಾಗೂ ದಾಕ್ಷಿಣಾತ್ಯ ಸಂಪ್ರದಾಯಗಳ ತವರೆನಿಸಿದರೂ ಈ ನೆಲದಲ್ಲಿ ರಚನೆಗೊಂಡ ವಾಸ್ತುಶಾಸ್ತ್ರ ಗ್ರಂಥಗಳು ಈವರೆಗೆ ಲಭ್ಯವಿಲ್ಲ. ಕ್ರಿ.ಶ. ಹನ್ನೊಂದನೆಯ ಶತಮಾನದ ಶಾಸನವೊಂದು "ಗುಣಪಾರ್ಯ" (?) ಪ್ರಣೀತ ಶಾಸ್ತ್ರವೊಂದು ಬಳಕೆಯಲ್ಲಿತ್ತು ಎಂದು ಪರೋಕ್ಷವಾಗಿ ಸೂಚಿಸಿದೆ.[5] ದಾಕ್ಷಿಣಾತ್ಯ ಸಂಪ್ರದಾಯಕ್ಕೆ ಸೇರಿದ ಬಹುಪಾಲು ಗ್ರಂಥಗಳು ತಮಿಳುನಾಡಿನಲ್ಲಿ ಪ್ರಕಟಗೊಂಡಿವೆ. ಔತ್ತರೇಯ ಗ್ರಂಥಗಳು ಗುಜರಾತ್ ಸಂಸ್ಥಾನದಿಂದ ಪ್ರಕಟವಾಗಿವೆ. ಮತ್ತೆ ಕೆಲವು ಗ್ರಂಥಗಳು ದೆಹಲಿ, ವಾರಣಾಸಿಗಳಲ್ಲಿ ಪ್ರಕಟಿಸಲ್ಪಟ್ಟಿವೆ. ಕೆಲವು ಗ್ರಂಥಗಳು ಆಗಮಗಳ ಭಾಗವೆನಿಸಿದ್ದು ಸ್ವತಂತ್ರ ಗ್ರಂಥಗಳಂತೆ ಪ್ರಕಟಗೊಂಡಿವೆ. ಅಂಶುಮದ್ಭೇದಾಗಮದ ಭಾಗವೆನಿಸುವ ಕಾಶ್ಯಪಶಿಲ್ಪವನ್ನು ಈರೀತಿ ಗುರುತಿಸಬಹುದು.[6] ಹಯಶೀರ್ಷ ಪಾಂಚರಾತ್ರಾಗಮದಲ್ಲಿ ದೇವಾಲಯ ರಚನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಾಯವಿದ್ದು ಇದು ಔತ್ತರೇಯ ಸಂಪ್ರದಾಯವೆಂದು ಗುರುತಿಸಬಹುದು.[7] ಪೂರ್ವಕಾಮಿಕಾಗಮವು ದಾಕ್ಷಿಣಾತ್ಯ ಗ್ರಂಥವೆನಿಸಿದರೂ ಔತ್ತರೇಯ ದೇವಾಲಯದ ಕಿಂಚಿತ್ ವಿವರಣೆಯನ್ನು ಇದರಲ್ಲಿ ಕಾಣಬಹುದು.[8] ಮಾನಸಾರ, ಮಯಮತ, ಈಶಾನ ಶಿವಗುರುದೇವ ಪದ್ಧತಿ; ಶಿಲ್ಪರತ್ನ, ಪೂರ್ವಕಾಮಿಕಾಗಮ, ಪಾದ್ಮಸಂಹಿತೆ, ಕಾಶ್ಯಪಶಿಲ್ಪ, ಅಜಿತಾಗಮ, ರೌರವಾಗಮ, ವಿಮಾನಾರ್ಚನಾಕಲ್ಪ ಇತ್ಯಾದಿಗಳು

ದಾಕ್ಷಿಣಾತ್ಯ ಸಂಪ್ರದಾಯದ ಗ್ರಂಥಗಳು. ಪುರಾಣಾದಿಗಳಲ್ಲಿಯೂ ವಾಸ್ತು ವಿವರಣೆಗಳುಳ್ಳ ಅಧ್ಯಾಯಗಳಿವೆ. ಅಗ್ನಿಪುರಾಣ, ಮತ್ಸ್ಯಪುರಾಣ, ವಿಷ್ಣುಧರ್ಮೋತ್ತರ ಪುರಾಣಗಳಲ್ಲಿ ದೇವಾಲಯ ವಾಸ್ತುವಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಾಯಗಳಿವೆ. ಸಮರಾಂಗಣ ಸೂತ್ರಧಾರ, ಅಪರಾಜಿತ ಪೃಚ್ಛಾ, ಪ್ರಾಸಾದ ಮಂಡನ, ದೀಪಾರ್ಣವ, ವಿಶ್ವಕರ್ಮ ಪ್ರಕಾಶ, ರಾಜಾವಲ್ಲಭಮಂಡನ ಇತ್ಯಾದಿ, ಔತ್ತರೇಯ ಸಂಪ್ರದಾಯದ ಗ್ರಂಥಗಳು ಪ್ರಕಟಗೊಂಡಿವೆ.

ಪೂರ್ವಸೂರಿಗಳ ದೃಷ್ಟಿಕೋನ ಹಾಗೂ ಲೇಖನದ ಉದ್ದೇಶ

ಕರ್ನಾಟಕದ ವಾಸ್ತುವಿಗೆ ಸಂಬಂಧಿಸಿದಂತೆ ಕ್ರಿ.ಶ. 1866ರಲ್ಲಿ ಪ್ರಕಟಗೊಂಡ ಮೆಡೋಸ್ ಟೈಲರ್‌ರವರ "ಆರ್ಕಿಟೆಕ್ಚರ್ ಆಫ್ ಧಾರವಾರ್ ಅಂಡ್ ಮೈಸೂರ್" ಬಹುಶಃ ಮೊದಲಗ್ರಂಥ.[9]

ವಾಸ್ತುಶಾಸ್ತ್ರಗಳನ್ನಾಧರಿಸಿದ ದೇವಾಲಯ ವಾಸ್ತುವಿನ ಅಧ್ಯಯನ ಕ್ರಿ. ಶ. 1828ರಲ್ಲಿ ರಾಂರಾಜ್‌ರವರಿಂದ ಪ್ರಾರಂಭಗೊಂಡಿತು. ಇವರ ಅಧ್ಯಯನ ವ್ಯಾಪ್ತಿಯಲ್ಲಿ 'principally taken from the carnatic"[10] ಎಂದಿದ್ದರೂ ಈ ವಿವರಗಳು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಮಧುರೈ ಮುಂತಾದ ಸ್ಥಳಗಳಿಗೆ ಸಂಬಂಧಿಸಿವೆ. ಕರ್ನಾಟಿಕ್ ಎನ್ನುವಲ್ಲಿ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯನ್ನು ಗಮನಿಸಬೇಕು. ಇವರು ಇಂದಿನ ಕರ್ನಾಟಕದ ವ್ಯಾಪ್ತಿಯನ್ನು ಬಳಸಿಲ್ಲವೆಂದು ಖಚಿತವಾಗಿ ಹೇಳಬಹುದು. ಕ್ರಿ.ಶ. 1876ರಲ್ಲಿ ಪ್ರಕಟವಾದ ಜೇಮ್ಸ್‌ಫರ್ಗುಸನ್‌ರವರ "ಹಿಸ್ಟರಿ ಆಫ್ ಇಂಡಿಯನ್ ಅಂಡ್ ಈಸ್ಟರ್ನ್ ಆರ್ಕಿಟೆಕ್ಚರ್" ಗ್ರಂಥವು ದ್ರವಿಡಿಯನ್ ಮತ್ತು ಚಾಲುಕ್ಯನ್ ವಾಸ್ತುಶೈಲಿಗಳ ಅಡಿಯಲ್ಲಿ ಕರ್ನಾಟಕದ ದೇವಾಲಯಗಳನ್ನು ವ್ಯಾಪಕವಾಗಿ ಗುರುತಿಸಿದೆ. "ಭಾರತದಲ್ಲಿ (ದೇವಾಲಯ) ವಾಸ್ತು ಒಂದು ಜೀವಂತಕಲೆ"[11] ಎಂದು ಫರ್ಗುಸನ್ ಗುರುತಿಸುತ್ತಾರೆ. ವಾಸ್ತು ವಿವರಣೆಯನ್ನು ಒದಗಿಸುವಾಗ, ತಾಂತ್ರಿಕ ಪದಗಳನ್ನು ಬಳಸದ, ಸರಳವಾದ, ತದ್ವತ್ತಾಗಿ ಚಿತ್ರಿಸುವ ಕಥನ ಶೈಲಿಯನ್ನು ಬಳಸುತ್ತಾರೆ.[12] ಈ ಗ್ರಂಥದ ಹಾದಿಯಲ್ಲಿ ಪ್ರಕಟಗೊಂಡ ಹಲವಾರು ಗ್ರಂಥಗಳಿವೆ. ಶಾಸ್ತ್ರಸಂಪ್ರದಾಯಗಳು ದೇವಾಲಯಗಳ ಶೈಲಿಗಳನ್ನು ಅರ್ಥೈಸುವಲ್ಲಿ ಗೊಂದಲಕ್ಕೆ ಕೆಡವಿದ್ದುಂಟು. ಆದರೂ ವಾಸ್ತು ಶಾಸ್ತ್ರರೀತ್ಯಾ ಗುರುತಿಸುವ ಕಾರ್ಯ ನಿರಂತರವಾಗಿ ನಡೆದಿದ್ದು ಕರ್ನಾಟಕದ ದೇವಾಲಯಗಳಿಗೆ ಸಂಬಂಧಿಸಿದಂತೆ ಎರಡು ಗ್ರಂಥಗಳನ್ನು ಹೆಸರಿಸಬಹುದು—ಕ್ರಿ.ಶ. 1969ರಲ್ಲಿ ಪ್ರಕಟಗೊಂಡ ಕೆ. ವಿ. ಸೌಂದರರಾಜನ್‌ರವರ "ಅರ್ಲಿ ಟೆಂಪಲ್ ಆರ್ಕಿಟೆಕ್ಚರ್ ಇನ್ ಕರ್ನಾಟಕ ಅಂಡ್ ಇಟ್ಸ್ ರಾಮಿಫಿಕೇಷನ್ಸ್"—ಮೂರು ಉಪನ್ಯಾಸ ಮಾಲಿಕೆಯ ಮೊದಲ ಗ್ರಂಥ; ಕ್ರಿ. ಶ. 1977ರಲ್ಲಿ ಪ್ರಕಟವಾದ ಎಂ. ಎ. ಢಾಕೆಯವರ ಇಂಡಿಯನ್ ಟೆಂಪಲ್ ಫಾರ್ಮ್ಸ್ ಇನ್ ಕರ್ನಾಟಕ, ಇನ್‌ಸ್ಕ್ರಿಪ್‌ಷನ್ಸ್ ಅಂಡ್ ಆರ್ಕಿಟೆಕ್ಚರ್"—ಎರಡನೆಯ ಗ್ರಂಥ.

ಇವೆರಡೂ ಗ್ರಂಥಗಳು ಕರ್ನಾಟಕದ ದೇವಾಲಯ ವಾಸ್ತುಪಿನ ಅಧ್ಯಯನದಲ್ಲಿ ಪ್ರಮುಖ ಘಟ್ಟಗಳಾಗಿ ಸೂಚಿಸಬಹುದು. ಕೆ. ವಿ. ಸೌಂದರರಾಜನ್‌ರವರ ಗ್ರಂಥದ ಪ್ರಸ್ತಾವನೆಯಲ್ಲಿ ಪಿ. ಬಿ. ದೇಸಾಯಿಯವರು "Karnataka, in art and architecture, was a unifying and rejuvenating bridge between northern and southern traditions"[13] ಎಂದು ಗುರುತಿಸುತ್ತಾರೆ. ಇಂತಹ ಹೇಳಿಕೆಗಳು ಹಲವಾರು ಗ್ರಂಥಗಳಲ್ಲಿ ದೊರೆಯುತ್ತವಾದರೂ ಪ್ರಮಾಣೀಕರಿಸುವ ಯತ್ನಗಳು ಸಾಲದು. ಇದೇ ಗ್ರಂಥದಲ್ಲಿ ಕದಂಬನಾಗರ, ರೇಖಾನಾಗರ, ದಾಕ್ಷಿಣಾತ್ಯ ವಿಮಾನ, ಔತ್ತರೇಯ ಪ್ರಾಸಾದ ಇತ್ಯಾದಿಯಾಗಿ ಶೈಲಿ ಸಂಪ್ರದಾಯಗಳನ್ನು ವರ್ಗೀಕರಿಸಿಕೊಂಡಿದ್ದಾರೆ. ಸಾಂಪ್ರದಾಯಿಕವೆನ್ನುವ ನಾಗರ, ದ್ರಾವಿಡ, ವೇಸರಗಳ ವರ್ಗೀಕರಣಕ್ಕೆ ಚಾಲನೆ ದೊರೆತಿದೆಯಾದರೂ ಖಚಿತವಾದ ನಿರ್ಣಾಯಕ ಘಟ್ಟ ತಲುಪಿಲ್ಲ. ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳ ಬಗ್ಗೆ ಸ್ಪಷ್ಟ ಸೂಚನೆಯಿಲ್ಲ. ಎಂ. ಎ. ಢಾಕೆಯವರ ಗ್ರಂಥದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಹಾಗೂ ಹೊಯ್ಸಳರ ಕಾಲದ ಶಾಸನ ಮತ್ತು ದೇವಾಲಯಗಳನ್ನಾಧರಿಸಿ ಶೈಲಿಗಳನ್ನು ಗುರುತಿಸುವ ಪ್ರಯತ್ನವಿದೆ. ಈ ಕಾಲಕ್ಕೆ ದಾಕ್ಷಿಣಾತ್ಯ ಹಾಗೂ ಔತ್ತರೇಯ ಸಂಪ್ರದಾಯಗಳು ನಿಚ್ಚಳವಾಗಿ ಕವಲೊಡೆದಿದ್ದವು. ಢಾಕೆಯವರು ಈ ಸಂಪ್ರದಾಯಗಳನ್ನು ಪ್ರತ್ಯೇಕವಾಗಿ ಗಮನಿಸದೆ, ಎರಡೂ ಸಂಪ್ರದಾಯಗಳ ಗ್ರಂಥೋಕ್ತಿಗಳನ್ನು ಒಟ್ಟಿಗೆ ಸ್ವೀಕರಿಸಿ ನಿರ್ಣಯಕ್ಕೆ ತೊಡಗುತ್ತಾರೆ. ಇದರಿಂದ, ದ್ರಾವಿಡ, ವೇಸರ ಶೈಲಿಗಳನ್ನು ಸಮರ್ಪಕವಾಗಿ ಗುರುತಿಸಲಾಗದೆ ಎಡವುತ್ತಾರೆ. ವೇಸರವೆಂದು ಗುರುತಿಸುವಲ್ಲಿ ಸ್ವಯಂಭುವಾಗಮ, ಕಾರಣಾಗಮ, ಅಜಿತಾಗಮ, ಸುಪ್ರಭೇದಾಗಮ, ದೀಪ್ತಾಗಮ, ಮಾರೀಚ ಸಂಹಿತಾ, ಪಾದ್ಮಸಂಹಿತಾ, ಜಿನಸಂಹಿತಾ, ಮಯಮತ, ಮಾನಸಾರ ಇತ್ಯಾದಿಗಳ ವಿವರಣೆಯನ್ನು ಗುರುತಿಸುತ್ತಾರೆ. ಈ ಗ್ರಂಥಗಳು ವಿವರಿಸುವ ವೃತ್ತಾಕಾರಕಂಠ, ಶಿಖರಗಳ ಉಲ್ಲೇಖಗಳನ್ನು ಗಮನಿಸಿದ್ದರೂ, ಕಾಮಿಕಾಗಮ ಗ್ರಂಥದಲ್ಲಿರುವ 'ಸಂಕರ' ಅಥವಾ 'ಮಿಶ್ರ' ಲಕ್ಷಣವನ್ನು ಗುರುತಿಸಿ ವೇಸರ ಶೈಲಿಯನ್ನು ಹೆಸರಿಸಿದ್ದಾರೆ. ಸ್ಟೆಲ್ಲಾ ಕ್ರಾಂರಿಚ್‌ರವರೂ ಸಹ ಈ ರೀತಿ ಗುರುತಿಸಿದ್ದು, ಬಹುಶಃ ಹಿರಿಯ ವಿದ್ವಾಂಸರ ನಿರ್ಣಯದಿಂದ ಹೊರಬರಲಾಗದೆ ಕಾಮಿಕಾಗಮದ ವಿವರಣೆಯನ್ನೇ ವೇಸರ ಶೈಲಿಗೆ ಅನುಮೋದಿಸುತ್ತಾರೆ[14]. ಇದೇ ಗ್ರಂಥದಲ್ಲಿ ನಾಗರ ಶೈಲಿಯಡಿಯಲ್ಲಿ ಲತಿನ ಜಾತಿಯನ್ನು ಸಮರ್ಪಕವಾಗಿ ಗುರುತಿಸಿದ್ದು ಬಹುಶೃಂಗರಚನೆಯನ್ನು ಶೇಖರಿ ಪ್ರಭೇದವೆನ್ನುತ್ತಾರೆ. ಪ್ರಾಸಾದ ಮಂಡನ ಗ್ರಂಥದ ಪ್ರಕಾರ, ಬಹುಶೃಂಗರಚನೆಯು ವಿಮಾನನಾಗರ ಶೈಲಿಯೆಂದು ಖಚಿತವಾಗಿ ಗುರುತಿಸಬಹುದಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕರ್ನಾಟಕದಲ್ಲಿರುವ ದೇವಾಲಯಗಳನ್ನು ವಾಸ್ತುಶಾಸ್ತ್ರಗಳ ಬೆಳಕಿನಲ್ಲಿ ಗುರುತಿಸಲು ಯತ್ನಿಸಲಾಗಿದೆ. ಕೆಲವೆಡೆ ಹಿರಿಯ ವಿದ್ವಾಂಸರ ಅಭಿಪ್ರಾಯಗಳನ್ನು ಯಥಾವತ್ತಾಗಿ ಸ್ವೀಕರಿಸಲಾಗಿದೆ.

ದೇವಾಲಯ ವಾಸ್ತು : ಆರಂಭ ಹಂತ

ದೇವಾಲಯ ವಾಸ್ತುವಿನ ಆರಂಭ ಹಂತವನ್ನು ಗುರುತಿಸುವಾಗ, ಐಹೊಳೆಯ ಜ್ಯೋತಿರ್ಲಿಂಗ ಗುಡಿ, ಮಹಾಕೂಟದ ಪುಷ್ಕರಣಿಯೊಳಗಿರುವ ಮಂಡಪ ಮುಂತಾದವನ್ನು ಮೊದಲಹಂತವೆಂದೂ ಮಂಡಪವೆಂದೂ ಅತ್ಯಂತ ಸರಳರಚನೆಯೆಂದೂ ಗುರುತಿಸಲ್ಪಟ್ಟಿದೆ[15]. ಮಂಡಪವೆಂದು ವ್ಯಾಖ್ಯಾನಿಸುವ ವಾಸ್ತು ವಿವರಣೆಯನ್ನೂ ಆರಂಭ ಹಂತವೆನ್ನುವ ಔಚಿತ್ಯವನ್ನೂ ಗಮನಿಸಬೇಕು. "ಮಂಡಂ ಸುಭೂಷಣಂ ತಂ ಪಾತೀತಿ ಮಂಡಪಮಿಷ್ಯತೇ" ಇದು ಮಯಮತೋಕ್ತಿ[16]. ಮಂಡಪದ ವಿವರಣೆ ಈ ರೀತಿ ಇದ್ದಲ್ಲಿ ಮಂಡಪವನ್ನು ಆರಂಭ ಹಂತವೆಂದು ಗುರುತಿಸುವುದು ಸಮಂಜಸವೇ? ಎಂಬ ಪ್ರಶ್ನೆ ಎದುರಾಗುತ್ತದೆ. ದೇವಾಲಯಗಳ ಮೂಲವನ್ನು ಗುರುತಿಸುವ ಮುನ್ನ ಸಾಮಾನ್ಯ, ಸರಳ ವಾಸ್ತು ರಚನೆಗಳನ್ನು ಗಮನಿಸಬಹುದು. ದೇವಾಲಯಗಳ ಕಲ್ಪನೆಮಾಡುವ ಮುನ್ನ ಇನ್ನಿತರ ವಾಸ್ತು ರಚನೆಗಳೂ ಖಚಿತ ಆಕಾರ ತಳೆದಿದ್ದವು ಎಂದು ತಿಳಿಯಬೇಕಾದ ಅಗತ್ಯವಿದೆ.

ಶಾಲಾ :

ಜೀವಿಗಳ ವಸತಿಯೋಗ್ಯ ಸ್ಥಳಕ್ಕೆ ವಾಸ್ತು ಎಂದು ಹೆಸರು. "ವಸಂತಿ ಪ್ರಾಣಿನೋऽತ್ರೇತಿ ವಾಸ್ತುಶಬ್ದವ್ಯುತ್ಪತ್ತಿಃ[17]. ಪದವ್ಯುತ್ಪತ್ತಿಯಲ್ಲಿ ಈ ಅರ್ಥವು ಗುರುತಿಸಲ್ಪಟ್ಟಿದ್ದು ವಸತಿಯಧ್ಯೇಯವು ತಲೆಗೊಂದು ಸೂರಿನ ಅವಶ್ಯಕತೆಯನ್ನು ಗುರುತಿಸುತ್ತದೆ. ವಸತಿಯ ನೆಲೆಯನ್ನು ಹುಡುಕುವಲ್ಲಿ ಮೇಲ್ಛಾವಣಿ ಅಥವಾ ಹೊದಿಕೆ ಇರಬೇಕಷ್ಟೆ. ಗೃಹ ಅಥವಾ ಗುಹೆ ಮೇಲ್ಗಡೆಯಿಂದ ಮುಚ್ಚಲ್ಪಟ್ಟದ್ದು. ಒಂದು ಮಾನವ ನಿರ್ಮಿತ ; ಮತ್ತೊಂದು ನಿಸರ್ಗದ ಕೊಡುಗೆ. ಶಿವಗಂಗೆಯ ಹೊಯ್ಸಳರ ಕಾಲದ ದೇವಾಲಯವು ಗುಹೆಯನ್ನು ಆಧರಿಸಿದೆ. ಸರಳ ವಾಸ್ತುರಚನೆಯಲ್ಲಾಗಲಿ, ದೇವಾಲಯ ರಚನೆಯಲ್ಲಾಗಲಿ ಆರಂಭ ಹಂತವನ್ನು ಗುರುತಿಸುವಾಗ ಮೇಲ್ಗಡೆಯಿಂದ ಮುಚ್ಚಿದ್ದು ಎಂದು ಗುರುತಿಸಬೇಕು. ಈ ಅರ್ಥವನ್ನು 'ಶಾಲಾ' ಪದವು ವಾಖ್ಯಾನಿಸುತ್ತದೆ". ಗೃಹಮೇಕಂ ತು ಯಚ್ಛನ್ನಂ ಸರ್ವಂ ಶಾಲೇತಿ ಸಾಸ್ಮೃತಾ"[18] ಇದು ಶಾಲಾ ಪದದ ವಿವರಣೆ. 'ಯಚ್ಛನ್ನಂ' ಎನ್ನುವಲ್ಲಿ ಮೇಲ್ಗಡೆ ಹೊದಿಸಿದ್ದು ಎಂದಷ್ಟೇ ಅರ್ಥ. ಗೃಹವೆನ್ನುವ ಪದ ತಾಂತ್ರಿಕ ಪರಿಮಿತಿಯಲ್ಲಿ ಪೂರ್ವದಿಕ್ಕಿನಲ್ಲಿ ದ್ವಾರವುಳ್ಳದ್ದು ಎಂದು ಸೂಚಿಸುತ್ತದೆ.—'ಪೂರ್ವೇಚೈಕ ದ್ವಾರಯುತಂ ಗೃಹಸಂಜ್ಞಂ ತದುಚ್ಯತೇ'[19] ದೇವತಾಪ್ರಾಸಾದಗಳ ರಚನೆಗಳು ಸಾಮಾನ್ಯವಾಗಿ ಪೂರ್ವದಿಕ್ಕಿಗೆ ದ್ವಾರವುಳ್ಳದ್ದರಿಂದ ಗರ್ಭಗೃಹವೆಂದೂ ಕರೆಯಲ್ಪಡುತ್ತವೆ. ವಾಸ್ತು ರಚನೆಗಳ ಆರಂಭ ಹಂತದಲ್ಲಿ ಶಾಲಾ ರಚನೆಯೇ ಪ್ರಾರಂಭವೆಂದು ಗಮನಿಸಬಹುದು.

ಚತುಷ್ಕ :

ಔತ್ತರೇಯ ಗ್ರಂಥಗಳು ಶಾಲಾ ರಚನೆಯನ್ನು ವಿವರಿಸುತ್ತಾ "ಚತ್ವಾರೋಮಧ್ಯ ಗಾಸ್ತಂಭಾಯತ್ರತಸ್ಯಾಚತುಷ್ಕಕಂ"[20] ಎಂದು ಚತುಷ್ಕ ರಚನೆಯನ್ನು ಸೂಚಿಸುತ್ತದೆ. ಮಂಡಪ ರಚನೆಯಲ್ಲಿ "ಚತುಷ್ಕಶ್ಚಚತುಸ್ತಂಭೈಃ"[21] ಎಂದಿದ್ದು, ಚತುಷ್ಕವು ಶಾಲಾ ಹಾಗೂ ಮಂಡಪಗಳ ಮಧ್ಯಂತರ ಅವಸ್ಥೆ ಎಂದು ಗಮನಿಸಬಹುದು. ನಿಸರ್ಗಾ ಧಾರಿತ ವಸತಿಯನಂತರ ಸ್ವತಂತ್ರರಚನೆಗಳಿಗೆ ಕೈಹಾಕಿದಾಗ ನಾಲ್ಕುಸ್ತಂಭಗಳ ಮೇಲೆ ಮೇಲ್ಛಾವಣಿಯುಳ್ಳ ರಚನೆಯೇ ಮೂಲವೆನಿಸುತ್ತದೆ. ಆದ್ದರಿಂದ ನಾಲ್ಕು ಸ್ತಂಭಗಳ ಚತುಷ್ಕವು ಶಾಲಾ ರಚನೆಯನಂತರ ಮುಂದಿನ ಹಂತವೆನಿಸುತ್ತದೆ. ಚತುಷ್ಕ ಚತುಷ್ಕಿ, ಚತುಷ್ಕಿಕಾ ಮುಂತಾಗಿಯೂ ಶಾಸ್ತ್ರ ಗ್ರಂಥಗಳಲ್ಲಿ ಪ್ರಯೋಗ ಗಳಿವೆ. ಚತುಷ್ಕದ ಸ್ತಂಭಗಳು ಆಧಾರ ಹಾಗೂ ರಕ್ಷಣೆ ನೀಡುವಲ್ಲಿ ಪ್ರಮುಖಪಾತ್ರ ವಹಿಸುತ್ತವೆ. ಮಹಾಕೂಟದಲ್ಲಿರುವ ಪುಷ್ಕರಿಣಿಯ ನಾಲ್ಕು ಸ್ತಂಭಗಳ ಮಂಡಪ, ಜ್ಯೋತಿರ್ಲಿಂಗ ಗುಡಿಗಳು ಗುಂಪಿನಲ್ಲಿರುವ ನಂದಿಮಂಡಪ ಇವುಗಳನ್ನು ಚತುಷ್ಕ ಎಂದು ಗುರುತಿಸಲು ಸಾಧ್ಯವಿದೆ. ಗರ್ಭಗೃಹವೊಂದರಿಂದ ದೇವಾಲಯದ ಕಲ್ಪನೆ ಸಾಧ್ಯ. ಚತುಷ್ಕವೂ ಭಿತ್ತಿಯನ್ನಳವಡಿಸಿಕೊಂಡು ದೇವಾಲಯವೆಂದು ಗುರುತಿಸಲು ಸಾಧ್ಯವೆನಿಸಿತು.

ಮಂಡಪ :

ಚತುಷ್ಕದನಂತರ ಮಂಡಪವನ್ನು ಮುಂದಿನ ಹಂತವೆನ್ನಬಹುದು. ಬಹುಸ್ತಂಭ ವುಳ್ಳದ್ದು ಮಂಡಪ. ಮಂಡಪದ ವಿವರಣೆಯು ಸ್ತಂಭದ ಅಲಂಕಾರವನ್ನು ರಕ್ಷಿಸು ವಂಥದ್ದು ಎಂದು ಗುರುತಿಸುತ್ತದೆ. ಮಂಡಪವು ವಿಶಾಲವಾದಂತೆ ಸ್ತಂಭ ರಚನೆಯಲ್ಲಿ ವೈವಿಧ್ಯವನ್ನು ಕಾಣಬಹುದು. ದಾಕ್ಷಿಣಾತ್ಯ ಗ್ರಂಥಗಳ ಪ್ರಕಾರ ತ್ರಿವರ್ಗಗಳಿಂದ ಕೂಡಿದ್ದು ಮಂಡಪ.

> ಅಧಿಷ್ಠಾನೋಪರಿ ಸ್ತಂಭಂ ಪ್ರಸ್ತರಂತ್ರಿವರ್ಗಕಂ
> ಕಪೋತ ಪ್ರತಿಸಂಯುಕ್ತಂ ಯತ್ ಮಂಡಪ ಮಿಷ್ಯತೇ[22]

ಮಂಡಪವು, ಅಧಿಷ್ಠಾನ, ಸ್ತಂಭ, ಪ್ರಸ್ತರಗಳನ್ನೊಳಗೊಂಡ ತ್ರಿವರ್ಗ ರಚನೆ ಯಾಗಿದೆ. ಪ್ರಸ್ತರವರ್ಗವು ಕಪೋತ, ಪ್ರತಿಗಳಿಂದ ಕೂಡಿದೆ. ಹಲವು ಸ್ತಂಭಗಳ ಮಂಡಪವು ಮುಂದುವರೆದ ಹಂತಗಳಲ್ಲಿ ಸರ್ವಜನೋಪಯೋಗಿ ರಚನೆಗಳಾಗಿ ಮಾರ್ಪಾಡು ಹೊಂದಿತು. ಮಂಡಪದ ಮಧ್ಯದಲ್ಲಿರುವ ನಾಲ್ಕು ಬೃಹತ್ ಸ್ತಂಭಗಳೂ ಚತುಷ್ಕ ಎನಿಸುತ್ತದೆ. ಚತುಷ್ಕವು ಸ್ವತಂತ್ರ ರಚನೆಯೇ ಅಲ್ಲದೆ, ಶಾಲಾ, ಸಭಾ ರಚನೆಗಳ ಅವಿಭಾಜ್ಯ ಅಂಗವೆನಿಸಿತು.

ಅಗ್ರೇಚತ್ಯಕ್ತ್ವಪ್ರಾಗೀವ ಚತುಷ್ಕೀ ಮಧ್ಯತಸ್ತಥಾ[23]

ಮಂಡಪದ ಮಧ್ಯದಲ್ಲಿರುವ ಚತುಷ್ಕವು ಭಿತ್ತಿಯನ್ನಳವಡಿಸಿಕೊಂಡಿದ್ದು, ಸುತ್ತ ಪ್ರದಕ್ಷಿಣಾಪಥ ಅಥವಾ ಪರಿಕ್ರಮ ಎನ್ನಬಹುದಾದ ಅಲಿಂದ ರಚನೆಯನ್ನೂ ಐಹೊಳೆಯ ಗೌಡರ ಗುಡಿಯಲ್ಲಿ ಕಾಣುತ್ತೇವೆ. ಮಧ್ಯದ ಚತುಷ್ಕವು ಭಿತ್ತಿಯಿಲ್ಲದೆ ಎರಡು ಹಂತಗಳ ಅಲಿಂದ ರಚನೆಯನ್ನು ಹೊಂದಿದ್ದು, ಮುಂಗಡೆ ವಿಶಾಲವಾದ ಮುಖಮಂಡಪ, ಎರಡನೆಯ ಹಂತದ ಅಲಿಂದ ರಚನೆಯನ್ನು ಆವರಿಸದಂತೆ ಕೆಲವೆಡೆ ಸ್ತಂಭಗಳಿಗೆ ಬದಲಾಗಿ ಕುಡ್ಯಸ್ತಂಭಗಳು ಮತ್ತು ಜಾಲಂದ್ರಜೋಡಣೆಯನ್ನು ಲಾಡ್ ಖಾನ್ ದೇವಾಲಯದಲ್ಲಿ ಕಾಣಬಹುದು. ಇದನ್ನು ಸಭಾರಚನೆಯೆಂದು ಗುರುತಿಸಬಹುದಾಗಿದೆ. ಸಭಾ ಮತ್ತು ಸಮಿತಿ ವೈದಿಕ ಸಮಾಜದಲ್ಲಿದ್ದ ರಾಜ್ಯವ್ಯವಸ್ಥೆಯ ಪೂರಕಾಂಗಗಳು. ತದನಂತರದ ಕಾಲದಲ್ಲಿ ಸಭೆಯು ಅಗ್ರಹಾರಗಳಲ್ಲಿ ಮಹಾಜನರು ಸೇರಿ ಸಮಾಲೋಚನೆ ನಡೆಸುವ ವೇದಿಕೆಯೆನಿಸಿದ್ದು, ಅಲ್ಲಿಯ ವಾಸ್ತು ಸ್ವರೂಪಕ್ಕೂ ಅನ್ವಯಿಸಲ್ಪಟ್ಟಿತು.[24]. ಐಹೊಳೆಯ ಲಾಡ್‌ಖಾನ್ ದೇವಾಲಯವನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಈ ಸಭಾಗೃಹಕ್ಕೊಂದು ಗರ್ಭಗೃಹವನ್ನು ತದನಂತರ ಕಾಲದಲ್ಲಿ ಅಳವಡಿಸಿ ದೇವಾಲಯವಾಗಿ ಮಾರ್ಪಡಿಸಿದರು. ಸಭಾರಚನೆಯಂತೆ "ಮಠ"ಗಳ ರಚನೆಯನ್ನೂ ವಾಸ್ತು .ಗ್ರಂಥಗಳು ಗುರುತಿಸಿವೆ. ಇವೂ ಸಹ ಶಾಲಾ ಅಥವಾ ಮಂಡಪ ರಚನೆಗಳಿಂದ ಬೆಳೆದು ಬಂದದ್ದು. ಮಂಡಪವು ದೇವಾಲಯಗಳ ಅವಿಭಾಜ್ಯ ಅಂಗವೆನಿಸಿ ವಿವಿಧಾಕಾರಗಳನ್ನೊಳಗೊಂಡು ಬೆಳೆಯಿತು. ವಿಜಯನಗರದ ಕಾಲದ ದೇವಾಲಯಗಳಲ್ಲಿ, ದೇವಾಲಯ ಸಂಕೀರ್ಣಗಳಲ್ಲಿ ಕಾಣುವ ವಿಶಾಲವಾದ ಮಂಡಪ ರಚನೆಗಳು ಗಮನಾರ್ಹವೆನಿಸಿದವು.

ವಿಮಾನ - ಪ್ರಾಸಾದ :

ಮಂಡಪವು ತ್ರಿವರ್ಗರಚನೆಯೆನಿಸಿದರೆ ವಿಮಾನವು ಷಡ್ವರ್ಗರಚನೆಯೆಂದು ಗುರುತಿಸಲ್ಪಡುತ್ತದೆ. ಅಧಿಷ್ಠಾನದೊಂದಿಗೆ ಆರಂಭಗೊಂಡು ಸ್ತೂಪಿಯಲ್ಲಿ ಪರ್ಯವಸಾನಗೊಳ್ಳುವುದು ವಿಮಾನವೆನಿಸಿದೆ.

ವಿಮಾನಾನಾಂ ಚ ಸರ್ವೇಷಾಂ ಸಾಮಾನ್ಯಮಿದ ಮುಚ್ಯತೇ
ಅಧಿಷ್ಠಾನಂ ಪಾದವರ್ಗಃ ಪ್ರಸ್ತರಗ್ರೀವಕಾವಸಿ
ಶಿಖರಸ್ತೂಪಿಕಾಚೇತಿ ಷಡ್ವರ್ಗಃ ಇತಿ ಕೀರ್ತಿತಃ[25]

ವಿಮಾನ, ಭವನ, ಹರ್ಮ್ಯ, ಸೌಧ, ಪ್ರಾಸಾದ, ಇತ್ಯಾದಿಗಳು ಪರ್ಯಾಯಶಬ್ದಗಳೆನಿಸಿವೆ. ಕೆ. ವಿ. ಸೌಂದರರಾಜನ್‌ರವರು ದಾಕ್ಷಿಣಾತ್ಯ ವಿಮಾನ, ಔತ್ತರೇಯ ಪ್ರಾಸಾದ ಎಂದು ವರ್ಗೀಕರಿಸಿಕೊಳ್ಳುತ್ತಾರೆ[26], "ಪ್ರಾಸಾದಾ ದೇವ ಭೂಪಾನಾಂ" ಎಂಬ ವಿವರಣೆಯಿದ್ದು, ದೇವ ದೇವತೆಗಳಿಗೆ ರಾಜ ಮಹಾರಾಜರುಗಳಿಗೆ ನಿರ್ಮಿಸಿದ್ದು ಪ್ರಾಸಾದ. ತಿರ್ಯಕ್ರಮದಲ್ಲಿ ಪ್ರಾಸಾದ (ಗರ್ಭಗೃಹ) ಮಂಡಪ (ನವರಂಗ) ಶಾಲಾ (ನೃತ್ಯಮಂಡಪ) ಪ್ರಾಕಾರ, ಗೋಪುರ ಇತ್ಯಾದಿಯಾಗಿ ದೇವಾಲಯ

ಸಂಕೀರ್ಣದ ಭಾಗಗಳು ಗುರುತಿಸಲ್ಪಡುತ್ತವೆ. ದೇವಾಲಯದ ಮೂಲಭಾಗವನ್ನು ಪ್ರಾಸಾದವೆಂದು ಗುರುತಿಸುವುದುಂಟು. ಇದು ಗರ್ಭಗೃಹವೇ. ಔತ್ತರೇಯ ಗ್ರಂಥಗಳಲ್ಲಿ ಪ್ರಾಸಾದ ಎಂಬ ಪದದ ಬಳಕೆ ಹೆಚ್ಚು. ದಾಕ್ಷಿಣಾತ್ಯ ವಿಮಾನ, ಔತ್ತರೇಯ ಪ್ರಾಸಾದ ಎನ್ನುವಲ್ಲಿ ಶಿಖರದ ಭಾಗವನ್ನು ಗಮನದಲ್ಲಿರಿಸಿಕೊಂಡು ಹೇಳಿದ್ದೆಂದು ಗುರುತಿಸಬಹುದು.

ಶಿಖರ ರಚನೆಯನ್ನು ಕಾಣುವ ಮುನ್ನ ದೇವಾಲಯಗಳ ಬೆಳವಣಿಗೆಯನ್ನು ಪುನಃ ಪರಿಶೀಲಿಸಬಹುದು. ಮೊದಲಿಗೆ ನಾಲ್ಕು ಸ್ತಂಭಗಳಿಂದ ಕೂಡಿದ ಚತುಷ್ಕ, ತದನಂತರ ಚತುಷ್ಕವನ್ನಾವರಿಸಿ ನಿಂತ ಅಲಿಂದ. ಚತುಷ್ಕವು ಭಿತ್ತಿಯಿಂದ ಕೂಡಿದ್ದು ಗೌಡರಗುಡಿ ಉದಾಹರಣೆಯೆನಿಸಿದೆ. ಮತ್ತೊಂದು ಎಡೆಯಲ್ಲಿ ಕೇವಲ ಭಿತ್ತಿಯಿಂದ ಕೂಡಿದ ಮೂಲೆಗಳಲ್ಲಿ ಕುಡ್ಯಸ್ತಂಭಗಳಿಂದ ರಚನೆಗೊಂಡ ಚತುಷ್ಕ, ಉದಾಹರಣೆ ಜ್ಯೋತಿರ್ಲಿಂಗ ಗುಡಿ. ದೇವಾಲಯಗಳ ಮುಂದಿನ ಹಂತಗಳನ್ನು ಗುರುತಿಸುವಾಗ ಇವೆರಡೂ ರಚನೆಗಳು ಸಮಪಾಲು ಪಡೆಯುತ್ತವೆ. ದೇವಾಲಯಗಳು ಪ್ರಾರಂಭದಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಬಳಸಿದವು ಎಂದು ಗುರುತಿಸುವಲ್ಲಿ ಲಾಡ್‌ಖಾನ್, ಗೌಡರ ಗುಡಿ ಮುಂತಾದವನ್ನು ಹೆಸರಿಸಬೇಕಾಗುತ್ತದೆ. ಭಿತ್ತಿಯೊಂದಿಗೆ ನಿಂತ ಚತುಷ್ಕವು ಮುಂದಕ್ಕೆ ಮುಖಮಂಡಪವನ್ನು ಅಳವಡಿಸಿಕೊಂಡು ಮುಂದಿನ ಹಂತವೆನಿಸುತ್ತದೆ.

ಏಕಾಲಿಂದ ರಚನೆ :

ಗರ್ಭಗೃಹವೊಂದರಿಂದ ದೇವಾಲಯದ ಪೂರ್ಣ ಕಲ್ಪನೆ ಸಾಧ್ಯವಿದ್ದು ತದನಂತರದ ಕಾಲದಲ್ಲಿ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಮುಖಮಂಡಪ ಜೋಡಣೆ ಆರಂಭವಾಯಿತು. ಶಾಲಾ ರಚನೆಯಲ್ಲಿ ಇದು ಏಕಾಲಿಂದ ರಚನೆಯೆನ್ನಿಸಿದೆ. ಮುಂಗಡೆ ಎರಡು ಸ್ತಂಭಗಳಿಂದ ಕೂಡಿದ್ದಲ್ಲಿ ಪ್ರಾಗ್ರೀವವೆಂದೂ, ನಾಲ್ಕು ಸ್ತಂಭಗಳಿಂದ ಕೂಡಿದ್ದಲ್ಲಿ ಚತುಷ್ಕವೆಂದೂ ಗುರುತಿಸಲ್ಪಡುತ್ತದೆ. ಇಂತಹ ಸ್ವತಂತ್ರ ರಚನೆಗಳನ್ನು ಹಲವೆಡೆಗಳಲ್ಲಿ ಕಾಣಬಹುದಾಗಿದ್ದು ಐಹೊಳೆಯ ರಾವಳಫಡಿ ಗುಹಾಲಯದ ಮುಂದೆ ಇಕ್ಕೆಲಗಳಲ್ಲಿರುವ ಸರಳ ಆಕೃತಿಗಳನ್ನು ಉದಾಹರಿಸಬಹುದು. ಇವುಗಳಲ್ಲಿ ಬಲಕ್ಕಿರುವ ರಚನೆಯಲ್ಲಿ ಪೀಠ ಅಥವಾ ಅಧಿಷ್ಠಾನ, ಭಿತ್ತಿಯಿಂದ ಆವರಿಸಿರುವ ಗರ್ಭಗೃಹ ಮತ್ತು ನಾಲ್ಕು ಸ್ತಂಭಗಳ ಮುಖಮಂಡಪ ಇವುಗಳನ್ನು ಕಾಣಬಹುದು. ಸ್ತಂಭಗಳು ಏಕ ಶಿಲಾರಚನೆಗಳೆನಿಸಿದ್ದು, ಮೇಲ್ಭಾಗದಲ್ಲಿ ನಾಲ್ಕುಕಡೆಯೂ ಮುಂಚಾಚಿದ ಬೋದಿಗೆಯಿದೆ. ಮೇಲ್ಗಡೆ ಛಾದ್ಯ ಅಥವಾ ಮೇಲ್ಛಾವಣಿಯಿದೆ. ಛಾವಣಿಯೂ ಮುಂಚಾಚಿದ್ದು ಗರ್ಭಗೃಹದೆಡೆಯಲ್ಲಿ ಕಪೋತ ರಚನೆಯಂತಿದೆ. ಕಪೋತದ ಮೇಲ್ಭಾಗದಲ್ಲಿ ನಿಯತ ಅಂತರದಲ್ಲಿ ಗೂಡು ಅಥವಾ ಪಂಜರಾಲಂಕಾರವಿದೆ. ಛಾದ್ಯದನಂತರ ಕೊಂಚ ಹಿಂದಕ್ಕೆ ಸರಿದ ಪ್ರತಿಸ್ತರವನ್ನು ಕಾಣಬಹುದು.

ರಾವಳಫಡಿಯ ಮುಂದುಗಡೆ ಎಡಕ್ಕಿರುವ ಮತ್ತೊಂದು ರಚನೆಯು ಗರ್ಭಗೃಹ, ನಾಲ್ಕುಸ್ತಂಭಗಳ ಮುಖಮಂಡಪಗಳನ್ನು ಹೊಂದಿದೆ. ಗರ್ಭಗೃಹದ ಮೇಲೆ ಒರಟಾದ

ಶಿಖರ ರಚನೆಯಿದೆ. ವಿಮಾನರಚನೆಯಲ್ಲಿ ಸ್ತೂಪಿಯನ್ನುಳಿದು ಇನ್ನಿತರ ಭಾಗಗಳನ್ನು ಇಲ್ಲಿ ಹೆಸರಿಸಬಹುದು. ಗರ್ಭಗೃಹದ ಮೇಲಿನ ಶಿಖರವು ತದನಂತರದ ಕಾಲದಲ್ಲಿ ಜೋಡಿಸಿರಬಹುದು.

ಮೆಟ್ಟಿಲು ಮೆಟ್ಟಿಲಾಗಿ ಮೇಲೇರುವ ರಚನೆಗಳು :

ರಾವಳಫಡಿಯ ಮುಂದಿರುವ ರಚನೆಗಳಲ್ಲಿ ಒಂದರಲ್ಲಿ ಅಧಿಷ್ಠಾನ, ಪಾದ ಮತ್ತು ಪ್ರಸ್ತರವನ್ನೂ, ಮತ್ತೊಂದರಲ್ಲಿ ಅಧಿಷ್ಠಾನ, ಪಾದ, ಪ್ರಸ್ತರ, ಕಂಠ ಮತ್ತು ಶಿಖರ ಭಾಗಗಳನ್ನೂ ಕಾಣಬಹುದು. ಪ್ರಸ್ತರಭಾಗದಲ್ಲಿ ಕಂಡುಬರುವ ಕಪೋತ ಹಾಗೂ ಪ್ರತಿಸ್ತರಗಳು ಹಲವುಬಾರಿ ಪುನಾರಾವರ್ತನೆಗೊಂಡು ಕಂಠ, ಶಿಖರ, ಸ್ತೂಪಿಗಳಲ್ಲಿ ಅಂತ್ಯಗೊಂಡಲ್ಲಿ ಇದು ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿದ ಸರಳ ರಚನೆಯೆನಿಸುತ್ತದೆ. ಇದನ್ನು ಫಾಂಸನಾಕಾರವೆಂದೂ ಕದಂಬನಾಗರ ಶೈಲಿಯೆಂದೂ ವಿದ್ವಾಂಸರು ಗುರುತಿಸಿದ್ದಾರೆ. ಮೊರೆಸ್‌ರವರು ಕದಂಬನಾಗರ ಶೈಲಿಯೆಂದು ಗುರುತಿಸಿದ್ದು ಹಲಸಿಯ ಜೈನ ಬಸದಿಯನ್ನು ಉದಾಹರಿಸಿದ್ದಾರೆ[27]. ಕದಂಬ ಮೃಗೇಶವರ್ಮನ ಕಾಲದ್ದೆಂದು ನಿರ್ಧರಿಸಲಾಗಿರುವ ಈ ದೇವಾಲಯ ಹಾಗೂ ಶೈಲಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅಪರಾಜಿತಪೃಚ್ಛಾ ಗ್ರಂಥಕಾರನು "ನಪುಂಸಕ ಪ್ರಾಸಾದ ಲಕ್ಷಣ" ಗಳ ಅಡಿಯಲ್ಲಿ ಫಾಂಸನಾಕಾರವನ್ನು ಗುರುತಿಸಿದ್ದು ಇದರ ಶಿಖರವು ಘಂಟಾ ರಚನೆಯೊಂದಿಗೆ ಅಂತ್ಯಗೊಳ್ಳುತ್ತದೆ. ಫಾಂಸನಾಕಾರದಲ್ಲಿ ಹೆಚ್ಚಿನ ವಿವರಗಳಿಲ್ಲ[28]. ಇರುವ ವಿವರಗಳನ್ನು ಖಚಿತವಾಗಿ ಅರ್ಥೈಸಲು ಸಾಧ್ಯವಾಗಿಲ್ಲ. ನಪುಂಸಕ ಪ್ರಾಸಾದವೆನ್ನುವುದು ಬಹುಶಃ ಮಧ್ಯಂತರ ಅವಸ್ಥೆಯಿರಬಹುದು. ಮೆಟ್ಟಿಲು ಮೆಟ್ಟಿಲಾಗಿ ಮೇಲೇರುವ, ಕಪೋತ, ಪ್ರತಿ (ಅಥವಾ ಕಂಠ) ಸ್ತರಗಳು ಪುನರಾವರ್ತನೆಗೊಳ್ಳುವ ಈ ಶೈಲಿಯನ್ನು ಆರಂಭ ಹಂತವೆನ್ನಬಹುದು. ಐಹೊಳೆಯ ಹುಚ್ಚುಮಲ್ಲಿಗುಡಿಯ ಬಲಕ್ಕಿರುವ ದೇವಾಲಯದಲ್ಲಿ ಘಂಟಾಶಿಖರ ರಚನೆಯಿಲ್ಲ. ಬಾದಾಮಿಯ ಭೂತನಾಥಗುಡಿಯ ಉತ್ತರ ಗುಂಪಿನ ಆವರಣದಲ್ಲಿ ಘಂಟಾಕಾರವನ್ನು ಹೊಂದಿದ ಹಲವಾರು ವಿಮಾನ ರಚನೆಗಳಿವೆ. ಘಂಟಾಕಾರ ಶಿಖರವು ಔತ್ತರೇಯ ದ್ರಾವಿಡ,ಭೂಮಿಜ ಶೈಲಿಗಳೊಂದಿಗೆ ಸಂಬಂಧ ಸೂಚಿಸುತ್ತದೆ. ಇವು ಔತ್ತರೇಯ ಶೈಲಿಗಳು ಖಚಿತಗೊಳ್ಳುವ ಮುನ್ನ ಹುಟ್ಟಿದ್ದೆನ್ನಬಹುದು. ಭೂತನಾಥಗುಡಿಯ ಆವರಣದಲ್ಲಿ ದೇವಾಲಯದ ಬಲಭಾಗಕ್ಕೆ ಪೂರ್ಣ ವಿಕಸನಗೊಳ್ಳದ ಘಂಟಾಕಾರ ಶಿಖರವುಳ್ಳ ರಚನೆಯೊಂದಿಗೆ ಇದರಲ್ಲಿ ಕಪೋತ ರಚನೆಯ ಹಂತವನ್ನು ಗುರುತಿಸಬಹುದು. ಭೂತನಾಥಗುಡಿಯ ಉತ್ತರ ಗುಂಪಿನಲ್ಲಿರುವ ಹಲವು ರಚನೆಗಳಲ್ಲಿ ಕಂಡುಬರುವ ಲಕ್ಷಣಗಳು ತಮ್ಮ ಆಕರ್ಷಣೆ ಕಳೆದುಕೊಳ್ಳದೆ, ದಾಕ್ಷಿಣಾತ್ಯ, ಔತ್ತರೇಯ ಸಂಪ್ರದಾಯಗಳನ್ನು ದಾಟಿ ಹಲವು ಶತಮಾನಗಳಿಗೆ ವಿಸ್ತರಿಸಲ್ಪಟ್ಟಿತು. ಹೊಯ್ಸಳರ ಕಾಲದಲ್ಲಿ ಈ ರೀತಿಯ ಹಲವು ದೇವಾಲಯಗಳಿದ್ದು, ಇವುಗಳಲ್ಲಿ ದೊಡ್ಡಗದ್ದವಳ್ಳಿ

ದೇವಾಲಯದ ಸಂಕೀರ್ಣದಲ್ಲಿ ಕಂಡುಬರುವ ರಚನೆಗಳು ಗಮನಾರ್ಹವಾದವು. ಇದ ರೊಂದಿಗೆ ಹಂಪೆಯ ಹೇಮಕೂಟದ ಮೇಲಿರುವ ದೇವಾಲಯ ಸಂಕೀರ್ಣವನ್ನೂ ಗಮನಿಸಬಹುದು.

ದಾಕ್ಷಿಣಾತ್ಯ ಸಂಪ್ರದಾಯ : ನಾಗರ-ದ್ರಾವಿಡ-ವೇಸರ ಶೈಲಿಗಳು :

ಐಹೊಳೆಯ ಗೌಡರಗುಡಿ, ಲಾಡ್‌ಖಾನ್ ದೇವಾಲಯ, ಕುಂತಿಗುಡಿ, ಮೇಗುತಿ ದೇವಾಲಯ, ಬಾದಾಮಿಯ ಮೇಲಿನ ಮತ್ತು ಕೆಳಗಿನ ಶಿವಾಲಯ ಇವುಗಳನ್ನು ಆರಂಭ ಕಾಲದ ದೇವಾಲಯಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ರಚನೆಗಳು ಬಹುಶಃ ಆರನೆಯ ಹಾಗೂ ಏಳನೆಯ ಶತಮಾನಕ್ಕೆ ಸೇರಿದ ರಚನೆಗಳಿರಬಹುದು. ಬಾದಾಮಿಯ ಮೇಲಿನ ಹಾಗೂ ಕೆಳಗಿನ ಶಿವಾಲಯಗಳು ಶೈಲಿ ಸಂಪ್ರದಾಯಗಳು ಇನ್ನೂ ಖಚಿತ ಗೊಳ್ಳದ ದಾಕ್ಷಿಣಾತ್ಯ ರಚನೆಗಳು. ಶಾಸನಗಳಲ್ಲಿ ದೇವಾಲಯಗಳ ಬಗ್ಗೆ ಸೂಚನೆ ಇದ್ದಾಗ್ಯೂ, ಇಂದು ಕಾಣಲಾಗುವ ದೇವಾಲಯ ಸ್ವರೂಪ ಶಾಸನ ಕಾಲದಲ್ಲಿ ರೂಪು ಗೊಂಡಿದ್ದು ಎಂದು ಖಚಿತವಾಗಿ ಹೇಳಲಾಗದು. ಆದರೂ ದೇವಾಲಯಗಳ ನಿರ್ಮಾಣದ ಕಾಲ ನಿರ್ಧರಿಸುವಲ್ಲಿ ಶಾಸನಗಳೂ ಕೆಲವೆಡೆ ಸಹಾಯಕವಾಗಿದೆ ಎನ್ನುವುದೂ ಸತ್ಯ. ಫರ್ಗ್ಯುಸನ್ ಖಚಿತವೆನಿಸಿದ ದೇವಾಲಯಗಳ ಕಾಲವನ್ನು ಆಧರಿಸಿ, ಅವುಗಳ ಲಕ್ಷಣ ಸ್ವರೂಪಗಳನ್ನು ಅಧ್ಯಯನ ಮಾಡಿ, ಅದೇ ಲಕ್ಷಣಗಳು ಕಂಡುಬರುವ ಇನ್ನಿತರ ದೇವಾಲಯಗಳನ್ನು ಕೊಂಚ ಹಿಂದೆ ಮುಂದೆ ಗುರುತಿಸಿದ. ಇಲ್ಲಿಯೂ ಮೂಲತಃ ಶಾಸನಗಳೇ ಕಾಲನಿರ್ಣಯಕ್ಕೆ ಸಹಾಯವೆನಿಸಿರಬಹುದು. ಕೇವಲ ಶೈಲಿ ಸಂಪ್ರದಾಯಗಳನ್ನನುಸರಿಸಿ ಕರಾರುವಾಕ್ಕಾದ ಕಾಲನಿರ್ಣಯ ಸಾಧ್ಯವಿಲ್ಲವೆನ್ನ ಬಹುದು. ವಿದ್ವಾಂಸರು ದೇವಾಲಯಗಳ ಸುತ್ತ ತುಂಬಿರುವ ಮಣ್ಣಿನಸ್ತರಗಳ ಪರೀಕ್ಷೆ ಯಿಂದಲೂ ಕಾಲಮಾನ ನಿರ್ಧರಿಸಿದ್ದುಂಟು. ಕರ್ನಾಟಕದ ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳಲ್ಲಿ ಮಹಾಕೂಟೇಶ್ವರ ದೇವಾಲಯವು ಅತ್ಯಂತ ಪ್ರಾಚೀನ ರಚನೆಯೆಂದು ಪರಿಗಣಿಸಲಾಗಿದೆ. ಈ ದೇವಾಲಯದ ನಿರ್ಮಾಣ ಕ್ರಿ. ಶ. 600ರ ಹಿಂದಿನದು ಮತ್ತು ಮಹಾಬಲೀಪುರಂನಲ್ಲಿರುವ ಏಕ ಶಿಲಾರಥಗಳು ತದನಂತರ ಕಾಲದ್ದು ಎಂದು ನಿರ್ಧರಿಸಲ್ಪಟ್ಟಿದೆ. ಅಜಿತಾಗಮ, ಸುಪ್ರಭೇದಾಗಮ, ವಿಮಾನಾರ್ಚನಕಲ್ಪ, ಕಾಶ್ಯಪಶಿಲ್ಪ ಮುಂತಾದ ಗ್ರಂಥಗಳು ದಾಕ್ಷಿಣಾತ್ಯ ಸಂಪ್ರದಾಯದ ನಾಗರ–ದ್ರಾವಿಡ– ವೇಸರ ಶೈಲಿಗಳನ್ನು ಸ್ಪಷ್ಟವಾಗಿ ವಿವರಿಸಿದ್ದು, ಕಂಠ ಹಾಗೂ ಶಿಖರದ ಆಕಾರವೇ ಶೈಲಿಗಳನ್ನು ಗುರುತಿಸುವಲ್ಲಿ ನಿರ್ಣಾಯಕಧ್ವನಿ ಎನಿಸಿದೆ. ಈ ಶೈಲಿಗಳ ಲಕ್ಷಣಗಳನ್ನು ಕೆಳಕಂಡ ಉಲ್ಲೇಖಗಳಲ್ಲಿ ಗಮನಿಸಬಹುದು.

ಪ್ರಾಸಾದಸ್ತ್ರಿವಿಧಃ ಪ್ರೋಕ್ತಸ್ತ್ರೈವಿಧ್ಯಮುಪಿಕಥ್ಯತೇ
ನಾಗರಂ ದ್ರಾವಿಡಂ ಚೈವ ವೇಸರಂಚೇತಿ ನಾಮತಃ
ಭೌಮಾದಿಸ್ತೂಪಿ ಪರ್ಯಂತಂ ನಾಗರಂ ಚತುರಶ್ರಕಂ
ಕಂಠಾತ್ಪ್ರಭೃತಿವೃತ್ತಂ ಯದ್ವೇಸರಂ ಥಾಮುಕಥ್ಯತೇ[೨೯]

ನಾಗರಂ ದ್ರಾವಿಲಂ ವೇಸರಮಿತಿತ್ರಿವಿಧಂ ಹರ್ಮ್ಯರೂಪಂ ಖುರಾದಿ
ಸ್ತೂಪಿಕಾಂತಂ ಚತುರಶ್ರಂ ನಾಗರಂ, ತಥೈವವೃತ್ತಂ ವೇಸರಂ
ಅಥವಾ ಪ್ರಸ್ತರಾಂತಂ ಸಮಚತುರಶ್ರಂ, ತದುಪರಿವೃತ್ತಗ್ರೀವಾ
ಶಿಖರಂ ಚ ವೇಸರಂ, ತಥೈವಷಡಸ್ರಶ್ರ ಶಿಖರಗ್ರೀವಂ ದ್ರಾವಿಲಂಖ್ಯಾತ್[೩೦]

ದಾಕ್ಷಿಣಾತ್ಯ ಸಂಪ್ರದಾಯದ ನಾಗರ–ದ್ರಾವಿಡ–ವೇಸರ ಶೈಲಿಯ ದೇವಾಲಯಗಳು ಷಡ್ವರ್ಗ ರಚನೆಗಳೆನಿಸಿದ್ದು ಮೊದಲ ಮೂರು ವರ್ಗ ರಚನೆಯು ಒಂದೇ ಆಕಾರವಾಗಿರಲು ಸಾಧ್ಯವಿದೆ. ಕಂಠ ಹಾಗೂ ಶಿಖರ ರಚನೆಯಲ್ಲಿ ನಾಗರವು ಚತುರಶ್ರವಾಗಿಯೂ, ವೇಸರವು ವೃತ್ತಾಕಾರವಾಗಿಯೂ, ದ್ರಾವಿಡವು ಷಡಶ್ರ ಅಥವಾ ಅಷ್ಟಾಶ್ರವಾಗಿರಲು ಶಾಸ್ತ್ರಗಳು ವಿಧಿಸಿವೆ. ಮಹಾಕೂಟದಲ್ಲಿರುವ ಮಹಾಕೂಟೇಶ್ವರ, ಮಲ್ಲಿಕಾರ್ಜುನ, ಬಾದಾಮಿಯ ಮಾಲೇಗಿತ್ತಿ ಶಿವಾಲಯ, ದ್ರಾವಿಡ ಶೈಲಿಯ ದೇವಾಲಯಗಳೆನಿಸಿವೆ. ಇವುಗಳ ಕಂಠ ಹಾಗೂ ಶಿಖರಗಳು ಅಷ್ಟಾಶ್ರ ರಚನೆಗಳು. ಮಹಾಬಲಿಪುರಂನಲ್ಲಿರುವ ಅರ್ಜುನರಥ, ಎಲ್ಲೋರಾದಲ್ಲಿರುವ ಕೈಲಾಸನಾಥ ದೇವಾಲಯ ಇವುಗಳು ದ್ರಾವಿಡ ಶೈಲಿಗಳೆನಿಸಿವೆ. ನಾಗರ ಶೈಲಿಗೆ ಪಟ್ಟದಕಲ್ಲಿನ ವಿಜಯೇಶ್ವರ, ವಿರೂಪಾಕ್ಷ, ಬಾದಾಮಿಯ ಭೂತನಾಥ, ಮೇಲಿನ ಶಿವಾಲಯ ಇವು ಉದಾಹರಣೆಗಳೆನಿಸಿವೆ. ಈ ದೇವಾಲಯಗಳು ಅಧಿಷ್ಠಾನದಿಂದ ಸ್ತೂಪಿಯವರೆಗೆ ಚತುರಶ್ರವೆನಿಸಿದ್ದು "ಮೂಲಾದಿ ಸ್ತೂಪಿ ಪರ್ಯಂತಂ ವೇದಾಶ್ರಂ" ಎಂದು ಗುರುತಿಸಿರುವುದನ್ನು ಗಮನಿಸಬಹುದು. ತದನಂತರ ಕಾಲದಲ್ಲಿ ರಚನೆಗೊಂಡ ನಂದಿಯ ಭೋಗನಂದೀಶ್ವರ ದೇವಾಲಯವು ಈ ಶೈಲಿಯ ಉತ್ತಮ ಉದಾಹರಣೆಯಾಗಿದೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯವು ವೇಸರಶೈಲಿಯ ಅಪರೂಪದ ಉದಾಹರಣೆಯಾಗಿದೆ. ವೇಸರಶೈಲಿಯ ವಾಸ್ತು ರಚನೆಗಳು ವಿರಳವೆನಿಸಿದ್ದು ಈ ಶೈಲಿಯ ಗುರುತಿಸುವಿಕೆಯಲ್ಲಿ ತೊಡಕಾಗಿತ್ತು. ತಮಿಳುನಾಡಿನಲ್ಲಿ ಈ ಶೈಲಿಯ ಹಲವಾರು ರಚನೆಗಳನ್ನು ಕಾಣಬಹುದು. ಕರ್ನಾಟಕದಲ್ಲಿ ದಾಕ್ಷಿಣಾತ್ಯ ಸಂಪ್ರದಾಯದ ಮೂರು ಶೈಲಿಗಳನ್ನೂ ಕಾಣಬಯಸುವವರಿಗೆ ಕಂಬದಹಳ್ಳಿಯ ಬಸದಿಯ ಶಿಖರಗಳು ಮಾದರಿಯಾಗಬಲ್ಲವು.

ಔತ್ತರೇಯ ಸಂಪ್ರದಾಯ ಶೈಲಿಗಳು :

ಪ್ರಾಚೀನ ಗ್ರಂಥಗಳು ಗುರುತಿಸುವ ಎಲ್ಲಾ ಶೈಲಿ ಪ್ರಭೇದಗಳನ್ನು ಗುರುತಿಸಲು ಸಾಧ್ಯವಾಗದು. ಕಾಮಿಕಾಗಮವು ದೇವಾಲಯ ಶೈಲಿಗಳನ್ನು ಗುರುತಿಸುವಲ್ಲಿ ಷಡ್ವರ್ಗ ಹಾಗೂ ಅಷ್ಟವರ್ಗಗಳನ್ನು ವಿವರಿಸಿದೆ. ಷಡ್ವರ್ಗ ದೇವಾಲಯಗಳನ್ನು ದಾಕ್ಷಿಣಾತ್ಯ

ಸಂಪ್ರದಾಯವೆಂದು ಹೆಸರಿಸಲಾಗಿದೆ. ಅಷ್ಟವರ್ಗವು ಅಮಲಸಾರವುಳ್ಳದ್ದು. ಈ ವಿವರವು ಇಂತಿದೆ :

ಮೂಲಂ ಮಸೂರಕಂ ಜಂಘಾ ಕಪೋತಂ ಶಿಖರಂಗಲಗರ
ಊರ್ಧ್ವೇ ಅಮಲಸಾರೇಣಾಷ್ಟವರ್ಗಃ ಕುಂಭಶೂಲಯುಕ್[31]

ಈ ವರ್ಗಗಗಳು ಔತ್ತರೇಯ ಸಂಪ್ರದಾಯಕ್ಕೆ ಸೇರಿದ್ದು, ಮೂಲತಃ ಕಳಿಂಗ ಶೈಲಿಯನ್ನು ಖಚಿತವಾಗಿ ಗುರುತಿಸುತ್ತವೆ. ಮಸೂರಕ, ಜಂಘಾ, ಕಪೋತ, ಶಿಖರ, ಗಲ, ಅಮಲಸಾರ, ಕುಂಭ ಮತ್ತು ಶೂಲ ಇವು ಅಷ್ಟವರ್ಗಗಳು. ಕಾಮಿಕಾಗಮ ಗ್ರಂಥವು ದೇವಾಲಯ ರಚನೆಯಲ್ಲಿ ಆರು ಶೈಲಿಗಳನ್ನು ಗುರುತಿಸಿದ್ದು ಇವುಗಳಲ್ಲಿ ನಾಗರ-ದ್ರಾವಿಡ-ವೇಸರ ಮತ್ತು ಕಳಿಂಗ ಶೈಲಿಗಳನ್ನು ಗುರುತಿಸಬಹುದು. ವರಾಟ ಮತ್ತು ಸಾರ್ವದೇಶಿಕ ಶೈಲಿಗಳನ್ನು ಲಭ್ಯವಿರುವ ವಿವರಣೆಗಳ ಪ್ರಕಾರ ಗುರುತಿಸಲು ಸಾಧ್ಯವಾಗಿಲ್ಲ. ಬಳ್ಳಾರಿ ಜಿಲ್ಲೆಯ ಹೊಳಲು ಗ್ರಾಮದ ಶಾಸನವು ದೇವಾಲಯ ರಚನೆಗೆ ಸಂಬಂಧಿಸಿದಂತೆ ಚತುರ್ಜಾತಿ ಪ್ರಾಸಾದಗಳನ್ನು ಹೆಸರಿಸಿದ್ದು ಇವು ನಾಗರ-ದ್ರಾವಿಡ-ವೇಸರ ಮತ್ತು ಕಳಿಂಗ ಶೈಲಿಗಳೆನಿಸಿವೆ. ವಸ್ತುಶಃ ಬಾದಾಮಿ ಚಾಲುಕ್ಯರ ಕಾಲದಲ್ಲಿ ಈ ಶೈಲಿಗಳು ಮಾತ್ರ ಪ್ರಕಟಗೊಂಡಿದ್ದವು ಎಂದು ಗಮನಿಸಬಹುದು. ಬಾದಾಮಿ ಚಾಲುಕ್ಯರ ಕಾಲದಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂಪ್ರದಾಯಗಳು ಕವಲೊಡೆಯದೆ ಕಳಿಂಗ ಶೈಲಿಯು ಔತ್ತರೇಯ ಸಂಪ್ರದಾಯದ ಪ್ರತಿನಿಧಿಯಾಗಿತ್ತು. ಕಲ್ಯಾಣಿ ಚಾಲುಕ್ಯರು ಹಾಗೂ ಹೊಯ್ಸಳರ ಕಾಲದಲ್ಲಿ ದಾಕ್ಷಿಣಾತ್ಯ ಸಂಪ್ರದಾಯದ ನಾಗರ-ದ್ರಾವಿಡ-ವೇಸರ ಶೈಲಿಗಳ ದೇವಾಲಯಗಳು ಕಡಿಮೆಯಾಗಿ ಔತ್ತರೇಯ ಸಂಪ್ರದಾಯದ ರಚನೆಗಳು ಬೆಳೆದವು. ಈ ಸಂಪ್ರದಾಯದ ದ್ರಾವಿಡ-ಭೂಮಿಜ-ವಿಮಾನ ನಾಗರ, ಲತಿನ ರಚನೆಗಳನ್ನು ಕಾಣಬಹುದು. ಔತ್ತರೇಯ, ದ್ರಾವಿಡ ಶೈಲಿಯು ದಾಕ್ಷಿಣಾತ್ಯ ಸಂಪ್ರದಾಯದ ಪ್ರಭಾವದಿಂದ ಉದಯಿಸಿದ್ದೆನ್ನಬಹುದು. ಭೂಮಿಜ, ವಿಮಾನನಾಗರ, ಲತಿನ ರಚನೆಗಳು ಕಳಿಂಗ ಶೈಲಿಯಿಂದ ಬೆಳೆದುಬಂದ ರಚನೆಗಳು. ಶಿವಮೊಗ್ಗ ಜಿಲ್ಲೆಯ ಕುಬಟೂರು ಶಾಸನವು ದ್ರಾವಿಡ, ಭೂಮಿಜ ಮತ್ತು ಪಿರಿದುಂ ನಾಗರವೆಂಬ ಶೈಲಿಗಳನ್ನು ಹೆಸರಿಸಿದೆ. ಇವು ಔತ್ತರೇಯ ಸಂಪ್ರದಾಯದ ರಚನೆಗಳಾಗಿದ್ದು "ಪಿರಿದುಂನಾಗರ"ವು ವಿಮಾನನಾಗರ ಮತ್ತು ಲತಿನ ಶೈಲಿಗಳನ್ನೊಳಗೊಂಡಿದೆ ಎಂದು ಗಮನಿಸಬಹುಹು.

ಕಳಿಂಗ ಶೈಲಿ :

ಕಳಿಂಗ ಶೈಲಿಯ ವಿವರಣೆಗಳು ಒರಿಸ್ಸಾದಲ್ಲಿ ಲಭ್ಯವಿರುವ ಪ್ರಾಚೀನ ಗ್ರಂಥಗಳ ಆಧಾರದಿಂದ ಗುರುತಿಸಬಹುದಾಗಿದೆ. ಈ ಶೈಲಿಯ ಕರ್ನಾಟಕದ ದೇವಾಲಯಗಳು ಬಾದಾಮಿ ಚಾಲುಕ್ಯರ ಕಾಲಕ್ಕೆ ಸೇರಿದ್ದು. ಆದರೆ ಈ ಶೈಲಿಗೆ ಸಂಬಂಧಪಟ್ಟ ಗ್ರಂಥ

ಗಳು ತದನಂತರದಕಾಲದ್ದು. ಗ್ರಂಥಸ್ಥ ವಿವರಣೆಗಳ ಪ್ರಕಾರ ದೇವಾಲಯಗಳು ರೇಖಾ, ಪೀಢಾ ಹಾಗೂ ಖಾಖರ ಎಂಬ ಪ್ರಭೇದಗಳು ಶಿಖರ ರಚನೆಯಲ್ಲಿ ಗುರುತಿಸಲ್ಪಡುತ್ತವೆ. ರೇಖಾ ಶೈಲಿಯು ಬಾಗಿದ ಶಿಖರವುಳ್ಳದ್ದು, ಭುವನೇಶ್ವರದ ಹಲವು ದೇವಾಲಯಗಳು ಈರೀತಿಯವು. ಐಹೊಳೆಯ ಹುಚ್ಚುಮಲ್ಲಿಗುಡಿ, ಹುಚ್ಚಪ್ಪಯ್ಯನ ಗುಡಿ, ಚಕ್ರಗುಡಿ, ಪಟ್ಟದಕಲ್ಲಿನ ಗಳಗನಾಥ, ಕಾಶಿವಿಶ್ವೇಶ್ವರ, ಜಂಬುಲಿಂಗ, ಮಹಾಕೂಟದಲ್ಲಿರುವ ಸಂಗಮೇಶ್ವರ ಮುತಾದ ದೇವಾಲಯಗಳನ್ನು ಈ ಶೈಲಿಯ ಅಡಿಯಲ್ಲಿ ಗುರುತಿಸಬಹುದು. ಕೆ. ವಿ. ಸೌಂದರರಾಜನ್‌ರವರು ಈ ದೇವಾಲಯಗಳನ್ನು ರೇಖಾ ನಾಗರ ಪ್ರಾಸಾದವೆಂದಿದ್ದು 'ರೇಖಾ'ಎಂಬ ಪದವು ಕಳಿಂಗ ಶೈಲಿಯ ಬಳುವಳಿಯಾಗಿದೆ. 'ನಾಗರಪ್ರಾಸಾದ' ಎನ್ನುವಲ್ಲಿ ಔತ್ತರೇಯ ಸಂಪ್ರದಾಯವನ್ನು ಗುರುತಿಸಿದೆ. ಭುವನೇಶ್ವರದ ಪರಶುರಾಮೇಶ್ವರ ದೇವಾಲಯವು ಇದೇ ಶೈಲಿಯದೆನಿಸಿದ್ದು ಕರ್ನಾಟಕದ ದೇವಾಲಯಗಳಿಗಿಂತ ಪ್ರಾಚೀನವೆಂದು ದೇವಾಲಯದಲ್ಲಿ ದೊರೆತ ಶಾಸನ ಲಿಪಿಯ ಆಧಾರದಮೇಲೆ ವಿದ್ವಾಂಸರು ಗುರುತಿಸಿದ್ದಾರೆ.ಪಟ್ಟದಕಲ್ಲಿನ ಕಾಶಿವಿಶ್ವೇಶ್ವರ ದೇವಾಲಯದೊಂದಿಗೆ ಅಲಂಪುರದ ಬಾಲಬ್ರಹ್ಮ, ಸತ್ಯವೋಲುವಿನ ರಾಮಲಿಂಗೇಶ್ವರ, ಭೀಮೇಶ್ವರ ದೇವಾಲಯಗಳನ್ನು ಗುರುತಿಸಬಹುದಾಗಿದೆ. ಈ ದೇವಾಲಯಗಳ ಗುರುತಿಸುವಿಕೆಗೂ ಕಳಿಂಗದೇಶದ ವಾಸ್ತುಶಾಸ್ತ್ರಗಳೇ ಆಧಾರವೆನಿಸಿವೆ. ಪಟ್ಟದಕಲ್ಲಿನ ಪಾಪನಾಥ ದೇವಾಲಯದಲ್ಲಿ ದಾಕ್ಷಿಣಾತ್ಯ ಹಾಗೂ ಔತ್ತರೇಯ ಸಂಪ್ರದಾಯದ ರಚನೆಯನ್ನು ಗುರುತಿಸಬಹುದು. ದೇವಾಲಯವು ಕಳಿಂಗ ಶೈಲಿಯ ರೇಖಾ ಶಿಖರವನ್ನು ಹೊಂದಿದ್ದರೆ, ಛಾದ್ಯದ ನಂತರ ಕಂಡುಬರುವ ಕೈಪಿಡಿಗೋಡೆಯ ಮೇಲೆ ದಾಕ್ಷಿಣಾತ್ಯ ರಚನೆಗಳಲ್ಲಿ ಕಂಡುಬರುವ ಹಾರ ರಚನೆಯನ್ನು ಗಮನಿಸಬಹುದು. ಕಳಿಂಗ ಶೈಲಿಯ ದೇವಾಲಯದ ಸ್ತರಗಳು ಊರ್ಧ್ವಕ್ರಮದಲ್ಲಿ ಪಿಷ್ಠ, ಬಾಡ, ಗಂಡಿ ಮತ್ತು ಮಸ್ತಕ ಎಂದು ವಿಭಾಗಿಸಲ್ಪಡುತ್ತದೆ. ಪಿಷ್ಠವು ಪೀಠಭಾಗವೆನಿಸಿದ್ದು, ಪಾಭಾಗ ಎಂದೂ ಹೆಸರಿಲ್ಪಡುತ್ತದೆ. ಪೀಠ ರಚನೆಯು ಕೆಲವೆಡೆಯಲ್ಲಿ ಭಿತ್ತಿ ರಚನೆಯಲ್ಲಿ ಅಂತರ್ಗತವಾಗಿದೆ. ದೇವಾಲಯದ ಊರ್ಧ್ವಕ್ರಮವನ್ನು ತ್ರಯಾಂಗ ಅಥವಾ ಪಂಚಾಂಗ ಎಂದು ಗುರುತಿಸುವುದುಂಟು. ಇದರ ಪ್ರಕಾರ ತ್ರಯಾಂಗವು ಪಾಭಾಗ, ಜಂಘಾ, ಬಾರಂಡ ಎಂದು ವಿಭಾಗಿಸಿದ್ದು ಪಂಚಾಂಗ ರಚನೆಯಲ್ಲಿ ಪಾಭಾಗ, ತಲಜಂಘಾ, ಬಂಧನ, ಉಪರಿ ಜಂಘಾ ಮತ್ತು ಬಾರಂಡ ಎಂಬ ಸ್ತರಗಳವೆ. ಗಂಡಿ ಮತ್ತು ಮಸ್ತಕ ರಚನೆಯನ್ನು ಬಾರಂಡ ಭಾಗವು ಪ್ರತಿನಿಧಿಸಿದೆ. ಬಾಗಿದ ಆಕಾರವುಳ್ಳ ರೇಖಾ ಶಿಖರವೇ ಗಂಡೀ. ಶಿಖರವು ಭೂಮಿ ರಚನೆಗಳನ್ನು ಹೊಂದಿದ್ದು, ಶಿಖರದ ತುದಿಯಲ್ಲಿ, ಭೂಮಿ ರಚನೆಯ ನಂತರ ಬಿಸಮವೆಂಬ ಭಾಗವಿದೆ. ಶಿಖರ ರಚನೆಯು ಮೂಲತಃ ಚತುರಶ್ರವೆನಿಸಿದ್ದು, ಶಿಖರದ ಅಗಲಕ್ಕೂ ವಿಸ್ತರಿಸಿದ ಭಾಗಗಳನ್ನು ತ್ರಿರಥ, ಪಂಚರಥ, ನವರಥ, ಸಪ್ತರಥ ಮುಂತಾಗಿ ಗುರುತಿಸಲ್ಪಟ್ಟಿದೆ. ತ್ರಿರಥದಲ್ಲಿ ಮಧ್ಯಭಾಗವು ರಾಹ ಅಥವಾ ಮಧ್ಯರಥ ಎಂದೆನಿಸಿದ್ದು, ಕರ್ಣಭಾಗವು ಕಣಿಕಾಪಾಗ ಅಥವಾ ಕರ್ಣಿಕಾಭಾಗವೆನ್ನ

ಬಹುದು. ಪಂಚರಥ ರಚನೆಯಲ್ಲಿ ಮಧ್ಯರಥ ಹಾಗೂ ಕರ್ಣಿಕಾಭಾಗದ ನಡುವೆ ಅನುರಾಹ ಅಥವಾ ಅನುರಥದ ರಚನೆಯಿದೆ. ಸಪ್ತರಥ ರಚನೆಯಲ್ಲಿ ಎರಡೆರಡು ಅನುರಾಹಗಳನ್ನು ಕಾಣಬಹುದು. ನವರಥದಲ್ಲಿ ಎರಡು ಅನುರಥದೊಂದಿಗೆ ಪರಿರಾಹ ಅಥವಾ ಪರಿರಥವಿದೆ. ಪ್ರತಿಭೂಮಿಯ ಕರ್ಣ ಅಥವಾ ಕರ್ಣಿಕಾಭಾಗದಲ್ಲಿ ಆಮಲಕ ರಚನೆಯಿದ್ದು ಭೂಮಿ ಆಮ್ಲ ಎಂದೆನಿಸಿದೆ. ಶಿಖರದ ಮೇಲ್ತುದಿಯು ಒಳಕ್ಕೆ ಬಾಗಿದ್ದು ಬಿಸಮ ಎಂದು ಗುರುತಿಸಲ್ಪಟ್ಟಿದೆ. ತದನಂತರ ಮಸ್ತಕ ರಚನೆಯಿದೆ. ಮಸ್ತಕವು, ಬೇಕಿ ಅಥವಾ ಕಂಠ, ಆಮ್ಲ ಅಥವಾ ಆಮಲಸಾರ, ಖಾಪುರಿ ಅಥವಾ ಚಂದ್ರಿಕಾ, ಕಳಶ ಮತ್ತು ಆಯುಧ ಭಾಗಗಳನ್ನು ಹೊಂದಿದೆ. ಇದು ಕಳಿಂಗ ಶೈಲಿಯ ವಾಸ್ತು ರಚನೆಯು. ಐಹೊಳೆಯ ತಾರಬಸಪ್ಪನ ಗುಡಿ, ಹುಚ್ಚುಮಲ್ಲಿಗುಡಿ, ಮಹಾಕೂಟದಲ್ಲಿರುವ ಸಂಗಮೇಶ್ವರ ಇವು ತ್ರಿರಥಗಳುಳ್ಳ ತ್ರಿಭೂಮಿಗಳಿಂದ ಕೂಡಿದ ರಚನೆಗಳು. ಪಟ್ಟದಕಲ್ಲಿನ ಶಂಭುಲಿಂಗ, ಗಳಗನಾಥ, ಪಾಪನಾಥ ದೇವಾಲಯಗಳು ಚತುರ್ಭೂಮಿ ರಚನೆಗಳು. ಈ ದೇವಾಲಯಗಳಿಗಿಂತ ಕೊಂಚ ಮುಂದುವರೆದದ್ದು ಪಟ್ಟದಕಲ್ಲಿನ ಕಾಶಿವಿಶ್ವೇಶ್ವರ ದೇವಾಲಯ. ಇದು ಪಂಚಭೂಮಿ ರಚನೆಯೆನಿಸಿದ್ದು ಹೆಚ್ಚು ಅಲಂಕಾರದಿಂದ ಕೂಡಿದೆ. ಕರ್ನಾಟಕದ ದೇವಾಲಯಗಳಲ್ಲಿ ಬಿಸಮ ರಚನೆಗೆ ಬದಲಾಗಿ ಪ್ರತ್ಯೇಕ ವೇದಿಕಾರಚನೆಯಿದ್ದು ನಂತರ ಆಮಲಸಾರ ಮತ್ತು ಕಳಶವಿದೆ. ಈ ದೇವಾಲಯಗಳ ಪ್ರತ್ಯೇಕ ಅಧ್ಯಯನದ ಅವಶ್ಯಕತೆಯಿದೆ. ರೇಖಾ ಶಿಖರದನಂತರ ಪೀಢಾರಚನೆಯು ಗುರುತಿಸಲ್ಪಟ್ಟದ್ದು, ಇದು ಮೂಲತಃ ಮೆಟ್ಟಿಲು ಮೆಟ್ಟಿಲಾಗಿ ಮೇಲೇರುವ ರಚನೆಯೆನಿಸಿದೆ. ಭುವನೇಶ್ವರದ ಪರಶುರಾಮೇಶ್ವರ ಮತ್ತು ಐಹೊಳೆ ಪಟ್ಟದಕಲ್ಲುಗಳಲ್ಲಿ ಪೀಢಾರಚನೆಯಿಲ್ಲ. ತದನಂತರದ ಕಾಲದಲ್ಲಿ ಒರಿಸ್ಸಾದಲ್ಲಿ ಬೆಳೆದ ದೇವಾಲಯಗಳು ರೇಖಾ ದೇವಾಲಯಗಳ ಮುಂಭಾಗದಲ್ಲಿ ಮಂಡಪದ ಮೇಲೆ ಪೀಢಾ ರಚನೆಯನ್ನು ಅಳವಡಿಸಿಕೊಂಡಿತು. ಕರ್ನಾಟಕದ ದೇವಾಲಯಗಳಿಗೆ ಸಂಬಂಧಿಸಿದಂತೆ ಈ ರಚನೆಯು ಇಲ್ಲವೆಂದೇ ತಿಳಿಯಬಹುದು. ಕಳಿಂಗ ಶೈಲಿಯ ರೇಖಾ ರಚನೆಯಲ್ಲಿ ಕರ್ನಾಟಕದ ದೇವಾಲಯಗಳಿಗೂ ಭುವನೇಶ್ವರದ ದೇವಾಲಯಗಳಿಗೂ ಸಾಕಷ್ಟು ಪ್ರಾದೇಶಿಕ ವ್ಯತ್ಯಾಸಗಳಿದ್ದರೂ ಭೂಮಿ ಅಲಂಕರಣದಲ್ಲಿರುವ ಸಾಮ್ಯವನ್ನು ಗಮನಿಸಬೇಕು.

ರೇಖಾ ಶಿಖರವುಳ್ಳ ಮಹಾಕೂಟದ ಸಂಗಮೇಶ್ವರ ದೇವಾಲಯ ಗರ್ಭಗೃಹ ಹಾಗೂ ನಾಲ್ಕು ಸ್ತಂಭಗಳ ಮಂಟಪವನ್ನು ಹೊಂದಿದೆ. ಮಂಟಪದ ಇಕ್ಕೆಲಗಳಲ್ಲಿಯೂ ಕಕ್ಷಾಸನಕ್ಕೆ ಅವಕಾಶವಿದ್ದು ಅತಿಸಾಮಾನ್ಯ ಹಾಗೂ ಸರಳ ರಚನೆಯೆನಿಸಿದೆ. ಐಹೊಳೆಯ ಹುಚ್ಚುಮಲ್ಲಿಗುಡಿ, ದುರ್ಗಾದೇವಾಲಯಗಳಲ್ಲಿ ಪ್ರದಕ್ಷಿಣಾ ಪಥವಿದೆ. ತಾರಬಸಪ್ಪನ ಗುಡಿ ಮತ್ತು ಹುಚ್ಚಪ್ಪಯ್ಯನ ಗುಡಿಗಳಲ್ಲಿ ಗರ್ಭಗೃಹದ ಮುಂದುಗಡೆ ಎರಡುಸಾಲು ಸ್ತಂಭರಚನೆಯಿದ್ದು ಮೇಲ್ಗಡೆ ಸಮತಟ್ಟಾದ ಛಾದ್ಯವಿದೆ. ಈ ಸಾಲು

ಸ್ತಂಭಗಳ ಇಕ್ಕೆಲಗಳಲ್ಲಿ ಇಳಿಜಾರಾದ ಛಾವಣಿ ಇದ್ದು ಭಿತ್ತಿಯಿಂದ ಆವರಿಸಲ್ಪಟ್ಟಿದೆ. ಐಹೊಳೆಯ ದೇವಾಲಯಗಳಲ್ಲಿ ಮುಂದುಗಡೆ ಮುಖಮಂಟಪವಿದೆ. ಭುವನೇಶ್ವರದ ಪರಶುರಾಮೇಶ್ವರ ದೇವಾಲಯದಲ್ಲಿ ಇಳಿಜಾರಾದ ಛಾವಣಿಯು ಮುಂದಕ್ಕೂ ಆವರಿಸಿದೆ. ಭಿತ್ತಿಯಲ್ಲಿ ಕೆಲವೆಡೆ ಜಾಲಂದ್ರ ಜೋಡಣೆಯನ್ನು ಕಾಣಬಹುದು. ದೇವಾಲಯದ ರೇಖಾಶಿಖರ ಅಥವಾ ಶೃಂಗಭಾಗದ ಮುಂದುಗಡೆ ತ್ರಿವಲ್ಲಿ ಅಥವಾ ಚೈತ್ಯಾಕಾರದ ಶುಕನಾಸ ರಚನೆಯನ್ನು ಕಾಣಬಹುದು. ಇವಿಷ್ಟೂ ಕರ್ನಾಟಕದಲ್ಲಿ ಕಂಡುಬಂದ ಕಳಿಂಗ ಶೈಲಿಯ ಸ್ಥೂಲ ಲಕ್ಷಣಗಳು.

ಲತಿನ ಮತ್ತು ವಿಮಾನ ನಾಗರ ಶೈಲಿ

ಔತ್ತರೇಯ ಗ್ರಂಥಗಳಲ್ಲಿ ನಾಗರವೆನ್ನುವ ಪದ ವ್ಯಾಪಕವಾಗಿ ಬಳಕೆಯಾಗಿದ್ದರೂ ಹಲವಾರು ಪ್ರಭೇದಗಳು ಕಾಲ ದೇಶಕ್ಕೆ ತಕ್ಕಂತೆ ವ್ಯಕ್ತವಾಗಿವೆ. ಕರ್ನಾಟಕದಲ್ಲಿ ಕಳಿಂಗ ಶೈಲಿಯು, ಬಾದಾಮಿ ಚಾಲುಕ್ಯರ ಕಾಲದಲ್ಲಿ ಗುರುತಿಸಲ್ಪಟ್ಟಿದ್ದು ಇನ್ನಿತರ ಪ್ರಭೇದಗಳು ಕಡಿಮೆ. ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರ ಕಾಲದಲ್ಲಿ ಲತಿನ ಹಾಗೂ ವಿಮಾನ ನಾಗರ ಶೈಲಿಯೂ ಗುರುತಿಸಲ್ಪಟ್ಟಿದೆ. ಸೌರಾಷ್ಟ್ರದಲ್ಲಿರುವ ಈ ಶೈಲಿ ಹಾಗೂ ಪ್ರಭೇದಗಳನ್ನು 'ಅಪರಾಜಿತ ಪೃಚ್ಛಾ' ಹಾಗೂ 'ಪ್ರಾಸಾದ ಮಂಡನ' ಗ್ರಂಥಗಳು ವಿವರಿಸಿದ್ದು ಕರ್ನಾಟಕದಲ್ಲಿ ಕೆಲವೆಡೆಗಳಲ್ಲಿ ಗುರುತಿಸಬಹುದು.

'ಪ್ರಾಸಾದಮಂಡನ'ದ ಗ್ರಂಥಕಾರನು "ಶೃಂಗೇಣೈಕೇನ ಲತಿನಃ"[32] ಎಂದು ಲತಿನ ಜಾತಿಯನ್ನು 'ಅಪರಾಜಿತಪೃಚ್ಛಾ' ಗ್ರಂಥಕಾರನು "ನ ಏಕಾಂಡೈಶ್ಚವಿಭೂಶಿತಾನ್"[33] ಎಂದು ವಿಮಾನ ನಾಗರ ಶೈಲಿಯನ್ನೂ ಗುರುತಿಸಿದ್ದಾರೆ. ಇದರಿಂದ ಏಕ ಶೃಂಗವುಳ್ಳದ್ದು ಲತಿನ ಎಂದೂ ಬಹುಶೃಂಗವುಳ್ಳದ್ದು ವಿಮಾನ ನಾಗರವೆಂದೂ ಗುರುತಿಸಬಹುದಾಗಿದೆ. ಇವೆರಡೂ ಶೈಲಿಗಳಿಗೆ ಕರ್ನಾಟಕದಲ್ಲಿ ಒಂದೊಂದು ಉದಾಹರಣೆಗಳನ್ನು ನೀಡಬಹುದಾಗಿದೆ. ಬೆಳಗಾಂ ಜಿಲ್ಲೆಯ ಹತ್ತರಗಿಯಲ್ಲಿರುವ ಶಿಖರೇಶ್ವರ ದೇವಾಲಯವು[34] ಲತಿನ ಶಿಖರವನ್ನು ಹೊಂದಿದ್ದು, ಧಾರವಾಡ ಜಿಲ್ಲೆಯ ಹಾನುಗಲ್ಲಿನ ಗಣಪತಿ ದೇವಾಲಯವು ವಿಮಾನ ನಾಗರ ಶೈಲಿಗೆ ಉದಾಹರಣೆ ಎನಿಸಿದೆ. ಹತ್ತರಗಿಯ ಶಿಖರೇಶ್ವರ ದೇವಾಲಯದ ಶಿಖರವು ಸಾಕಷ್ಟು ಹಾಳಾಗಿದ್ದು ಲಕ್ಷಣಗಳ ಗುರುತಿಸುವಿಕೆಯಲ್ಲಿ ತೊಡಕೆನಿಸಿದೆ. ಆದರೆ ಲತಿನ ಶೈಲಿಯ ಶಿಖರದ ಮಾದರಿಗಳು ಕಲ್ಯಾಣಿ ಚಾಲುಕ್ಯರ ಹಾಗೂ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಭಿತ್ತಿ ಅಥವಾ ಕಕ್ಷಾಸನದ ಭಾಗದಲ್ಲಿ ಅಲಂಕೃತಗೊಂಡಿರುವುದನ್ನು ಕಾಣಬಹುದು.

ವಿಮಾನ ನಾಗರ ಶೈಲಿಯೆನಿಸಿದ ಹಾನುಗಲ್ಲಿನ ಗಣಪತಿ ದೇವಾಲಯವು ಎತ್ತರವಾದ ಪೀಠರಚನೆಯನ್ನು ಹೊಂದಿದ್ದು ಗರ್ಭಗೃಹ, ಅಂತರಾಳ ಅಥವಾ ಕೋಲಿಕಾ ಮತ್ತು ಮಂಡಪಗಳನ್ನು ಹೊಂದಿದೆ. ಮಂಡಪದ ಹೊರಭಾಗ ಸಾಕಷ್ಟು ಹಾಳಾಗಿ

ದ್ದರೂ ಮೂಲರಚನೆಯನ್ನು ಗುರುತಿಸಬಹುದು. ದೇವಾಲಯದ ಗರ್ಭಗೃಹವು ಪಂಚಾಂಗರಚನೆ ಎನಿಸಿದ್ದು ಶೃಂಗಜೋಡಣೆಯು ಮಂದರ[35] ಎಂಬ ಪ್ರಭೇದವೆಂದು ಗುರುತಿಸಲ್ಪಡುತ್ತದೆ. ಈ ಪ್ರಭೇದದ ಮಾದರಿಯನ್ನು ತಿಳವಳ್ಳಿಯ ಶಾಂತೇಶ್ವರ ದೇವಾಲಯದ ಜಂಘಾಭಾಗದಲ್ಲಿ ಕಾಣಬಹುದು. ವಿಮಾನ ನಾಗರ ರಚನಯಲ್ಲಿ, ತ್ರಯಾಂಗ, ಪಂಚಾಂಗ, ಸಪ್ತಾಂಗ ರಚನೆಗಳಿದ್ದು ತಲಚ್ಛಂದಕ್ಕೆ ತಕ್ಕಂತೆ ಶಿಖರ ಭಾಗದಲ್ಲಿ ಶೃಂಗ ರಚನೆಯನ್ನು ಕಾಣಬಹುದು. ಪ್ರಸ್ತುತ ದೇವಾಲಯದಲ್ಲಿ ಭದ್ರಭಾಗದಲ್ಲಿ ಎರಡು ಉರು ಶೃಂಗಗಳು, ಕರ್ಣಭಾಗದಲ್ಲಿ ಎರಡುಶೃಂಗಗಳು, ಪ್ರತಿರಥದ ಭಾಗದಲ್ಲಿ ಒಂದೊಂದು ಶೃಂಗಗಳು ಮತ್ತು ಮೂಲಶೃಂಗವೂ ಸೇರಿದಂತೆ 25 ಶೃಂಗಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಶೃಂಗಗಳು ಹೆಚ್ಚಿನ ಅಲಂಕರಣವಿಲ್ಲದೆ ಸರಳ ರೀತಿಯವು. ಶೃಂಗದ ತುದಿಯಲ್ಲಿ ಆಮಲಸಾರದ ನಂತರ ಗುಬಟೆಯಾಕಾರದ ಕಳಶವಿದೆ. ಗರ್ಭಗೃಹದ ಮುಂದಿರುವ ಮಂಡಪವು ತೆರೆದ ಮಂಡಪವೆನಿಸಿದ್ದು ಕಕ್ಷಾಸನವನ್ನು ಹೊಂದಿದೆ. ಕಕ್ಷಾಸನದ ಹೊರಭಾಗದಲ್ಲಿ ಲತಿನ ಶೈಲಿಯ ಶೃಂಗಗಳ ಅಲಂಕಾರವಿದೆ. ಇವಿಷ್ಟು ವಿಮಾನನಾಗರ ಶೈಲಿಯ[36] ಗಣಪತಿ ದೇವಾಲಯದ ಲಕ್ಷಣಗಳು.

ಭೂಮಿಜ ಶೈಲಿ :

ಪ್ರೊ|| ಢಾಕೆಯವರು ತುರುವೇಕೆರೆಯ ಮೂಲೆ ಶಂಕರೇಶ್ವರ ಹಾಗೂ ನುಗ್ಗೇಹಳ್ಳಿಯ ಸದಾಶಿವ ದೇವಾಲಯಗಳನ್ನು ಪ್ರಾದೇಶಿಕ ಲಕ್ಷಣಗಳುಳ್ಳ ಭೂಮಿಜ ಶೈಲಿ ಎನ್ನುತ್ತಾರೆ. ಭೂಮಿಜ ಶೈಲಿಯ ಸ್ವತಂತ್ರ ದೇವಾಲಯಗಳಾಗಿ ಕರ್ನಾಟಕದಲ್ಲಿ ಇವೆರಡು ದೇವಾಲಯಗಳು ಹೊಯ್ಸಳರ ಕಾಲದ ರಚನೆಗಳೆನಿಸಿವೆ. ಬಾಗಿದ ಶಿಖರವುಳ್ಳ ಆಮಲಸಾರವುಳ್ಳ ಈ ಶೈಲಿಯ ಶಿಖರಮಾದರಿಗಳನ್ನು ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿಯೂ ಕಾಣಬಹುದು. ಭೂಮಿಜ ಶೈಲಿಯನ್ನು ಲತಿನ, ವಿಮಾನ ನಾಗರ ಶೈಲಿಗಳ ನಂತರ ಗುರುತಿಸಬಹುದಾಗಿದ್ದು ತದನಂತರ ಔತ್ತರೇಯ ದ್ರಾವಿಡ ಶೈಲಿಯನ್ನು ಹೆಸರಿಸಬಹುದು. ಈ ಶೈಲಿಯು ಮೂಲತಃ ಬಾಗಿದ ಶಿಖರ ಹಾಗೂ ಆಮಲಸಾರವನ್ನು ಹೊಂದಿದ್ದು ತದನಂತರ ಮೆಟ್ಟಿಲು ಮೆಟ್ಟಿಲಾಕಾರದ ಶಿಖರ ಹಾಗೂ ಘಂಟಾರಚನೆಗೆ ವಾಲಿದ್ದನ್ನು ಗಮನಿಸಬಹುದು. ಹೊಯ್ಸಳರ ಕಾಲದ ಇವೆರಡು ದೇವಾಲಯಗಳು ಚತುರಶ್ರಾಕಾರ ಹಾಗೂ ನಕ್ಷತ್ರಾಕಾರ ತಲಚ್ಛಂದವನ್ನು ಹೊಂದಿದ್ದು ಘಂಟಾ ಶಿಖರವನ್ನು ಹೊಂದಿವೆ. ಇದರಿಂದಾಗಿ ಪ್ರೊ|| ಢಾಕೆಯವರು ಪ್ರಾದೇಶಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡ ಭೂಮಿಜ ಶೈಲಿ ಎನ್ನುತ್ತಾರೆ. ವರ್ಗೀಕರಣದಲ್ಲಿ ಭೂಮಿಜ ಶೈಲಿಯನ್ನು ದ್ರಾವಿಡ ಶೈಲಿಯೊಂದಿಗೆ ಗುರುತಿಸುವುದು ವಿಶೇಷವೆನಿಸಿದೆ. ಅಪರಾಜಿತ ಪೃಚ್ಛಾಗ್ರಂಥಕಾರನು "ಕರ್ಣೇ ಪ್ರತಿರಥೇ ಲತಾ ಶೃಂಗಾಣಿ ಕಾರಯೇತ್"[37] ಎಂದು ಉಲ್ಲೇಖಿಸಿದ್ದು ಭೂಮಿಜ ಶೈಲಿಯ ಶೃಂಗರಚನೆಯನ್ನು ಲತಾಶೃಂಗ ಎಂದು ಬಣ್ಣಿಸಿದ್ದಾನೆ. ಶೃಂಗಗಳ ಜೋಡಣೆಯನ್ನು "ಏಷ ಚೋದಯೆ

ಆಖ್ಯಾತಃ ಶೃಂಗಾಣಾಂ ಮಾಲಿಕಾಕ್ರಮಃ"[38] ಎಂದು ಗುರುತಿಸಲ್ಪಟ್ಟಿದ್ದು ಪ್ರತಿ ಭೂಮಿರಚನೆಯಲ್ಲಿರುವ ಶೃಂಗಗಳು ಒಂದರ ಮೇಲೊಂದು ಮಾಲಿಕಾಕಾರದಲ್ಲಿ ರಚಿಸಲ್ಪಟ್ಟಿವೆ. ಪ್ರಾಸಾದಮಂಡನ ಗ್ರಂಥವು ಭೂಮಿಜಶೈಲಿಯೆನ್ನು "ಭೂಮಿಕೋಪರಿ ಭೂಮಿಶ್ಚ ಹ್ರಸ್ವಹ್ರಸ್ವ ನವಾಂತಕಂ"[39] ಎಂದು ಗುರುತಿಸಿದ್ದು ಮೇಲಕ್ಕೇರುತ್ತಾ ಕಿರಿದಾಗುವ ಭೂಮಿಗಳ ರಚನೆಯನ್ನು ಒಂಬತ್ತರವರೆಗೆ ರಚಿಸಬಹುದಾಗಿದೆ. ಭದ್ರ ಭಾಗದಲ್ಲಿ ಉರುಶೃಂಗ ರಚನೆಯಿಲ್ಲ. ಇದಕ್ಕೆ ಬದಲಾಗಿ ಏಕಮುಖವಾದ ಪಟ್ಟಿಕೆಯ ರಚನೆಯಿದ್ದು ಶಿಖರದ ತಳದಿಂದ ಘಂಟಾಕಾರದವರೆಗೆ ಭೂಮಿರಚನೆಯು ಅಡೆತಡೆಯಿಲ್ಲದೆ ಸಾಗುತ್ತದೆ. ಇದರಿಂದ ಗ್ರಂಥಕಾರರು "ಭದ್ರೇಚ ಶೃಂಗಮೇಕಂ"[40] ಎಂದು ಗುರುತಿಸುತ್ತಾರೆ. ತುರುವೇಕೆರೆಯ ಮೂಲೆ ಶಂಕರೇಶ್ವರ ದೇವಾಲಯವು ಚತುರಶ್ರಾಕಾರವೆನಿಸಿದ್ದು ಚತುರ್ಭೂಮಿಗಳಿಂದ ಕೂಡಿದೆ. ನುಗ್ಗೇಹಳ್ಳಿಯ ಸದಾಶಿವ ದೇವಾಲಯವು ನಕ್ಷತ್ರಾಕಾರವೆನಿಸಿದ್ದು ತ್ರಿಭೂಮಿಗಳಿಂದ ರಚಿಸಲ್ಪಟ್ಟಿದೆ. ಮೂಲೆ ಶಂಕರೇಶ್ವರ ದೇವಾಲಯದ ಭದ್ರಭಾಗವು ಏಕಮುಖವಾದ ಪಟ್ಟಿಯಿಂದಕೂಡಿದೆ. ಸದಾಶಿವ ದೇವಾಲಯದಲ್ಲಿ ಭದ್ರಭಾಗಕ್ಕೆ ಬದಲಾಗಿ ನಕ್ಷತ್ರಾಕಾರವಾಗಿರುವುದರಿಂದ ಪ್ರತಿಕರ್ಣಗಳ ಮಧ್ಯೆ ನಂದಿಕಾರಚನೆಯಿದ್ದು ಈ ಭಾಗದಲ್ಲಿ ದ್ವಿಮುಖವುಳ್ಳ ನೀಳವಾದ ಪಟ್ಟಿಕೆಯಿದೆ. ಭೂಮಿಜ ಶೈಲಿಯಲ್ಲಿ ಈ ಲಕ್ಷಣಗಳನ್ನು ಗುರುತಿಸಲಾಗಿದ್ದು ಈ ದಿಸೆಯಲ್ಲಿ ಮತ್ತಷ್ಟು ಅಧ್ಯಯನ ನಡೆಯಬೇಕಾಗಿದೆ.

ಔತ್ತರೇಯ ದ್ರಾವಿಡ ಶೈಲಿ :

ದಾಕ್ಷಿಣಾತ್ಯ ದೇವಾಲಯಗಳು ಸ್ತೂಪಿಯಲ್ಲಿ ಅಂತ್ಯಗೊಂಡರೆ, ಔತ್ತರೇಯ ದೇವಾಲಯಗಳು ಕಲಶರಚನೆಯಿಂದ ಪೂರ್ಣಗೊಳ್ಳುತ್ತವೆ. ಔತ್ತರೇಯ ದ್ರಾವಿಡ ಶೈಲಿಯ ರಚನೆಯನ್ನು ಊರ್ಧ್ವಕ್ರಮರೀತ್ಯಾ ಪೀಠ, ಜಂಘಾ, ಛಾದ್ಯ, ಭೂಮಿ, ಘಂಟಾ, ಕಲಶ ಎಂದು ಗುರುತಿಸಬಹುದು. ಭೂಮಿರಚನೆಯಲ್ಲಿ ಹನ್ನೆರಡರವರೆಗೆ ಅವಕಾಶವಿದ್ದರೂ, ಐದರವರೆಗಿನ ರಚನೆಗಳು ಹೆಚ್ಚು. ಪ್ರತಿಭೂಮಿ ರಚನೆಯಲ್ಲಿ ಕರ್ಣಕೂಟ, ಪಂಜರ, ಶಾಲಾ ರಚನೆಗಳಿದ್ದು ದಾಕ್ಷಿಣಾತ್ಯ ದೇವಾಲಯದಂತೆ ಕಾಣುವುದು ಸಹಜ. ಚಾಲುಕ್ಯರ ಕಾಲದಲ್ಲಿ ಚತುರಶ್ರಾಕಾರ ರಚನೆಗಳು ಹೆಚ್ಚು. ಹೊಯ್ಸಳರ ಕಾಲದಲ್ಲಿ ಚತುರಶ್ರಾಕಾರ ಹಾಗೂ ನಕ್ಷತ್ರಾಕಾರ ರಚನೆಗಳಿವೆ. ಚಾಲುಕ್ಯರ ಕಾಲದಲ್ಲಿ ಜಗತಿಯ ರಚನೆಯು ಅಪರೂಪ. ಹೊಯ್ಸಳರ ಕಾಲದಲ್ಲಿ ಜಗತಿಯ ರಚನೆಗಳು ಗಮನಾರ್ಹ. ಚತುರಶ್ರಾಕಾರ ತಲಚ್ಛಂದದಲ್ಲಿ ಸ್ವಸ್ತಿಕ, ಸರ್ವತೋಭದ್ರ ಹಾಗೂ ವರ್ಧಮಾನವೆನ್ನುವ ಪ್ರಭೇದಗಳನ್ನೂ ನಕ್ಷತ್ರಾಕಾರ ರಚನೆಯಲ್ಲಿ ಪದ್ಮ ಮತ್ತು ಮಹಾಪದ್ಮ ಎಂಬ ಪ್ರಭೇದಗಳನ್ನೂ ಕಾಣಬಹುದು. ಚಾಲುಕ್ಯರ ಕಾಲದಲ್ಲಿಯೇ ಸಾಕಷ್ಟು ಪ್ರಯೋಗಶೀಲತೆಯನ್ನು ಕಾಣಬಹುದಾಗಿದ್ದು, ಲಕ್ಕುಂಡಿಯ ಕಾಶಿವಿಶ್ವೇಶ್ವರ, ನನ್ನೇಶ್ವರ ಮುಂತಾದ ದೇವಾಲಯಗಳು ಆರಂಭರಚನೆಗಳೆನಿಸಿದ್ದು

ಭೂಮಿ ಹಾಗೂ ಘಂಟಾರಚನೆಗಳು ನಿಶ್ಚಿತ ಸ್ಥಿತಿಯನ್ನು ತಲುಪಿಲ್ಲವೆನ್ನಬಹುದು. ಕುಬಟೂರಿನ ಕೋಟೀಶ್ವರ, ಹಾನುಗಲ್ಲಿನ ತಾರಕೇಶ್ವರ, ಇಟ್ಟಗಿಯ ಮಹಾದೇವ, ಲಕ್ಷ್ಮೇಶ್ವರದ ಸೋಮೇಶ್ವರ, ಗದುಗಿನ ತ್ರಿಕೂಟೇಶ್ವರ ಇವು ಪೂರ್ಣಪ್ರಮಾಣದ ವಿಶಾಲ ದೇವಾಲಯಗಳು. ಚಾಲುಕ್ಯರ ಕಾಲದ ನಕ್ಷತ್ರಾಕಾರ ರಚನೆಯೆನಿಸಿದ ಡಂಬಳದ ದೊಡ್ಡಬಸಪ್ಪ ದೇವಾಲಯವನ್ನು ಗಮನಿಸಬಹುದು. ಜಗತಿಯ ಪ್ರಯೋಗವೂ ಚಾಲುಕ್ಯರ ಕಾಲದಲ್ಲಿಯೇ ನಡೆದದ್ದು ಲಕ್ಷ್ಮೇಶ್ವರದ ಈಶ್ವರ ದೇವಾಲಯವೊಂದರಲ್ಲಿ ಗಮನಿಸಬಹುದು. ಮರಳುಗಲ್ಲಿನ ರಚನೆಯಾಗಿ ಕುಕ್ಕನೂರಿನ ಕಲ್ಲೇಶ್ವರ, ಬಾದಾಮಿಯ ಯಲ್ಲಮ್ಮನ ಗುಡಿಗಳನ್ನು ಗಮನಿಸಬಹುದು. ಔತ್ತರೇಯ ದ್ರಾವಿಡಶೈಲಿಯ ದೇವಾಲಯಗಳು ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯದಂತೆ ಕಾಣುವುದು ಸಹಜ. ದಾಕ್ಷಿಣಾತ್ಯ ದೇವಾಲಯದ ಉಪಪೀಠಕ್ಕೆ ಬದಲಾಗಿ ಖರಶಿಲಾ ಮತ್ತು ಭಿಟ್ ಎಂಬ ಸ್ತರಗಳನ್ನು ಗಮನಿಸಬಹುದು. ಪೀಠರಚನೆಯಲ್ಲಿ ಜಾಡ್ಯಕುಂಭ. ಕರ್ಣಿಕಾ, ಕಪೋತ, ಕಂಟಕ, ವೇದಿ ಮುಂತಾದ ಸ್ತರಗಳಿವೆ. ಜಾಡ್ಯ ಕುಂಭವು ಖುರಕ ಮತ್ತು ಪದ್ಮಪತ್ರಿಕಾ ಎಂಬ ಎರಡು ಸ್ತರಗಳನ್ನೊಳಗೊಂಡಿದೆ. ಪೀಠರಚನೆಯು ಅಧಿಷ್ಠಾನಕ್ಕೆ ಸಮನಾದುದು. ಅಧಿಷ್ಠಾನದ ಉಪಾನ, ಜಗತಿ, ಕುಮುದ, ಕಂಠ, ಪಟ್ಟಿಕಾ ಪ್ರತಿ ರಚನೆಗಳಿಗಿಂತ ಪೀಠದ ಸ್ತರಗಳು ಭಿನ್ನವೆನಿಸಿವೆ. ಪೀಠರಚನೆಯ ನಂತರ ಜಂಘಾ ರಚನೆಯಿದೆ. ಭಿತ್ತಿ ಎನ್ನುವ ಪದ ಔತ್ತರೇಯ ಗ್ರಂಥ ಗಳಲ್ಲಿಯೂ ಬಳಕೆಯಲ್ಲಿದೆ. ಜಂಘಾ ರಚನೆಯಲ್ಲಿ ಇನ್ನಿತರ ಔತ್ತರೇಯ ಶೈಲಿಗಳ ಶಿಖರಗಳ ಮಾದರಿಗಳನ್ನು ಅಲಂಕರಣಕ್ಕಾಗಿ ಬಳಸಿದ್ದಾರೆ. ಕೆಲವೆಡೆ ದೇವತಾ ಮೂರ್ತಿಗಳ ಫಲಕಗಳನ್ನು ಜೋಡಿಸಿರುವುದುಂಟು. ಹೊಯ್ಸಳರ ಕಾಲದಲ್ಲಿ ಭಿತ್ತಿಯ ಬೋಳುತನವನ್ನು ಪರಿಹರಿಸಲು ಕೂಟಛಾದ್ಯವೆಂಬ ರಚನೆಯನ್ನು ಕಾಣಬಹುದು. ಜಂಘಾಭಾಗದಲ್ಲಿ ಕೆಲವೆಡೆ ನೀಳವಾದ ಸ್ತಂಭಿಕೆಗಳನ್ನು ಕಡೆದಿದ್ದು ಜಂಘಾ ರಚನೆಯ ನಂತರ ಛಾದ್ಯವನ್ನು ಕಾಣಬಹುದು. ಛಾದ್ಯವು ಪ್ರಾರಂಭಿಕ ದೇವಾಲಯಗಳಲ್ಲಿ ಕೇವಲ ಕಪೋತದಂತಿದ್ದು ತದನಂತರದ ಕಾಲದಲ್ಲಿ ಮುಂದಕ್ಕೆ ಬಾಗುವುದನ್ನು ಗಮನಿಸ ಬಹುದು.ಚಾಲುಕ್ಯರ ಕಾಲದ ದೇವಾಲಯಗಳ ಗರ್ಭಗೃಹದ ಹೊರಭಾಗದಲ್ಲಿ ಛಾದ್ಯವು ಹೆಚ್ಚುಬಾಗಿಲ್ಲ. ಆದರೆ ಮಂಡಪ ರಚನೆಯಲ್ಲಿ ಹೆಚ್ಚು ಬಾಗುವಿಕೆಯನ್ನು ಗಮನಿಸ ಬಹುದು. ಹೊಯ್ಸಳರ ಕಾಲದ ದೇವಾಲಯಗಳ ಗರ್ಭಗೃಹದ ಭಾಗದಲ್ಲಿಯೂ ಛಾದ್ಯವು ಹೆಚ್ಚು ಬಾಗಿರುವುದನ್ನು ಗಮನಿಸಬಹುದು. ಈ ರಚನೆಯು ಜಂಘಾ ಭಾಗಕ್ಕೆ ಹೆಚ್ಚು ರಕ್ಷಣೆಯನ್ನು ಒದಗಿಸುತ್ತದೆ. ಛಾದ್ಯದ ನಂತರ ಭೂಮಿರಚನೆ ಯಿದ್ದು ತಲಚ್ಛಂದದ ಆಕಾರವನ್ನು ಅನುಸರಿಸುತ್ತದೆ. ಭೂಮಿಯ ರಚನೆಯನ್ನು ಜಂಘಾ ಮತ್ತು ಕೂಟ ಎಂದು ಎರಡುಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಪ್ರತಿಭೂಮಿಯ ವಿಸ್ತಾರವು ಕರ್ಣಕೂಟ, ಹಾರಾಂತರ, ಪಂಜರ, ಹಾರಾಂತರ

ಶಾಲಾ ಎಂದು ಕರ್ಣದಿಂದ ಮಧ್ಯಭಾಗದವರೆಗೆ ಗುರುತಿಸಬಹುದು. ನಕ್ಷತ್ರಾಕಾರರಚನೆಯಲ್ಲಿ ಕರ್ಣಭಾಗವು ಕೂಟರಚನೆಗಳನ್ನೊಳಗೊಂಡಿದೆ. ಪ್ರತಿ ಭೂಮಿಯ ಸ್ತರಗಳನ್ನು ಪುನಃ, ಜಂಘಾ, ಕಪೋತ, ಕಂಟಕ, ವೇದಿ ಹಾಗೂ ಕೂಟ ಎಂದು ಗುರುತಿಸಬಹುದು.

ದಾಕ್ಷಿಣಾತ್ಯ ದೇವಾಲಯಗಳಲ್ಲಿ ಭೂಮಿರಚನೆಯ ಭಾಗವು 'ತಾಲ' ಎಂದು ಗುರುತಿಸಲ್ಪಡುತ್ತದೆ. ತಾಲ ರಚನೆಯು ಸಾಮಾನ್ಯವಾಗಿ ಚತುರಶ್ರಾಕಾರ ಎನಿಸಿದ್ದು, ತದನಂತರ ಕಂಠ, ಶಿಖರ, ಸ್ತೂಪಿಗಳನ್ನು ಕಾಣಬಹುದು. ಕಂಠ ಹಾಗೂ ಶಿಖರಗಳ ಆಕಾರವನ್ನು ಶೈಲಿಯು ನಿರ್ಧರಿಸುತ್ತದೆ ಎಂದು ಗಮನಿಸಿದ್ದೇವೆ. ಭೂಮಿರಚನೆಯಿಂದ ಭಿನ್ನವಾಗಿ ಚತುರಶ್ರವಲ್ಲದೆ ವೃತ್ತ ಅಥವಾ ಅಷ್ಟಾಶ್ರವೆನಿಸಬಹುದು.

ಆದರೆ, ಔತ್ತರೇಯ ದ್ರಾವಿಡ ಶೈಲಿಯಲ್ಲಿ ತಲಚ್ಛಂದದ ಆಕಾರದಲ್ಲಿಯೇ ವೇದಿ ಹಾಗೂ ಘಂಟಾರಚನೆಗಳಿದ್ದು ಕಲಶದಲ್ಲಿ ಪರ್ಯವಸಾನಗೊಳ್ಳುತ್ತದೆ. ಇವು ಔತ್ತರೇಯ ದ್ರಾವಿಡಶೈಲಿಯ ಪ್ರಮುಖ ಲಕ್ಷಣಗಳು. ಸೋಮನಾಥಪುರದ ಕೇಶವ, ಅರಸೀಕೆರೆಯ ಶಿವಾಲಯ, ನುಗ್ಗೇಹಳ್ಳಿಯ ಕೇಶವ, ಹಾರ್‍ನಹಳ್ಳಿಯ ಕೇಶವ, ಈಶ್ವರ, ಕೋರಮಂಗಲದ ಬೂಚೇಶ್ವರ. ಬೆಳವಾಡಿಯ ವೀರನಾರಾಯಣ ಮುಂತಾದ ದೇವಾಲಯಗಳನ್ನು ಹೊಯ್ಸಳರ ಕಾಲದ ಉದಾಹರಣೆಗಳಾಗಿ ಗಮನಿಸಬಹುದು. ಬೇಲೂರಿನ ಚನ್ನಕೇಶವ, ಹಾಗೂ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಶಿಖರಗಳು ಉಳಿದಿಲ್ಲವಾದ್ದರಿಂದ ಇವು ಕೇವಲ ಔತ್ತರೇಯ ಸಂಪ್ರದಾಯದ ದೇವಾಲಯಗಳೆಂದು ಗುರುತಿಸಬಹುದಾಗಿದೆ. ಆದರೂ ಜಗತಿಯ ಇಕ್ಕೆಲಗಳಲ್ಲಿರುವ ಅಲಂಕಾರದ ಶಿಖರದ ಮಾದರಿಗಳನ್ನನುಸರಿಸಿ ಕ್ರಮವಾಗಿ ಭೂಮಿಜ ಮತ್ತು ಔತ್ತರೇಯ ದ್ರಾವಿಡ ರಚನೆಗಳಾಗಿರಲು ಸಾಧ್ಯವಿದೆ.

ವಾಸ್ತುಶಾಸ್ತ್ರಗಳನ್ನಾಧರಿಸಿ ಈವರೆಗೆ ಗುರುತಿಸಿದ ಶೈಲಿ ಸಂಪ್ರದಾಯಗಳು ವರ್ಗೀಕರಣ ಹಾಗೂ ಅಧ್ಯಯನಕ್ಕೆ ಹೊಸ ಆಯಾಮ ಒದಗಿಸಿವೆ. ಈ ದಿಸೆಯಲ್ಲಿ ವಿಸ್ತಾರವಾದ ಮತ್ತಷ್ಟು ಅಧ್ಯಯನದ ಅಗತ್ಯವಿದೆ.

ಅಡಿ ಟಿಪ್ಪಣಿಗಳು :

1. ಶಾಸನ ಸಾಹಿತ್ಯ ಸಂಚಯ, ಪದ್ಯ : 545, ಪುಟ : 178
2. ಅದೇ., ಪುಟ : 134–135
3. ಅದೇ., ಪ : 514, ಪುಟ : 171
4. ಎಪಿಗ್ರಾಫಿಯಾ ಕರ್ನಾಟಿಕಾ (ಸಂ : 8 ಭಾಗ : 2) ಸೊರಬ: 275. ಪು: 122
5. ಶಾಸನ ಸಾಹಿತ್ಯ ಸಂಚಯ, ಪ. 218, ಪುಟ : 76
6. ಕಾವ್ಯಶಿಲ್ಪ, ಪುಟ : 181

7. ದಿ ಹಿಂದೂ ಟೆಂಪಲ್ (ಸಂ : 2) ಪುಟ : 429–430
8. ಕಾಮಿಕಾಗಮ (ಪೂರ್ವಭಾಗ) ಶ್ಲೋಕ : 5, ಪುಟ : 125
9. ಹಿಸ್ಟರಿಯೋಗ್ರಫಿ ಆಫ್ ಕರ್ನಾಟಕ, ಪುಟ : 66
10. ಎಸ್ಸೆ ಆನ್ ದಿ ಆರ್ಕಿಟೆಕ್ಚರ್ ಆಫ್ ಹಿಂದೂಸ್, ಪುಟ : *XIV*
11. ಹಿಸ್ಟರಿ ಆಫ್ ಇಂಡಿಯನ್ ಅಂಡ್ ಈಸ್ಟರ್ನ್ ಆರ್ಕಿಟೆಕ್ಚರ್, ಪುಟ : 5
12. ಅದೇ., 4–5
13. ಅರ್ಲಿ ಟೆಂಪಲ್ ಆರ್ಕಿಟೆಕ್ಚರ್ ಆಫ್ ಕರ್ನಾಟಕ, ಪುಟ : *IV* (ಪ್ರಸ್ತಾವನೆ)
14. ಇಂಡಿಯನ್ ಟೆಂಪಲ್ ಫಾರಂಸ್ ಇನ್ ಕರ್ನಾಟಕ, ಪುಟ : 21
15. ಅರ್ಲಿ ಟೆಂಪಲ್ ಆರ್ಕಿಟೆಕ್ಚರ್, ಪು : 3
16. ಮಯಮತ, ಅಧ್ಯಾಯ : 25, ಶ್ಲೋಕ : 26
17. ಕಾಶ್ಯಪಶಿಲ್ಪ, ಪುಟ : 1 (ನಿವೇದನೆ)
18. ಸಮರಾಂಗಣ ಸೂತ್ರಧಾರ, ಅ : 18, ಶ್ಲೋಕ : 19, ಪುಟ : 90
19. ಅಪರಾಜಿತ ಪೃಚ್ಛಾ, ಅ : 69, ಶ್ಲೋಕ : 12, ಪುಟ : 169
20. ಮಾನಸೋಲ್ಲಾಸ (ಸಂ : 2), ಅ : 1, ಶ್ಲೋಕ : 31, ಪುಟ : 4
21. ಅಪರಾಜಿತ ಪೃಚ್ಛಾ ಅ : 188, ಶ್ಲೋ : 5, ಪುಟ : 484
22. ಮಯಮತ, ಅ : 25, ಶ್ಲೋಕ : 25, ಪುಟ : 174
23. ಅಪರಾಜಿತ ಪೃಚ್ಛಾ, ಅ : 188, ಶ್ಲೋಕ : 6, ಪುಟ : 484
24. ಸಮರಾಂಗಣ ಸೂತ್ರಧಾರ, ಅ : 18, ಶ್ಲೋಕ : 58, ಪುಟ : 93
25. ಸಮೂರ್ತಾರ್ಚನಾಧಿಕರಣ, ಅ : 8, ಶ್ಲೋಕ : 2–3, ಪುಟ : 30
26. ಅರ್ಲಿ ಟೆಂಪಲ್ ಆರ್ಕಿಟೆಕ್ಚರ್, ಪುಟ : 50
27. ದಿ ತ್ರಿ ಮೈನ್ ಸ್ಟೈಲ್ಸ್ ಆಫ್ ಟೆಂಪಲ್ ಆರ್ಕಿಟೆಕ್ಚರ್, ಪುಟ : 11
28. ಅಪರಾಜಿತ ಪೃಚ್ಛಾ, ಅ : 105, ಪುಟ : 264, ಅ : 178, ಪುಟ : 459
29. ಅಜಿತಾಗಮ, ಪಟಲ : 12, ಶ್ಲೋಕ : 66–67, ಪುಟ : 82
30. ವಿಮಾನಾರ್ಚನಕಲ್ಪ, ಪ : 7, ಪುಟ : 29
31. ಕಾಮಿಕಾಗಮ (ಪೂರ್ವಭಾಗ), ಪ : 49, ಶ್ಲೋಕ : 5, ಪುಟ : 125
32. ಪ್ರಾಸಾದಮಂಡನ, ಅ : 6, ಶ್ಲೋಕ : 30, ಪುಟ : 112
33. ಅಪರಾಜಿತ ಪೃಚ್ಛಾ, ಅ : 159, ಶ್ಲೋಕ : 1, ಪುಟ : 389
34. ಬೆಳಗಾಂ ಡಿಸ್ಟ್ರಿಕ್ಟ್ ಗೆಜೆಟಿಯರ್, ಛಾಯಾಚಿತ್ರ : 44/4
(ನೆರವು : ಎಸ್.ಎ. ಜಗನ್ನಾಥ)
35. ಪ್ರಾಸಾದಮಂಡನ, (ಪರಿಶಿಷ್ಟ : 1) ಶ್ಲೋಕ : 20–22, ಪುಟ : 182
36. ಅದೇ, ಅ : 6, ಶ್ಲೋಕ : 33–34, ಪುಟ : 113
37. ಅಪರಾಜಿತ ಪೃಚ್ಛಾ, ಅ : 181, ಶ್ಲೋಕ : 34, ಪುಟ : 440
38. ಅದೇ, ಅ : 181, ಶ್ಲೋಕ : 18, ಪುಟ : 439
39. ಪ್ರಾಸಾದಮಂಡನ, ಅ : 6, ಶ್ಲೋಕ : 29, ಪುಟ : 112
40. ಅಪರಾಜಿತ ಪೃಚ್ಛಾ, ಅ : 171. ಶ್ಲೋಕ : 76, ಪುಟ : 442

ಕಲ್ಲತ್ತಿಪುರದ ಗಂಗಕಾಲೀನ ನಿರ್ಮಿತಿಗಳು: ಒಂದು ಪರಿಶೀಲನೆ *

ಎಂ. ವಿ. ವಿಶ್ವೇಶ್ವರ

ಕಲ್ಲತ್ತಿಪುರ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಈ ಗ್ರಾಮದ ಬಳಿ ಇರುವ, ಬಾಬಾ ಬುಡನ್‌ಗಿರಿ ಬೆಟ್ಟಸಾಲಿನ ಕಲ್ಲತ್ತಿಗಿರಿ ಈಚೆಗೆ ಒಂದು ಪ್ರವಾಸಿ ಕೇಂದ್ರವಾಗಿ ಗಮನ ಸೆಳೆಯುತ್ತಿದ್ದರೂ ಅಲ್ಲಿರುವ ವೀರಭದ್ರ ದೇವಾಲಯ, ಗುಹಾಲಯಗಳು ಮತ್ತು ಅಗಸ್ತ್ಯತೀರ್ಥವೆಂಬ ಜಲಪಾತಗಳಿಂದಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಮೊದಲಿಂದ ಪ್ರಸಿದ್ಧವಾದ ಒಂದು ತೀರ್ಥಕ್ಷೇತ್ರ. ಕಲ್ಲತ್ತಿಹೊಳೆ ಎಂದು ಕರೆಯಲಾಗುವ ಹೊಳೆಯೊಂದು ಕಲ್ಲತ್ತಿಗಿರಿಯ ಪೂರ್ವತಪ್ಪಲಿನಲ್ಲಿ ಸಣ್ಣ ಜಲಪಾತವಾಗಿ ಧುಮುಕಿ, ಕೊಳವೊಂದನ್ನು ರೂಪಿಸಿ ಮುಂದುವರಿಯುತ್ತದೆ. ಕಲ್ಲತ್ತಿಪುರ, ಕಲ್ಲತ್ತಿಗಿರಿ, ಕಲ್ಲತ್ತಿಹೊಳೆ ಮುಂತಾದ ಸ್ಥಳ, ಜಲಸೂಚಕ ಹೆಸರುಗಳು ಬಹುಶಃ ಇಲ್ಲಿನ ಆನೆ (ಕಲ್ಲಿನ ಹಸ್ತಿ) ರೂಪದ ಶಿಲ್ಪ ಮತ್ತಿತರ ಪುರಾತತ್ವೀಯ ಹಾಗೂ ಕಲಾ ಮಹತ್ವದ ವಾಸ್ತು, ಶಿಲ್ಪಗಳ ಸೂಚಕ ಎನ್ನಬಹುದು.

ಆನೆ ಮುಂತಾದ ಶಿಲ್ಪಗಳಿರುವ ಸ್ಥಳ ಕಲ್ಲತ್ತಿಪುರ ಗ್ರಾಮದಿಂದ ಸು. ಒಂದು ಕಿ.ಮೀ. ದೂರದಲ್ಲಿ ದಟ್ಟ ಅರಣ್ಯದ ನಡುವೆ ಇದೆ. (ಚಿತ್ರ1-) ಸು. ನಾಲ್ಕು ಮೀ. ಎತ್ತರದ ಕಪ್ಪು ಬೂದು ಬಣ್ಣದ ಕಣಶಿಲೆ (ಗ್ರಾನೈಟ್) ಯ ಬಂಡೆಗಳು ಇಲ್ಲಿ ದಕ್ಷಿಣೋತ್ತರವಾಗಿ U ಆಕಾರದಲ್ಲಿ ಹರಡಿದ್ದು ಪಶ್ಚಿಮದ ಬಂಡೆಯು ಸು. ನಾಲ್ಕು ಮೀ. ಉದ್ದವಿದ್ದರೆ, ಪೂರ್ವದ ಬಂಡೆಯು ಹನ್ನೆರಡು ಮೀ. ವರೆಗೆ ಮುಂಚಾಚಿದೆ. ಪೂರ್ವದ ಬಂಡೆಗಳ ನಡುವೆ ಹರಿಯುವ ಹೊಳೆ ಜಲಪಾತವಾಗಿ ಧುಮ್ಮಿಕ್ಕಿ, ಕೆಳಗೆ ಸ್ವಾಭಾವಿಕ ಕೊಳದಲ್ಲಿ ಶುದ್ಧ ತಿಳಿನೀರು ಸದಾಕಾಲ ನಿಂತಿರುತ್ತದೆ. ಈ ಬಂಡೆಗಳ ಮೇಲ್ಮೈಯಲ್ಲಿಯೇ ವಿವಿಧ-ರೀತಿಯ ಗುಹೆ, ವಿಮಾನ ಮಾದರಿ, ದೇವತಾಶಿಲ್ಪ ಇವು ಇರುವುದು. ಆನೆಯ ಬೆನ್ನಿನಂತೆ ಕಾಣುವ ಬಂಡೆಗಳ ಸ್ವಾಭಾವಿಕ ಆಕಾರವನ್ನು ಸಮರ್ಥವಾಗಿ ಉಪಯೋಗಿಸಿಕೊಂಡು, ಕುಶಲತೆಯಿಂದ ಎರಡು ಆನೆಗಳು ಪರಸ್ಪರ ಅಭಿಮುಖವಾಗಿರುವಂತೆ ಒಂದುಕಡೆ, ಆನೆಯ ಮುಖದ ಮುನ್ನೋಟ ಮಾತ್ರಕಾಣುವಂತೆ ಇನ್ನೊಂದು ಕಡೆ ಚಿತ್ರಿಸಿದೆ. ಒಟ್ಟನಲ್ಲಿ ಶಿವಲಿಂಗ ಅಥವಾ ದೇವತೆಗಳ ಶಿಲ್ಪವಿರುವ ಗುಹೆಗಳು;

---

* ಈ ಪ್ರಬಂಧವನ್ನು ರಾಯಚೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ಎಂಟನೆಯ ವಾರ್ಷಿಕಾಧಿವೇಶನದಲ್ಲಿ ಮಂಡಿಸಲಾಗಿತ್ತು.

ವಿವಿಧ ರೀತಿಯ ವಿಮಾನ ಮಾದರಿ; ಶೈವ, ವೈಷ್ಣವ, ಶಾಕ್ತ ಪಂಥಗಳ ದೇವತಾ ಶಿಲ್ಪಗಳು–ಇವುಗಳ ನಿರ್ಮಾಣ ಕಾಲವನ್ನು ಊಹಿಸಲು ಸಹಕಾರಿಯಾದ ಕೆಲವು ಧಾರ್ಮಿಕ ಉದ್ದೇಶದ ಕಿರುಶಾಸನಗಳು ಇವು ಕಲ್ಲತ್ತಿಪುರದಲ್ಲಿನ ಪುರಾತತ್ತ್ವೀಯ ದೃಷ್ಟಿಯಿಂದ ಮುಖ್ಯವಾದ ಅವಶೇಷಗಳು. ಜೊತೆಗೆ ಹಿನ್ನೆಲೆಯಲ್ಲಿ ಸಾಲಾಗಿ ಹರಡಿರುವ ಗಗನ ಚುಂಬಿ ಬೆಟ್ಟಗಳ ಶ್ರೇಣಿ, ಹಸಿರು ತಂಪಿನ ದಟ್ಟ ಅರಣ್ಯ, ಹೊಳೆ, ಜಲಪಾತಗಳು ಈ ನಿರ್ಮಿತಿಗಳಿಗೆ ಅನ್ಯಾದೃಶ ನೈಸರ್ಗಿಕ ಸೊಬಗಿನ ಚೌಕಟ್ಟನ್ನು ಒದಗಿಸಿವೆ. ಎಲ್ಲೋರಾ, ಭೈರವಕೊಂಡ, ಭದ್ರನಾಯಕನ ಜಾಲಿಹಾಳ ಮುಂತಾದ ಸ್ಥಳಗಳಲ್ಲಿ ಕಾಣುವಂತೆ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಕಾಲದ ಸ್ಥಪತಿ, ಶಿಲ್ಪಿಗಳಿಗೆ ಇಂತಹ ಪ್ರಕೃತಿರಮ್ಯ ಪ್ರದೇಶಗಳಲ್ಲಿ ಧಾರ್ಮಿಕ ಮಹತ್ವದ ಕಲಾಕೃತಿಗಳನ್ನು ಕಂಡರಿಸುವುದು ಪ್ರಿಯವಾಗಿತ್ತೆಂದು ಕಾಣುತ್ತದೆ.

ಕಲ್ಲತ್ತಿಪುರದಲ್ಲಿರುವ ಪ್ರಾಚ್ಯಾವಶೇಷಗಳನ್ನು ಬಹುಶಃ ಮೊದಲಬಾರಿಗೆನ್ನುವಂತೆ ವಿಶೇಷವಾಗಿ ಅಭ್ಯಸಿಸಿದ ಶ್ರೀ ಎಲ್. ಕೆ. ಶ್ರೀನಿವಾಸನ್[1] ಅವರು ಅಭಿಪ್ರಾಯ ಪಟ್ಟಿರುವಂತೆ, ಇಲ್ಲಿನ ಬಂಡೆಗಳ ಮೇಲೆ ಕೊರೆದಿರುವ ವಾಸ್ತು, ಶಿಲ್ಪ ನಿರ್ಮಿತಿಗಳು ಎರಡು ಹಂತಗಳಲ್ಲಿ ನಿರ್ಮಾಣಗೊಂಡಿವೆ. ಮೊದಲನೆಯ ಹಂತವು ವಾಸ್ತು, ಶಿಲ್ಪ ಸಂಪ್ರದಾಯಗಳು ಪರಿಷ್ಕೃತಗೊಂಡು ನೆಲೆಗೊಳ್ಳುತ್ತಿದ್ದ ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಸಾಂತರ ಅರಸರ ಕಾಲದಲ್ಲಿ ರೂಪುಗೊಂಡವು. ಎರಡನೆಯ ಹಂತವು ಬಹುಶಃ ಕಲ್ಯಾಣ ಚಾಲುಕ್ಯ ಕಾಲದಿಂದ ಆರಂಭವಾಗಿ ವಿಜಯನಗರ ಕಾಲದಲ್ಲೂ ಮುಂದುವರೆಯಿತು. ಪ್ರಸ್ತುತ ಪರಿಶೀಲನೆಯ ದೃಷ್ಟಿಯಿಂದ ಮುಖ್ಯವೆನಿಸುವ ಮೊದಲನೆಯ ಹಂತದ ಶಾಸನ, ವಾಸ್ತು ನಿರ್ಮಾಣಗಳನ್ನು ಸ್ಥೂಲವಾಗಿ ಪರಿಚಯಿಸುವುದು ಆವಶ್ಯಕವೆನಿಸುತ್ತದೆ.

ಶಾಸನಗಳು :

ಕಲ್ಲತ್ತಿಗಿರಿಯ ಬಂಡೆಗಳ ಮೇಲೆ ಗುಹಾಲಯ, ಶಿಲ್ಪಗಳ ಕೆಳಗೆ ಅನೇಕ ಕಿರು ಶಾಸನಗಳನ್ನು ಕೊರೆದಿದೆ. ಜಲಪಾತದ ನೀರು ಸತತವಾಗಿ ಬೀಳುವುದರಿಂದ ಮತ್ತು ಪುನಃಪುನಃ ಸುಣ್ಣ ಬಳಿದಿರುವುದರಿಂದ ಹಲವು ಶಾಸನಗಳು ಬಹಳಷ್ಟು ಹಾಳಾಗಿದ್ದರೂ ಇನ್ನು ಕೆಲವು ಸಾಕಷ್ಟು ಸುಸ್ಥಿತಿಯಲ್ಲಿವೆ.[2] ಮೂರು–ನಾಲ್ಕು ಸಾಲುಗಳಲ್ಲಿರುವ ಈ ಶಾಸನಗಳು ಕಲ್ಲತ್ತಿಪುರದಲ್ಲಿನ ವಾಸ್ತು ಚಟುವಟಿಕೆಯ ಆರಂಭಕಾಲವನ್ನು ನಿರ್ಧರಿಸುವುದಕ್ಕೆ ಸಹಕಾರಿಯಾದುದರಿಂದ ಮುಖ್ಯವಾಗುತ್ತವೆ. ಇಂತಹ ಶಾಸನಗಳಲ್ಲಿ ಗಂಗರಾಜಕುಮಾರ ದುಗ್ಗಮಾರನ ಉಲ್ಲೇಖವಿರುವ ಎರಡು ಶಾಸನಗಳು ಪ್ರಾಚೀನತಮವಾದವು.

ಇವುಗಳಲ್ಲಿ ಮೊದಲನೆಯದನ್ನು[3] ದಕ್ಷಿಣಾಭಿಮುಖವಾದ ಆನೆಯ ದೇಹಭಾಗದ

ಮಧ್ಯದಲ್ಲಿರುವ ದ್ವಿಕೂಟ ವಿಮಾನ ಮಾದರಿಯ ಶಿಖರದಲ್ಲಿ ಎದ್ದು ಕಾಣುವಂತೆ ಮೂರು ಸಾಲುಗಳಲ್ಲಿ ಸ್ಥೂಲವಾಗಿ ಬರೆಯಲಾಗಿದ್ದು ಅದರ ಪಾಠ ಹೀಗಿದೆ.

1. ಶ್ರೀ ದುಗ್ಗಮಾರ [ರ್] [1*]
2. ಪ್ರೋಹಿತ್ತರ್ ವಿಜ್ಞಾಧರರ
3. ದೇಗುಲ [1*]

ದುಗ್ಗಮಾರನ ಹೆಸರನ್ನು ಉಲ್ಲೇಖಿಸುವುದರ ಜೊತೆಗೆ ಆತನ ಪುರೋಹಿತ ವಿಜ್ಞಾಧರ (ವಿದ್ಯಾಧರ) ಪ್ರಸ್ತುತ ದೇಗುಲ ಮಾದರಿಯನ್ನು ಮಾಡಿಸಿದನೆಂದು ಈ ಶಾಸನ ತಿಳಿಸುತ್ತದೆ.

ಎರಡನೆಯ ಶಾಸನವನ್ನು[4] ಮೇಲೆ ಹೇಳಿದ ದ್ವಿಕೂಟದೇವ ಕೋಷ್ಠ ಮತ್ತು ಶಾಲಶಿಖರವಿರುವ ದೇವಕೋಷ್ಠಗಳ ನಡುವೆ ಶಾಲಶಿಖರದ ಮಾದರಿಯ ಕೆಳಗಿರುವ ಸ್ಥಳದಲ್ಲಿ ಬರೆಯಲಾಗಿದ್ದು ಅದರ ಪಾಠ ಹೀಗಿದೆ :.

1. ಶ್ರೀ ದುಗ್ಗಮಾರರಸ
2. [ರ ರಾ] ಣಿ [1*] ವಿಜಥ
3. ರನದೇಗುಲ [1*]

ತ್ರುಟಿತವಾಗಿರುವ ಎರಡನೆಯ ಸಾಲಿನ ಮೊದಲೆರಡು ಅಕ್ಷರಗಳನ್ನು 'ರ ರಾ' ಎಂದು ಊಹಿಸಿ ಓದಿದರೆ 'ದುಗ್ಗಮಾರರಸರ ರಾಣಿ' ಎಂಬ ಸಂಭಾವ್ಯ ಪಾಠ ದೊರೆಯುತ್ತದೆ. ಈ ದೇಗುಲವನ್ನು ಮಾಡಿಸಿದವನೂ ವಿದ್ಯಾಧರನೆ.

ಕಲ್ಲತ್ತಿಪುರದ ಬಂಡೆಗಳ ಮೇಲೆ ಬರೆದಿರುವ ಇನ್ನುಳಿದ ಶಾಸನಗಳಿಂದ ಸಾಂತಾರ ಅರಸ, ಧನುರ್ಭುಜನೆಂಬ ಇನ್ನೊಬ್ಬ ದೊರೆ ಮುಂತಾದವರು ಇಲ್ಲಿಗೆ ಬಂದು ಮಿಂದು ಹೋದುದು,[5] ನಿಜರುದ್ರಪಾದ ಸಂಬಾತ ಲಿಂಗವನ್ನು ಮಾಡಿಸಿದುದು,[6] ನಾಗಾರ್ಜುನ ಕೊಂಡದ ಬಳಿಯ ಶ್ರೀ ಪರ್ವತದಿಂದ ಬಂದಿದ್ದ ಕೆಲವು ಪ್ರವಾಸಿಗಳ ಬಗೆಗೆ,[7] ಉಲ್ಲೇಖ ದೊರೆಯುತ್ತವೆ. 9-10ನೆಯ ಶತಮಾನದ ನಾಗರಲಿಪಿಯ ಶಾಸನದಲ್ಲಿ ಶ್ರೀಮಾನು ವಿಕ್ರಮಾದಿತ್ಯ ದೇವನೆಂಬ ದೊರೆಯ ಪ್ರಸ್ತಾಪವೂ ಬರುತ್ತದೆ[8].

ಗುಹೆ ಅಥವಾ ದೇವಕೋಷ್ಠಗಳು :-

ಬಂಡೆಯ ಮೇಲ್ಮೈಯಲ್ಲಿ ಮೂಡಿಸಿರುವ ಗುಹೆ, ಅದರ ಮೇಲ್ಭಾಗದಲ್ಲಿನ ವಿಮಾನ ಮಾದರಿಗಳು ಮೊದಲ ಹಂತದ ವಾಸ್ತು ಚಟುವಟಿಕೆಯನ್ನು ಪ್ರತಿನಿಧಿಸುತ್ತವೆ. 'ಶಾಸನಗಳಲ್ಲಿ ದೇಗುಲ' ಗಳೆಂದು ಉಲ್ಲೇಖಿಸಲಾಗಿರುವ ಈ ಗುಹೆಗಳು ಹತ್ತರಷ್ಟಿದ್ದು, ಸು. ಹತ್ತರಿಂದ ಇಪ್ಪತ್ತು ಸೆಂ.ಮೀ. ವರೆಗಿನ ಉಬ್ಬು ಶಿಲ್ಪರೂಪದಲ್ಲಿ ಕಂಡರಿಸಲಾಗಿವೆ. ತೀರ ಆಳವಾಗಿ ಕೊರೆದಿಲ್ಲವಾದಕಾರಣ ಇವುಗಳನ್ನು ದೇವಕೋಷ್ಠಗಳೆಂದು ಕರೆಯುವುದೇ ಸೂಕ್ತವೆನಿಸುತ್ತದೆ. ವಿವಿಧ ಎತ್ತರಗಳಲ್ಲಿ ಕೆತ್ತಿರುವ ಈ ದೇವಕೋಷ್ಠಗಳ

ಕಲ್ಪನೆ, ವಿನ್ಯಾಸ, ನಿರ್ವಹಣೆಗಳಲ್ಲಿ ಯಾವುದೇ ನಿರ್ದಿಷ್ಟ ಕ್ರಮವನ್ನು ಪಾಲಿಸಿದಂತೆ ಕಂಡುಬರುವುದಿಲ್ಲ. ವರ್ಗ ಇಲ್ಲವೆ ಆಯತಾಕಾರದ ಈ ಕೋಷ್ಠಗಳು ಅರೆಗಂಬ, ಕಂಬಗಳಿಂದ ಕೂಡಿರುವ ಸರಳವಿನ್ಯಾಸದ ಮಂಡಪಗಳಂತೆ ಕಾಣುತ್ತವೆ. ಊರ್ಧ್ವ ವಿನ್ಯಾಸದಲ್ಲಿಯೂ ಛಾವಣಿಯ ಮೇಲಣ ಆಯತಾಕಾರದ ಪಟ್ಟಿಕೆಯ ಹೊರತಾಗಿ ಇನ್ನಾವುದೇ ವಿಶಿಷ್ಟ ಅಲಂಕರಣವಿಲ್ಲ. ಒಂದು ಕೋಷ್ಠದಲ್ಲಿ ಮಾತ್ರ ಕಾಣುವ ಒಳ ಅಲಂಕರಣವನ್ನು ಬಿಟ್ಟರೆ ಬಹುತೇಕ ಒಳಾವರಣವೆಲ್ಲ ನಿರಲಂಕೃತವೇ. ಎಲ್ಲ ಕೋಷ್ಠಗಳಲ್ಲಿ ಮೂಲ ಬಂಡೆಯಿಂದಲೇ ಕಂಡರಿಸಿದ ಶಿವಲಿಂಗಗಳಿದ್ದು ಒಂದರಲ್ಲಿ ಮಾತ್ರ ಸಮಭಂಗದಲ್ಲಿರುವ ಬ್ರಹ್ಮ ಹಾಗೂ ವಿಷ್ಣುವಿನ ಮೂರ್ತಿಗಳಿವೆ.

ವಿಮಾನ ಮಾದರಿಗಳು :-

ಮೇಲೆ ಹೇಳಿದ ದೇವಕೋಷ್ಠಗಳಿಗಿಂತಲೂ ಅವುಗಳ ಮೇಲ್ಭಾಗದಲ್ಲಿ ಸ್ವಲ್ಪ ಹೆಚ್ಚಾಗಿ ಉಬ್ಬಿರುವಂತೆ ಕೆತ್ತಲಾಗಿರುವ ವಿಮಾನ ಮಾದರಿಗಳು ಮುಖ್ಯವಾದವು. ವಿವಿಧರೀತಿಯ ದೇವಾಲಯಗಳ ಶಿಖರರೂಪಗಳನ್ನು ಪ್ರತಿನಿಧಿಸುವ ಈ ವಿಮಾನ ಮಾದರಿಗಳನ್ನು ಕೆಳಕಂಡಂತೆ ವರ್ಗೀಕರಿಸಬಹುದು.

1. ಕೂಟ ಅಥವಾ ದ್ರಾವಿಡ ವಿಮಾನ :-

"ಏಕಕೂಟ" ಮತ್ತು ಪ್ರಸ್ತರ ಹಾಗೂ ಗ್ರೀವಗಳ ನಡುವೆ ತಲಭಿತ್ತಿಯನ್ನು ಸೇರಿಸಿ ರಚಿಸಿರುವ ದ್ವಿಕೂಟ ಮಾದರಿಯ ವಿಮಾನಗಳು. (ಚಿತ್ರ-2) ಈ ರೀತಿಯ ವಿಮಾನದಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು–(ಅ) ಎತ್ತರವಾದ ಪೂರ್ಣ ಬೆಳವಣಿಗೆಹೊಂದಿದ ಶಿಖರವಿದ್ದು ಕೆಳ ಅಂಚುಗಳು ಸ್ವಲ್ಪ ಬಾಗಿರುವಂತಹವು ಮತ್ತು (ಆ)ಕಡಿಮೆಎತ್ತರದ,ಚಪ್ಪಟೆಯಾಗಿ ಅಮುಕಿದಂತೆ ಭಾಸವಾಗುವ ಶಿಖರವಿರುವಂತಹವು.

2. ಶಾಲ ವಿಮಾನ :-

ಬಹುತೇಕ ಶಾಕ್ತಸಂಪ್ರದಾಯದ ದೇವತೆಗಳಿಗೆ ಅರ್ಪಿತವಾದ ದೇವಾಲಯಗಳಲ್ಲಿ ಕಾಣುವಂತಹವು.

3. ಪ್ರಸ್ತರ ಹಾಗೂ ತಲಭಿತ್ತಿ ಇಲ್ಲದಿರುವ ಅಲ್ಪವಿಮಾನ :-

ಶುಕನಾಸವಿಲ್ಲದಿರುವುದು, ಪ್ರಸ್ತರವನ್ನು ಪ್ರಮುಖವಾಗಿ ಕಾಣುವಂತೆ ರೂಪಿಸಿರುವುದು, ಅಲಂಕರಣ ಹಾಗೂ ಒಟ್ಟು ಸಂಸ್ಕರಣ ವಿಧಾನದಲ್ಲಿ ದಾರು ವಾಸ್ತುವಿನ ಗಾಢ ಪ್ರಭಾವ – ಇವು ಈ ವಿಮಾನ ಮಾದರಿಗಳಲ್ಲಿ ಗಮನಿಸಬೇಕಾದ ಅಂಶಗಳು. ಇವುಗಳ ಜೊತೆಗೆ ಇಂತಹ ವಿಮಾನ ಮಾದರಿಗಳು ಗಂಗಕಾಲದ ವೀರಗಲ್ಲುಗಳಲ್ಲಿ (ಮೃತವೀರರು ಪರಲೋಕದಲ್ಲಿ ಶಿವಲಿಂಗವನ್ನು ಅರ್ಚಿಸುತ್ತಿರುವಂತೆ ಮೂಡಿಸಿರುವ

ಮೇಲ್ಭಾಗದ ಪಟ್ಟಿಕೆ) ಮೊದಲಿಗೆ ಆರಂಭವಾಗಿ ನೊಳಂಬ, ಕಲ್ಯಾಣಚಾಲುಕ್ಯ ಹೊಯ್ಸಳ ಕಾಲದ ವೀರಗಲ್ಲುಗಳಲ್ಲಿ ವೈವಿಧ್ಯ ಪೂರ್ಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣ ತೊಡಗುವುದು ಅತ್ಯಂತ ಗಮನಾರ್ಹವಾದ ಅಂಶ.

ಶಿಲ್ಪಗಳು :-

ಕಲ್ಲತ್ತಿಪುರದ ವಾಸ್ತು ನಿರ್ಮಿತಿಗಳಂತೆಯೇ ಕ್ರಿ. ಶ. 8 ರಿಂದ 17 ನೆಯ ಶತಮಾನದವರೆಗಿನ ಅವಧಿಯಲ್ಲಿ ಕೆತ್ತಲಾಗಿದ್ದು, ವಿವಿಧ ಶಿಲ್ಪ ಶೈಲಿಗಳಿಗೆ ಸೇರಿಸಬಹುದಾದ ಬ್ರಹ್ಮ, ವಿಷ್ಣು, ಹರಿಹರ, ನಟರಾಜ, ಕಾರ್ತಿಕೇಯ, ಸೂರ್ಯ, ಗಣೇಶ, ಮಹಿಷ ಮರ್ದಿನಿ, ವೀರಭದ್ರ, ವೀರಾಂಜನೇಯ ಮುಂತಾದ ದೇವತಾ ಶಿಲ್ಪಗಳನ್ನೂ ಇಲ್ಲಿನ ಬಂಡೆಗಳ ಮೇಲೆ ಕೊರೆಯಲಾಗಿದೆ.

ಗಂಗಕಾಲೀನ ವಾಸ್ತು, ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹವೆನಿಸುವ ಈ ಸ್ಮಾರಕಗಳಿಗೆ ಇನ್ನೊಂದು ರೀತಿಯ ಪ್ರಾಮುಖ್ಯವೂ ಇದೆಯೆನಿಸುತ್ತದೆ. ಇದನ್ನು ಅರಿಯಲು ಶ್ರೀಪುರುಷನ ನಿಧನಾನಂತರಕಾಲದ ಗಂಗರ ಇತಿಹಾಸದ ಹಿನ್ನೆಲೆಯು ಸ್ವಲ್ಪ ಮಟ್ಟಿಗೆ ಸಹಕಾರಿಯಾದೀತು.

ದುಗ್ಗಮಾರ ಅಥವಾ ದುಗ್ಗಮಾರ ಎರೆಯಪ್ಪ, ಶ್ರೀಪುರುಷನ ನಾಲ್ವರು ಪುತ್ರರಲ್ಲಿ ಒಬ್ಬ. ನಾಲ್ವರಲ್ಲಿ ಆತ ಎಷ್ಟನೆಯವನೆಂಬುದರ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಹಾಗಿದ್ದರೂ ಶ್ರೀಪುರುಷ ಮತ್ತು ಆತನ ಮಕ್ಕಳನ್ನು ಉಲ್ಲೇಖಿಸುವ ಶಾಸನಗಳಲ್ಲಿ ಉಳಿದವರಿಗಿಂತ ದುಗ್ಗಮಾರನ ಹೆಸರೇ ಹೆಚ್ಚುಸಲ ಬರುವುದು. ಇಂತಹ ಶಾಸನಗಳ ಪ್ರಕಾರ ದುಗ್ಗಮಾರ ಗಂಗರಾಜ್ಯದ ಮುಖ್ಯ ನೆಲೆಗಳಾಗಿದ್ದ ಕುವಳಾಲನಾಡು - 300, ಗಂಗ-6000, ಪುಲ್ವಕಿನಾಡು - 1000, ಮುನ್ನಾಡು - 6000, ಪುಮ್ಮೆನಾಡು, ಬೆಳತೂರನಾಡು ಮುಂತಾದ ಪ್ರದೇಶಗಳ ರಾಜಪ್ರತಿನಿಧಿಯಾಗಿ ಆಳ್ವಿಕೆ ನಡೆಸುತ್ತಿದ್ದನಲ್ಲದೆ [10] ಅತನ ಪತ್ನಿ ಕಂಚಿಯಬ್ಬೆಯೂ ಆಗಳಿ ಪ್ರಾಂತವನ್ನು ಆಳುತ್ತಿದ್ದಳು.[11]

ಆ ಕಾಲದ ಪ್ರಮುಖ ರಾಜಕೀಯ ಶಕ್ತಿಗಳಾಗಿದ್ದ ಬಾದಾಮಿ ಚಾಲುಕ್ಯ, ಪಲ್ಲವರ ನಡುವಣ ನಿರ್ಣಾಯಕ ಯುದ್ಧಗಳಲ್ಲಿ ಆತ ಬಾದಾಮಿ ಚಾಲುಕ್ಯರ ಪರ ನಿಂತು ಹೋರಾಡಿದ್ದ. ಇವಲ್ಲದೆ ಶ್ರೀಪುರುಷ ತನ್ನ ಆಳ್ವಿಕೆಯ ಕಾಲದಲ್ಲಿ ಮಕ್ಕಳಿಗೆ ಮುಖ್ಯವಾಗಿ ದುಗ್ಗಮಾರ ಶಿವಮಾರರಿಗೆ - ರಾಜ್ಯಾಡಳಿತ, ಯುದ್ಧಗಳಲ್ಲಿ ಸಾಕಷ್ಟು ಅಧಿಕಾರ, ತರಬೇತಿ ನೀಡಿದ್ದುದರ ಪರಿಣಾಮವಾಗಿ ಈ ಸೋದರರು ತಮ್ಮ ತಮ್ಮ ಸಾಮಂತರ ಒಳಗುಂಪಿನ ಬೆಂಬಲಗಳಿಸಿ ಗಂಗಸಿಂಹಾಸನದ ಉತ್ತರಾಧಿಕಾರಕ್ಕೆ ತೀವ್ರ ಪ್ರತಿಸ್ಪರ್ಧಿಗಳಾಗಿದ್ದರು. ಕೊನೆಗೆ ರಾಷ್ಟ್ರಕೂಟ, ಪಲ್ಲವ ಅರಸರ ನೆರವಿನಿಂದ ಇಮ್ಮಡಿ ಶಿವಮಾರ, ದುಗ್ಗಮಾರನನ್ನು ನಿಗ್ರಹಿಸಿ ಸಿಂಹಾಸನಸ್ಥನಾದ, ಪಾರಂಪರಿಕ ಸಂಪ್ರದಾಯವಾದ ಜ್ಯೇಷ್ಠಪುತ್ರನ (?) ಹಕ್ಕುದಾರಿಕೆಯನ್ನು ಪ್ರತಿರೋಧಿಸಿ,

ದಂಗೆಯೆದ್ದುದಕ್ಕಾಗಿ ಬಹುಶಃ ಗಂಗಶಾಸನಗಳಲ್ಲಿನ ಅಧಿಕೃತ ವಾಂಶಿಕ ಪ್ರಶಸ್ತಿಯಲ್ಲಾಗಲೀ ವಂಶಾವಳಿಗಳಲ್ಲಾಗಲೀ ದುಗ್ಗಮಾರನ ಪ್ರಸ್ತಾಪ ಹೆಚ್ಚಾಗಿ ಕಾಣುವುದಿಲ್ಲ.[12] ಈ ಅಂತಃಕಲಹದ ಅಂತಿಮ, ನಿರ್ಣಾಯಕ ಯದ್ಧದಲ್ಲಿ ಇಮ್ಮಡಿ ಶಿವಮಾರನ ಬೆಂಬಲಿಗರಲ್ಲಿ ಒಬ್ಬನಾದ ಸಿಂಗಪ್ರೋತ ದುಗ್ಗಮಾರನನ್ನು ಸೋಲಿಸಿ,ಪ್ರಾಯಶಃ ಕೊಂದು, ದಂಗೆಯನ್ನು ಅಡಗಿಸಿದ.

ಈ ಸಂದರ್ಭದಲ್ಲಿ ಶ್ರೀಪುರುಷನ ಸೇಲಂ ತಾಮ್ರ ಶಾಸನ (ಶಾ. ಶ. 693-ಕ್ರಿ. ಶ. 771) ವನ್ನು ಸಂಪಾದಿಸಿರುವ ಡಾ. ಜಿ. ಎಸ್. ಗಾಯಿಯವರು ಆ ಶಾಸನದಲ್ಲಿ (ಸಾಲು 42-43) ಉಲ್ಲೇಖಿಸಿರುವ ಕಂಚಿಯಬ್ಬೆಯ ತಾಯಿ ವಿನಯವತಿಯ ತಂದೆ "ಚತುರ್ದಿಗಾಧಿಪ ಶ್ರೀಮಾನ್ ವಿಕ್ರಮಾದಿತ್ಯ ಭೂಪತಿ" ಯನ್ನು ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯ (ಕ್ರಿ. ಶ. 733–34/746–47) ಎಂದು ಗುರುತಿಸಿರುವುದು ಔಚಿತ್ಯಪೂರ್ಣವಾಗಿದೆ.[13]. ಈ ಸಂಬಂಧದ ಕಾರಣ ಬಹುಶಃ ದುಗ್ಗಮಾರ ಚಾಲುಕ್ಯ ವಿಕ್ರಮಾದಿತ್ಯನ ಆಪ್ತ ಒಡನಾಡಿಗಳಲ್ಲಿ ಒಬ್ಬನಾಗಿದ್ದು, ಕಾಂಚೀದಂಡಯಾತ್ರೆ ಸಮಯದಲ್ಲಿ ಆತನೊಡನಿದ್ದು ಸಹಕರಿಸಿದ್ದ.[14] ಇವೇ ಕಾರಣಗಳಿಂದ ದುಗ್ಗಮಾರ ಗಂಗರಾಜ್ಯದ ಉತ್ತರಾಧಿಕಾರಿಯಾಗುವುದರ ಹಿನ್ನೆಲೆಯಲ್ಲಿ ಬಾದಾಮಿ ಚಾಲುಕ್ಯರು ಆತನ ಬೆಂಬಲಕ್ಕಿದ್ದುದನ್ನೂ, ಅದರಿಂದ ಶ್ರೀಪುರುಷ, ವಿಕ್ರಮಾದಿತ್ಯರ ಮರಣಾನಂತರ ಸಿಂಹಾಸನಕ್ಕಾಗಿ ಉಂಟಾದ ಅಂತಃಕಲಹದಲ್ಲಿ ರಾಷ್ಟ್ರಕೂಟ ಇಮ್ಮಡಿ ಗೋವಿಂದ (ಕ್ರಿ. ಶ. 775-80) ಮತ್ತು ಪಲ್ಲವ ಇಮ್ಮಡಿ ನರಸಿಂಹ (ಕ್ರಿ. ಶ. 731-796) ರು ಇಮ್ಮಡಿ ಶಿವಮಾರನನ್ನು ಪಟ್ಟಕ್ಕೇರಿಸಿದರೆಂದೂ ಊಹಿಸಬಹುದು[15].

ಈ ಹಿನ್ನೆಲೆಯಲ್ಲಿ ರಾಜ್ಯಭ್ರಷ್ಟ ದುಗ್ಗಮಾರನ ಕಡೆಯ ದಿನಗಳು, ಆಗ ಅವನೊಡನಿದ್ದವರು, ಆತ ದುರ್ಮರಣಕ್ಕೀಡಾದ ಕಾಲ, ಸ್ಥಳ, ಇದಾವುದರ ಬಗೆಗೂ ಸ್ಪಷ್ಟ, ಖಚಿತ ಶಾಸನೋಲ್ಲೇಖಗಳ ಅಭಾವವಿದ್ದಾಗ್ಯೂ, ಕಲ್ಲತ್ತಿಪುರದ ಶಾಸನ, ಸ್ಮಾರಕಗಳ ಪುನಃ ಪರಿಶೀಲನೆ, ಅಧ್ಯಯನದಿಂದ ಕೆಲವು ಸಾಂದರ್ಭಿಕ, ಆಧಾರಯುತ ಊಹೆಗಳನ್ನು ಮುಂಡಿಸಬಹುದೆನ್ನಿಸುತ್ತದೆ.

ಶಿವಮಾರನ ವಿರುದ್ಧ ದಂಗೆಯೆದ್ದು ರಾಜ್ಯಭ್ರಷ್ಟನಾದ ದುಗ್ಗಮಾರ, ಬಹುಶಃ ಸ್ವಲ್ಪ ಕಾಲದವರೆಗೆ, ಅಭೇದ್ಯ ಅರಣ್ಯ ಪ್ರದೇಶವಾಗಿದ್ದ ಕಲ್ಲತ್ತಿಪುರದ ಬಳಿ ತಲೆಮರೆಸಿಕೊಂಡಿದ್ದಿರಬೇಕು. ನೈಸರ್ಗಿಕ ಸೌಂದರ್ಯದ ನಡುವಣ ಸ್ವಾಭಾವಿಕ ಗುಹೆಯಂತಹ ನೆಲೆ, ಸದಾಕಾಲ ಜಲಸೌಲಭ್ಯಗಳಿಂದ ಕೂಡಿದ್ದ ಈ ಸ್ಥಳ ಆತನಿಗೆ ಸೂಕ್ತ ರಕ್ಷಣೆ ಒದಗಿಸುವಂತಹುದೇ. ಬಹುಶಃ ಪತ್ನಿ ಕಂಚಿಯಬ್ಬೆ, ಪುರೋಹಿತ ಹಾಗೂ ಆಪ್ತ ಸಲಹೆಗಾರ ವಿದ್ಯಾಧರರು ಜೊತೆಗಿದ್ದಿರಬೇಕು. ಸಿಂಗಪ್ರೋತನೊಡನೆ ಆದ, ದುಗ್ಗಮಾರನ ಮರಣದಲ್ಲಿ ಕೊನೆಗೊಂಡ, ಅಂತಿಮ ಯುದ್ಧ ಕಲ್ಲತ್ತಿಗಿರಿಯ ಪರಿಸರದಲ್ಲಿಯೇ ಘಟಿಸಿರಬೇಕು. ಇದರ ನೆನಪಿಗಾಗಿ ಹಾಗು ತನ್ನ ಒಡೆಯ-ಒಡತಿಯರ

ಸ್ಮರಣೆಯಲ್ಲಿ ವಿದ್ಯಾಧರ ಪುರೋಹಿತ ಇಲ್ಲಿನ ಬಂಡೆಗಳ ಮೇಲೆ ಸ್ಮಾರಕ,ದೇವಾಲಯ ಶಿಲ್ಪ, ಶಾಸನಗಳನ್ನು ನಿರ್ಮಿಸಿದ್ದಿರಬೇಕು.

ಪೂರ್ವದ ಬಂಡೆಯ ಮಧ್ಯಭಾಗದಲ್ಲಿ ಮುಂದೆ, ಹಿಂದೆ–ಎರಡೂ ಕಡೆ ಜಲಪಾತದ ರಮ್ಯ ವಾತಾವರಣದಲ್ಲಿರುವ ಆನೆಯ ದೇಹಭಾಗದಲ್ಲಿರುವ (ಚಿತ್ರ–3) ಹಾಗು ಶಾಸನ ನೋಲ್ಲೇಖವಿರುವ ದೇವಕೋಷ್ಠ ಬಹುಶಃ ದುಗ್ಗಮಾರನ ಸ್ಮಾರಕವಾಗಿರಬೇಕು. ಅದ ರಂತೆಯೇ ಸಾಮಾನ್ಯವಾಗಿ ಶಕ್ತಿದೇವತೆಯರಿಗೆ ನಿರ್ಮಿತವಾಗುವ ಶಾಲ ಶಿಖರವುಳ್ಳ ದೇವ ಕೋಷ್ಠ ಆತನ ಪತ್ನಿ ಕಂಚಿಯಬ್ಬೆಯನ್ನು ಕುರಿತಾಗಿರಬೇಕು. ಈ ಹಿನ್ನೆಲೆಯಲ್ಲಿ ಇಲ್ಲಿನ ಶಾಸನಗಳಲ್ಲಿ ಈ ದೇವಾಲಯಗಳನ್ನು ಪ್ರತಿಮಾಗೃಹ ಎಂಬರ್ಥಕೊಡುವ ದೇಗುಲ (ದೇವಕುಲ) ಎಂದೇ ಉಲ್ಲೇಖಿಸಿರುವುದು ಅತ್ಯಂತ ಅರ್ಥಪೂರ್ಣವಾಗುವುದಲ್ಲದೆ ಹಲವರು ಬಂದು 'ಮಿಂದು ಹೋದು' ದರ ಔಚಿತ್ಯವೂ ಸ್ಪಷ್ಟಗೊಳ್ಳುತ್ತದೆ.

ಇವುಗಳ ಜೊತೆಗೆ ನೈಸರ್ಗಿಕ ಪರಿಸರ, ದೇವಾಲಯ, ಸಮೂಹ, ಶಾಸನದ ಉಪಸ್ಥಿತಿ ಮತ್ತಿತರ ವಿವರಗಳಲ್ಲಿ ಕಲ್ಲತ್ತಿಗಿರಿ ಹಾಗೂ ಸುತ್ತಮುತ್ತಣ ಪ್ರದೇಶವು ಇಮ್ಮಡಿ ವಿಕ್ರಮಾದಿತ್ಯನ 'ಕರಂಡದ ಪರದನ'ವು[16] ನಿರ್ಮಿತವಾಗಿರುವ ಭದ್ರನಾಯ ಕನ ಜಾಲಿಹಾಳದ ಬಳಿಯ ಹುಲಿಗೆವ್ವನ ಕೊಳ್ಳದೊಂದಿಗೆ ಹೆಚ್ಚಿನ ಸಾಮ್ಯ ಹೊಂದಿರು ವುದು ಕೇವಲ ಆಕಸ್ಮಿಕವೆನಿಸದು. ಇವೆರಡರ ನಡುವಣ ಒಂದೇ ವ್ಯತ್ಯಾಸವೆಂದರೆ ಕಲ್ಲತ್ತಿಪುರದ ಬಂಡೆಗಳ ಮೇಲೆ ದೇವಾಲಯ, ಶಿಲ್ಪಗಳನ್ನು ಉಬ್ಬುಶಿಲ್ಪ ರೂಪದಲ್ಲಿ ಕಂಡಿರಿಸಲಾಗಿದ್ದರೆ, ಬಿ. ಎಸ್. ಜಾಲಿಹಾಳದಲ್ಲಿ ಮಧ್ಯಮ ಗಾತ್ರದ ನಿರ್ಮಿತ ದೇವಾಲಯಗಳಿರುವುದು. ದಕ್ಷಿಣಾಭಿಮುಖವಾಗಿ ಚಲಿಸುತ್ತಿರುವಂತೆ ಭಾಸವಾಗುವ ಆನೆಯ ದೇಹಭಾಗದಲ್ಲಿಯೇ ವಾಸ್ತು ಚಟುವಟಿಕೆಯ ಮೊದಲ ಹಂತವನ್ನು ಪ್ರತಿನಿಧಿಸುವ ಬಹುತೇಕ ಎಲ್ಲ ಮುಖ್ಯ ಗುಹಾಮಾದರಿ, ಶಿಲ್ಪ, ಶಾಸನಗಳನ್ನು ಅಳವಡಿಸಿರುವುದೂ ಔಚಿತ್ಯಪೂರ್ಣವಾಗಿಯೇ ಇದೆ. ಆನೆ ಗಂಗ ಅರಸರ ರಾಜಲಾಂಛನ- ದುಗ್ಗಮಾರನ ತಂದೆ ಶ್ರೀ ಪುರುಷ ಆನೆಗಳ ಬಗೆಗೆ ವಿಶೇಷ ಪರಿಜ್ಞಾನ ಹೊಂದಿದ್ದು, ಅವುಗಳನ್ನು ಪಳಗಿಸುವ ತಂತ್ರಜ್ಞಾನದ ವಿವರಗಳನ್ನೊಳಗೊಂಡ 'ಗಜಶಾಸ್ತ್ರ'ಎಂಬ ಗ್ರಂಥವನ್ನೇ ಬರೆದಿದ್ದನೆಂದು ಶಾಸನಗಳು ತಿಳಿಸುತ್ತವೆ. ಅಲ್ಲದೆ ಆನೆಯ ದೇಹ ಭಾಗ ದಲ್ಲಿನ, ದುಗ್ಗಮಾರನ ಉಲ್ಲೇಖವಿರುವ ಶಾಸನವನ್ನು ದೇವಾಲಯ ಮಾದರಿಯೊಂದರ ಶಿಖರಭಾಗದಲ್ಲಿ ಎದ್ದು ಕಾಣುವಂತೆ ಬರೆದಿರುವುದು, ಇತರ ದೇಗುಲಗಳಿಗಿಂತ ಶಾಸನವಿ ರುವ ದೇಗುಲ ಉತ್ತಮ ರೀತಿಯದಾಗಿರುವುದು–ಇವು ದುಗ್ಗಮಾರನ ದೊರೆಯಾಗುವ ಮಹತ್ವಾಕಾಂಕ್ಷೆ, ಅದಕ್ಕಾಗಿ ಆತ ನಡೆಸಿದ ಪ್ರಯತ್ನಗಳ ಬಹುಶಃ ಉದ್ದೇಶಪೂರ್ವಕ, ಸಾರ್ಥಕ ದ್ಯೋತಕವೆನ್ನಿಸುತ್ತದೆ.

ಇತರ ಸಾಂದರ್ಭಿಕ ಆಧಾರಗಳಿಂದ ಮುಖ್ಯವಾಗಿ ಶ್ರೀ ಪುರುಷನ ಸೇಲಂ ತಾಮ್ರ ಶಾಸನದ ಕಾಲವಾದ ಕ್ರಿ. ಶ. 771 ಮತ್ತು ಆತನ ಮರಣಕಾಲವಾದ ಕ್ರಿ. ಶ. 791

ಇವುಗಳ ಆಧಾರದ ಮೇಲೆ ದುಗ್ಗಮಾರನು ಬಹುಶಃ ಎಂಟನೆಯ ಶತಮಾನದ ಕಡೆಯ ದಶಕದಲ್ಲಿಯೇ ಮರಣವನ್ನಪ್ಪಿರಬೇಕೆಂದು ಸಿದ್ಧವಾಗುತ್ತದೆ. ಕಲ್ಲತ್ತಿಪುರದ ದುಗ್ಗಮಾರನ ಶಾಸನದ ಲಿಪಿ, ಅಲ್ಲಿ ಪ್ರಾರಂಭಿಕ ಹಂತದಲ್ಲಿ ನಿರ್ಮಿತವಾದ ವಾಸ್ತು ಶಿಲ್ಪಿಗಳ ಶೈಲಿಯ ಕಾಲ ಇವೆಲ್ಲವೂ ಆತ ಮರಣಹೊಂದಿದ ಕಾಲಕ್ಕೆ ಸರಿಹೊಂದುವುದೂ ಕಾಕತಾಳೀಯ ನಲ್ಲವೆನ್ನಬೇಕು.

ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯ—ಕಂಚಿಯಬ್ಬೆ (ತನ್ಮೂಲಕ ದುಗ್ಗಮಾರನ) ಯರ ರಕ್ತಸಂಬಂಧ, ಆತನೊಡನಿನ ದುಗ್ಗಮಾರನ ರಾಜಕೀಯ ಸಾಹಚರ್ಯ, ಒಡನಾಟ ಇವುಗಳ ಹಿನ್ನೆಲೆಯಲ್ಲಿ ಇನ್ನೂ ಒಂದು ಊಹೆಯನ್ನು ಮಂಡಿಸಬಹುದು. ಪ್ರಸ್ತುತ ಕಲ್ಲತ್ತಿಪುರದ ಇನ್ನೊಂದು ಶಾಸನದಲ್ಲಿ ಉಲ್ಲೇಖಿತನಾಗಿರುವ, ವಿಕ್ರಮಾದಿತ್ಯನೆಂಬ ವ್ಯಕ್ತಿಯು ಬಹುತೇಕ ದುಗ್ಗಮಾರ ಕಂಚಿಯಬ್ಬೆಯರ ಮಗನಾಗಿದ್ದು, ತಾಯಿಯ ಕಡೆಯಿಂದ ಮುತ್ತಾತನಾದ ವಿಕ್ರಮಾದಿತ್ಯನ ಹೆಸರನ್ನೇ ಹೊಂದಿರಬೇಕು. ಗಂಗ ರಾಜವಂಶದಲ್ಲಿ ಶ್ರೀಪುರುಷನ ಪೂರ್ವಜರಾದ ಶ್ರೀವಿಕ್ರಮ, ಭೂವಿಕ್ರಮ, ಆತನ ಮಕ್ಕಳಲ್ಲಿಯೇ ಒಬ್ಬನಾದ ವಿಜಯಾದಿತ್ಯ ಮುಂತಾದವರ ಹೆಸರುಗಳು ಇಂತಹ ಊಹೆಗೆ ಸಮರ್ಥನೆಯನ್ನೊದಗಿಸುತ್ತವೆ. ವಿಕ್ರಮಾದಿತ್ಯನ ಹೆಸರಿರುವ ಶಾಸನದ ಲಿಪಿಯೂ ಕ್ರಿ. ಶ. 10–11ನೆಯ ಶತಮಾನದಷ್ಟು ಈಚಿನದಾಗಿರದೆ ಹೆಚ್ಚೆಂದರೆ 9ನೆಯ ಶತಮಾನದ ಮಧ್ಯಕಾಲದ್ದಾಗಿರುವುದು ಗಮನಾರ್ಹ. ಈ ಕಾರಣಗಳಿಂದ ವಿಕ್ರಮಾದಿತ್ಯನೆಂಬ ವ್ಯಕ್ತಿ ತನ್ನ ತಾಯಿ–ತಂದೆಯರು ಮಡಿದ, ಇಲ್ಲವೇ ಅವರ ಸ್ಮಾರಕ ದೇಗುಲಗಳಿರುವ ಕ್ಷೇತ್ರಕ್ಕೆ ಬಂದು ಮಿಂದು ಹೋಗುವುದು, ದೇಗುಲ ನಿರ್ಮಿಸುವುದು ಮುಂತಾದ ಕ್ರಿಯೆಗಳು ಸ್ವಾಭಾವಿಕವೂ, ಅರ್ಥಪೂರ್ಣವೂ ಆಗುತ್ತದೆ.

ಒಟ್ಟು ಕರ್ನಾಟಕಕ್ಕೆ ಸಂಬಂಧಿಸಿದಂತೆ, ಪ್ರಾಚೀನ ಕಾಲದಿಂದಲೂ ನಿರ್ದಿಷ್ಟ, ಇಚ್ಛಿತ ಸ್ಥಳಗಳಲ್ಲಿ ಸ್ಮಾರಕ ನಿರ್ಮಿತಿಗಳನ್ನು ಸ್ಥಾಪಿಸುವ ಒಂದು ಪರಂಪರೆಯನ್ನೇ ಗುರುತಿಸುವ ಪ್ರಯತ್ನಗಳು ಈಗಾಗಲೇ ನಡೆದಿವೆ, ನಡೆಯುತ್ತಿವೆ. ಬೃಹಚ್ಛಿಲಾ ಯುಗದ ಕಲ್ಗೋರಿಗಳು ಕೆಲ ವಿಶಿಷ್ಟ ಭೌಗೋಳಿಕ ಪರಿಸರದಲ್ಲೇ ನೆಲೆಗೊಂಡಿವೆ. ಭದ್ರನಾಯಕನ ಜಾಲಿಹಾಳದ ಮಧ್ಯಮಗಾತ್ರದ ದೇವಾಲಯಗಳಲ್ಲಿ ಪ್ರಮುಖವಾದ ಮೂರನ್ನು ಚಾಲುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯ ಹಾಗು ಆತನ ರಾಣಿಯರ ಸ್ಮಾರಕ ನಿರ್ಮಿತಿಗಳೆಂದು ವಿದ್ವಾಂಸರು ಗುರುತಿಸಿದ್ದಾರೆ[18]. ಹಳೆಯಬೀಡಿನ ಉತ್ಖನನದಲ್ಲಿ ದೋರಸಮುದ್ರ ಕೆರೆದಂಡೆಯ ಒಂದು ಪರಿಮಿತ ಪ್ರದೇಶದಲ್ಲಿ ದೊರೆತಿರುವ ಸಮಾಧಿಯಂತಹ ನಿರ್ಮಿತಿ, ಜಲಸಂಗ್ರಹಣೆಗಾಗಿ ಮಾಡಿದ ವಿಶೇಷ ವ್ಯವಸ್ಥೆ ಮುಂತಾದ ಆಧಾರಗಳು ಹೊಯ್ಸಳ ಕಾಲದಲ್ಲೂ ಇಂತಹ ಸ್ಮಾರಕ ಕಟ್ಟಡಗಳನ್ನು ನಿರ್ಮಾಣ ಮಾಡುವ ಪದ್ಧತಿ ಪ್ರಚಲಿತವಿದ್ದಿತೆಂದು ತಿಳಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಕಲ್ಲತ್ತಿಪುರದ ಸ್ಮಾರಕ, ಶಿಲ್ಪ, ಶಾಸನಗಳ ಸಮಗ್ರ, ತುಲನಾತ್ಮಕ ಅಧ್ಯಯನದಿಂದ

ಕರ್ನಾಟಕದಲ್ಲಿ ಬೆಳೆದುಬಂದ ಇಂತಹ ಒಂದು ಪ್ರಾಚೀನ ಸಾಮಾಜಿಕ – ಧಾರ್ಮಿಕ ಪರಂಪರೆಗೆ – ವಿಶೇಷವಾಗಿ ಗಂಗಕಾಲೀನ ವಾಸ್ತು, ಶಿಲ್ಪಕಲೆಗೆ – ಸಂಬಂಧಿಸಿದಂತೆ ಹೆಚ್ಚು ಮೌಲಿಕವೆನ್ನಬಹುದಾದ ಮಾಹಿತಿ ದೊರಕುವ ಸಾಧ್ಯತೆಯಿದೆಯೆಂದು ಧಾರಾಳವಾಗಿ ಹೇಳಬಹುದು.

ಅಡಿ ಟಿಪ್ಪಣಿಗಳು :

1- Srinivasan, L.K, 'Kallattipura - New Light on Ganga Rock-Cut Art In Karnataka' Indian Archaeological Heritage : Shri K. V. Soundara Rajan Festschrift,, Ed. by (Margabandhu, ct, al, (Delhi, 1991) Vol - II pp : 481–489.

ಈ ಲೇಖನದ ಕನ್ನಡ ಅವತರಣಿಕೆಯು 'ಮುರುಘಶ್ರೀ' ಸಂಭಾವನಾ ಗ್ರಂಥದಲ್ಲಿ ಪ್ರಕಟವಾಗಲಿದೆ.

2. ಅದೇ, ಪುಟ : 482–83

3. ಎ. ಕ. *VI* (ಹಳೆಯ ಆವೃತ್ತಿ) ತರೀಕೆರೆ–31

4. ಅದೇ, ತರೀಕೆರೆ–32

5. ಅದೇ, ತರೀಕೆರೆ–28-29

6. ಅದೇ, ತರೀಕೆರೆ–35

7. ಶ್ರೀನಿವಾಸನ್. ಎಲ್. ಕೆ. ಪೂರ್ವೋಕ್ತ, ಪುಟ : 482–483

8. ಎ. ಕ. *VI* (ಹಳೆಯ ಆವೃತ್ತಿ), ತರೀಕೆರೆ–34

9. ಶಿಲ್ಪಿಗಳನ್ನು ಕುರಿತ ವಿವರಪೂರ್ಣ ಅಧ್ಯಯನಕ್ಕೆ ನೋಡಿ. ಶ್ರೀನಿವಾಸನ್, ಎಲ್. ಕೆ., ಪೂರ್ವೋಕ್ತ, ಪುಟ : 485–88

10. ಎ. ಕ. *X* ಮುಳುಬಾಗಿಲು - 80 ಮತ್ತು 252

11. ಅದೇ, ಮುಳಬಾಗಿಲು–80

12, Ramesh, K. V. 'Inscriptions of the Western Gangas', (Delhi, 1984), Intro p. LIX-LX

13. Gai, G. S. Salem Plates of Ganga Sri Purusha : Saka 693, E. I- Vol, XXVII, In No. 25, pp. 145-152

14, Nilakanta Sastri, K.A., 'A History of South India' (4th Edition, Madras 1976), p. 154-158

15. ರಮೇಶ್, ಕೆ. ವಿ. ಪೂರ್ವೋಕ್ತ, ಪುಟ : *LIX-LX*

16. (ಅ) ಸುಂದರ, ಅ. 'ಕೆಲವು ಈಚಿನ ಗಮನಾರ್ಹ ಪುರಾತತ್ವ ಶೋಧನೆಗಳು' ಕರ್ನಾಟಕ ಭಾರತಿ, ಸಂಪುಟ 9, ಸಂಚಿಕೆ 4, (ಧಾರವಾಡ–1977) ಪುಟ : 79–95

(ಆ) Nagaraja Rao, M, S. and Ramesh, K. V. 'A Royal Memorial to Chalukya Vikramaditya; Madhu : Recent Researches in Indian Archaeology and Art History; Ed. by, M. S, Nagaraja Rao, (New Delhi. 1981) p. 175

(ಇ) Ramesh, K. V. Chalukyas of Vatapi, (Delhi, 1984) p. 165-66

17. ಎ, ಕ. *VI* (ಹಳೆಯ ಆವೃತ್ತಿ), ತರೀಕೆರೆ–34, ಪುಟ : 217

18. ಅಡಿ ಟಿಪ್ಪಣಿ 16ರಲ್ಲಿ ಸೂಚಿಸಿರುವುದೇ ಗ್ರಂಥಗಳು

19. ವಿಶ್ವೇಶ್ವರ, ಎಂ. ವಿ. ಹಳೆಯ ಬೀಡಿನ ಉತ್ಖನನದಲ್ಲಿ ದೊರೆತಿರುವ ವೀರಗಲ್ಲು ; ಒಂದು ವಿಶ್ಲೇಷಣೆ, ಕರ್ನಾಟಕ ಲೋಚನ. ಸಂಪುಟ–3, ಸಂಚಿಕೆ–2 (ಬೆಂಗಳೂರು 1990), ಪುಟ : 79–87

ಮೆಕೆಂಜಿ ಸಂಗ್ರಹಿಸಿದ ಕೆಳದಿ ಅರಸರ ಆರು ನಿರೂಪಗಳು.

—ಡಾ|| ಕೆಳದಿ ವೆಂಕಟೇಶ್

ಕನ್ನಡನಾಡು ನುಡಿಗಾಗಿ ಹಲವಾರು ಮಹನೀಯರು ಅಹರ್ನಿಶಿ ದುಡಿದಿದ್ದಾರೆ. ತಮ್ಮ ಜೀವನವನ್ನೆ ಅದಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ಹಾಗೆ ದುಡಿದಂತಹರ ಮಾತೃ ಭಾಷೆ, ನೆಲ ಕನ್ನಡವಲ್ಲ. ಕನ್ನಡ ನೆಲಕ್ಕೆ ಬಂದು, ಕನ್ನಡ ಕಲಿತು ಕನ್ನಡಕ್ಕಾಗಿ ದುಡಿದವರು. ಇಂತಹ ಪ್ರಮುಖರಲ್ಲಿ ಇ. ಪಿ. ರೈಸ್, ಕಿಟ್ಟೆಲ್, ಕರ್ನಲ್ ಮೆಕೆಂಜಿ ಮೊದಲಾದವರು ಪ್ರಮುಖರು.

ಕರ್ನಲ್ ಮೆಕೆಂಜಿಯು ಕಡಲಾಚೆಯಿಂದ ಭಾರತಕ್ಕೆ ಬಂದವರು. ಇಲ್ಲಿಯ ಕವಿ, ಕೃತಿಗಳು, ಶಾಸನ, ನಾಣ್ಯಗಳು, ಕೈಫಿಯತ್ತುಗಳನ್ನು ಸಂಗ್ರಹಿಸಿದವರು. ಕರ್ನಲ್ ಮೆಕೆಂಜಿಯವರಿಗೆ ಭಾರತದ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ. ಹಳ್ಳಿ ಹಳ್ಳಿಗಳಲ್ಲಿ ಸಂಚಾರಮಾಡಿ ಹಳ್ಳಿಗರಿಂದ, ಶಾನುಭೋಗರಿಂದ, ಪಂಡಿತರಿಂದ ವಿಷಯ ಸಂಗ್ರಹಿಸಿ, ಬರೆಸಿ, ಶಾಸನಗಳನ್ನು ಕೈಫಿಯತ್ತುಗಳನ್ನು ಮೆಕೆಂಜಿಯವರು ಸಂಗ್ರಹಿಸಿದ್ದಾರೆ. ಸಂಗ್ರಹ ಕಾರ್ಯದಲ್ಲಿ ದೇಶೀಯ ಪಂಡಿತರ ಸಹಾಯವನ್ನು ಪಡೆದುಕೊಂಡಿರುವುದಲ್ಲದೆ ಪುಲಿಗಡ್ಡ ಮಲ್ಲಯ್ಯ, ವೆಂಕಟರಾವ್, ವಿಠಲರಾವ್, ಆನಂದರಾವ್ ಮೊದಲಾದವರನ್ನು ಸ್ಮರಿಸಿಕೊಂಡಿದ್ದಾರೆ.[1] ತಮ್ಮ ಸಂಗ್ರಹಗಳನ್ನು ಆಧರಿಸಿ ಸುಮಾರು 40ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ಮೆಕೆಂಜಿಯವರು ಸಂಗ್ರಹಿಸಿದ್ದ ಹಲವು ಮುಖ್ಯ ದಾಖಲೆಗಳು 1823ರಲ್ಲಿ ಮತ್ತು 1825ರಲ್ಲಿ ಇಂಗ್ಲೆಂಡಿಗೆ ಸಾಗಿಸಲ್ಪಟ್ಟವು. ಅಲ್ಲಿಗೆ ಹೋದ ಸಾಮಗ್ರಿಗಳಲ್ಲಿ ತಮಿಳಿನ 192, ತೆಲುಗಿನ 156, ಕನ್ನಡದ 99 ಹಸ್ತ ಪ್ರತಿಗಳಿದ್ದವು. ವಿಲ್ಸನನ ಪ್ರಕಾರ, ಇಂಗ್ಲೆಂಡಿಗೆ ಸಾಗಿಸಲಾದ ಹಸ್ತಪ್ರತಿಗಳ ಸಂಖ್ಯೆ 447[2]. ವಿಲಿಯಂ ಟೇಲರ್‌ನ ಪ್ರಕಾರ ಕನ್ನಡದ 31 ದಾಖಲೆಗಳು, ಮಲೆಯಾಳದ 6, ಒರಿಯಾದ 23, ಮರಾಠಿಯ 12, ಹಿಂದಿಯ 12 ಹಸ್ತಪ್ರತಿಯನ್ನು ಇಂಗ್ಲೆಡಿಗೆ ಸಾಗಿಸಲಾಗಿದೆ[3] ಇದರಿಂದ ಮೆಕೆಂಜಿ ಸಂಗ್ರಹದ ಮುಖ್ಯ ದಾಖಲೆಗಳು ಇಂಗ್ಲೆಂಡಿನಲ್ಲಿರಬಹುದು. ಬಹುಶಃ 531 ಹಸ್ತಪ್ರತಿಗಳು, 255 ಸ್ಥಳೀಯ ದಾಖಲೆಗಳು ಮತ್ತು 8000 ಶಾಸನಗಳು ಅಲ್ಲಿಗೆ ಹೋಗಿರಬಹುದಾಗಿದೆ.

ಉಳಿದುಳಿದ ಸಂಗ್ರಹವನ್ನು ಮದ್ರಾಸಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಂಗ್ರಹಿಸಲಾಗಿದೆ. ಅನಾಥವಾಗಿರುವ ಈ ದಾಖಲೆಗಳಲ್ಲಿ ಕೆಳದಿ ಇತಿಹಾಸಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಾಹಿತಿಗಳಿವೆ. ಇವುಗಳ, ಮೆಕೆಂಜಿ ಸಂಗ್ರಹದಲ್ಲಿ ಕನ್ನಡ

ನಾಡಿನ ಬಗೆಗೆ ಇರುವ ಒಟ್ಟು ದಾಖಲೆಗಳ ಸಂಗ್ರಹಕಾರ್ಯ ನಡೆದಿರುವುದು ಕಡಮೆ[4] ಈ ಲೇಖನದಲ್ಲಿ ಕೆಳದಿ ಸೋಮಶೇಖರನಾಯಕನ[5] ಮತ್ತು ರಾಮರಾಜನಾಯಕನ ನಿರೂಪ ಪ್ರತಿಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಮೆಕೆಂಜಿಯವರ ಒಟ್ಟು ದಾಖಲೆಗಳನ್ನು ಸಂಗ್ರಹಿಸಿ ಪ್ರಕಟಿಸಿದಲ್ಲಿ ಅದರಿಂದ ಕ್ರಿ. ಶ. 16–18ನೇ ಶತಮಾನದ ಸಾಮಾಜಿಕ, ಧಾರ್ಮಿಕ ರೀತಿ ನೀತಿಗಳನ್ನು ಅಭ್ಯಸಿಸಲು ಒಳ್ಳೆಯ ಆಕರವಾಗುವುದರಲ್ಲಿ ಅನುಮಾನವಿಲ್ಲ[6].

ನಿರೂಪ ೧

೧೨೦ ನಿರೂಪು । ಕೀಲಕ ಸಂವತ್ಸರದ ಪುಷ್ಯ ಬಹುಳ ೧೦ಲ್ಲು ಶ್ರೀಮತ್ಕೆಳದಿ ಸೋಮಶೇಖರನಾಯಕರು । ವೆಂಕಟೆಶ ಮಲ್ಲಿಗೆ ಬರಶಿ ಕಳುಹಿದ ಕಾರ್ಯ ಜೋಯಿಸ ಭಟ್ಟಕಳ ರಾಮನ ಮೊಂಮಗ ಅನಂತನು ಹಜೂರ್‍ರಿಗೆ ಬಂದು ಮಿಡಜಿಪೇಟೆಯಲ್ಲು ಯಿಹ ಶ್ರೀ ವೆಂಕಟೇಶ್ವರ ದೇವರ ಪೂಜೆಯಂನು ಪ್ರಾಕಾರಬ್ಯಾತ್ತಾನು ಮಾಡಿ ಬರುತ್ತೇನೆ । ಕಾಣಿಕೆ ಕೊಟೆನು ನಿರೂಪಕ್ಕೆ ಅಪ್ಪಣೆ ಆಗಬೇಕೆಂದು ಆ ರೀತಿ ಅಪ್ಪಣೆ ಆಗಬೇಕೆಂದು ನಿರ್ವಾಣಯ್ಯ ಮಾವನವರು ಹೇಳಿದ ಸಂಮಂಧ ಯೀ ಅನಂತನ ಕೈಯ್ಯಾ ಕಾಣಿಕೆ–। ೧೭ ಯೆಪ್ಪತ್ತೆರಡು ವರಹಾಂನು ಅರಮನೆಗೆ ತೆಗೆದುಕೊಂಡು ಮಿಡಜಿಪೇಟೆಯಲ್ಲು ಯಿಹ ವೆಂಕಟೇಶ್ವರ ದೇವರ ಪೂಜೆಯಂನು ಯಿ ಅನಂತಗೆ ಮಾಡಿ ಬಾಹಾಗೆ ಕಟ್ಟು ಮಾಡಿಶಿಕೊಂಡು ಬಾಹದು । ಭೂಮಿಯಂನು । ಯಿತನೆ ಹವಾಲೆ ಮಾಡಿ ಕೊಟ್ಟು ಪ್ರಾಕುಕಟಲೆ ಪ್ರಮಾಣ ದೇವರ ಪೂಜೆಯಂನು ಸಾಂಗವಾಗಿ ಮಾಡಿಸುತ್ತ–ಬಾಹದು। ಯಿ ಕಾಗದವ ಶ್ಯಾನಭೋವರ ಕಡಿತಕ್ಕೆ ಬರಶಿ ತಿರಗಾ ಯಿವನ ವಶಕ್ಕೆ ಕೊಡವುದಾಗಿ ಯೆಂದು ಬರದು ಯಿದ ಪ್ರತಿ ॥

ವಿಷಯ : ಸೋಮಶೇಖರ ನಾಯಕರು ವೆಂಕಟೇಶಮಲ್ಲರ ಮುಖಾಂತರ ಬರೆಸಿ ಕಳುಹಿಸಿದ ಕಾರ್ಯವೇನೆಂದರೆ, ಭಟ್ಕಳ ರಾಮನ ಮೊಮ್ಮಗ ಅನಂತನನ್ನು ಮಿಡಜಿಪೇಟೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವರ ಪೂಜೆಯನ್ನು ಮಾಡಿಕೊಂಡು ಬರುವಂತೆ ಕೊಟ್ಟ ನಿರೂಪ.

ನಿರೂಪ ೨

೧೩೫ ಬಹುಧಾಂನ್ಯ ಸಂವತ್ಸರದ ಆಷಾಢ ಶುದ್ಧ ೧೫ಲ್ಲು ಶ್ರೀಮತ್ಕೆಳದಿ ಸೋಮಶೇಖರ ನಾಯಕಅವರು ವಿಷ್ಣು ಸಭಾಯಿತಗೆ ಬರಶಿ ಕಳುಹಿದ ಕಾರ್ಯ । ಯಿ ದಿವಸ ಸೊಮಾಪರಾದ ಪುಂಣ್ಯ ತಲದಲ್ಲು ಗೋಕರ್ನದ ಮಾರಿಗೊಳಿ ನಾರಸಿಂಹ ಭಟಗೆ ನಮ್ಮ ಮಾತ್ತುಗಳು ।ಚಂನ ವೀರಂಮಾಜಿ ಅಂಮ ಭೂದಾನದ ಬಗ್ಯೆ ಸಹಿರಣ್ಯೋದಕ–ದಾನ ಧಾರಾಪೂರ್ವಕವಾಗಿ । ಧಾರೆಯನೆರದು ಬಗ್ಯೆ । ಮಿಡಜಿಶೀಮೆ । ಗೋಕರ್ನದ ಮಾಗಣಿ ಕಡಮೆ ಗ್ರಾಮದ ಹಬರಗಥೆಯೆಂಬ ಸ್ತಳದಿಂದಾ । ಗು ॥೧॥

ಯಿಗಾ ಹೆಚ್ಚಿದು ಪಗುದಿಚಕ್ರವಂತಿಗೆಯಿಂದಾ । ಗ ೧೯೯ಕ್ಕೆ-೯೧ । ಲ್ಲು ೯೩ — ಉಭಯಂ । ಗ೩೯ ಮೂರು ವರಹನ ಸ್ವಾಸ್ತಿಯೆಂನು ಶಿವಾರ್ಪಿತವಾಗಿ ಉತ್ತಾರವ ಕೊಟೆಧೆವೆ ರಿಷೆ ಪ್ರಮಾಣು ಭೂಮಿ ವಿಂಗಡಿಶಿ ಕೊಟ್ಟು । ಯಿೂ ಕಾಗದವ ಶೇನಭೂವರ ಕಡಿತಕ್ಕೆ ಬರಶಿ ತಿರುಗಾ ಯಿವನ ವಶಕ್ಕೆ ಕೊಡುವದಾಗೆಯೆಂದು ಬರಶಿಕೊಟ್ಟ ನಿರೂಪಿನ ಪ್ರತಿ ॥

ವಿಷಯ : ಸೋಮಶೇಖರನಾಯಕನು ವಿಷ್ಣುಸಭಾಯಿತಗೆ ಬರೆದುಕಳಿಸಿದ ಕಾರ್ಯ. ಸೋಮೋಪರಾಗ ಪುಣ್ಯಕಾಲದಲ್ಲಿ ಗೋಕರ್ನದ ಮಾರಿಗೊಳಿ ನರಸಿಂಹ ಭಟ್ಟರಿಗೆ ಚನ್ನವೀರ ಯೊಜಿ ಅನುನವರು ಇತ್ತ ಭೂದಾನದ ವಿವರ.

ನಿರೂಪ ೩

೧೨೮ ॥ ವಿಕಾರಿ ಸಂವತ್ಸರದ ಶ್ರಾವಣ ಬಹು ೧೦ಲ್ಲೂ ಶ್ರೀಮತ್ಕೆಳದಿ ಸೋಮಶೇಖರ ನಾಯಕರು ಬಸವಲಿಂಗಪ್ಪಗೆ ಬರಶಿ ಕಳುಹಿದ ಪ್ರಯೋಜನಾ ಕೊಲ್ಲು ಗುಣಸೆ ಭದ್ರಂಣನು ಹಜೂರ್‍ರ್ರು ಬಂದು । ಮಿಡಜಿ ಮಾಗಣೆಯಲ್ಲು ಬಸವರಾಜಪುರದ ಚಂನ ಬಸವೇಶ್ವರ ದೇವರಿಗೆ ಉತ್ತರವಾದ ಹರ್‍ರಿಟಿ ಶೀಮೆ ಉಪ್ಪಿನ ಪಟ್ಟಣದ । ಗ್ರಾಮದಲ್ಲು । ನಿರ್ವಾಣ್ಯೆಯನವರ ಹೆಸರಲ್ಲು ತಾನು ಹರ್‍ರಿಟಿ ಶೀಮೆ ಸ್ತಳದ ಶಾನುಬಾಗ ಅನಂತೈಯನ ಮುಖಾಂತ ಮಹಂತಿನ ಮಠ ಕಟ್ಟಶಿದ್ದೆನೆ ಯಿ ಮಠದ ಧರ್ಮಕ್ಕೆ ಸ್ವಾಸ್ತಿಯಿಲ್ಲಾ ಕ್ರಯವಕೊಟೆನು ಹರ್‍ರಿಟಿ ಶೀಮೆಯಿಂದಾ ಪುರವರ್ಗದ ಅಗ್ರಹಾರಕ್ಕೆ ಉತ್ತರವ ಕೊಟ ಸ್ವಾಸ್ತಿಯಿಂಥಾ ಸ್ವಾಸ್ತಿ ಉತ್ತರವ ಕೊಡಬೇಕುಯೆಂದು ಹೇಳಿಕೊಂಡ ಸಂಬಂಧಾ । ಯಿ ಪುರವರ್ಗದ ಅಗ್ರಹಾರದ ಚಂನಬಸವೇಶ್ವರ ದೇವರ ಆದಾಯ ವೇಚಕ್ಕೆ ಶಿಸ್ತು ।ಗ ೧ಕ್ಕೆ ಕ್ರಯಾ ।ಗ ೧೦೯ಲ್ಲು ತೆಗೆದುಕೊಂಡ ಶಿಸ್ತು ।ಗ ೨೫೦ ಯಿಪ್ಪತ್ತೈದು ವರಹಾಂನ ಶಿಸ್ತಿನ ಭೂಮಿಗೆ ಶಿಲಾಸ್ತಾಪಿತವ ಮಾಡಿಕೊಡಬೇಕೆಂದು ಹೇಳಿಕೊಂಡದರಿಂದಾ । ಯಿೂತನ ಕೈಯೂ ಚನ್ನಬಸವೇಶ್ವರ ದೇವರ ಆದಾಯ ವೇಚಕ್ಕೆ ।ಗ ೨೫೦ ಯಿಂನೂರು ಅಯಿವತ್ತು ವರಹಾ ಯಿೂತನ ಕೈ ತೆಗೆದುಕೊಂಡು ಉತ್ತರವ ಕೊಟ್ಟದ್ದು । ಯಿೂ ಚಂನಬಸವೇಶ್ವರ ದೇವರ ಉತ್ತಾರ ಸ್ವಾಸ್ತಿಯಿಂದಾ ಉತ್ತರವ ಕೊಟ್ಟದ್ದು । ಯಿೂ ಹ(ಂಟಿಶೀಮೆ ಉಪಿನಪಟಣ ಗ್ರಾಮದೊಳಗಣ ಕೋಣಕೇರಿಯಂಬ ಸ್ತಳದಿಂದಾ । ಸಹಾ । ಗ ೨೫೯ ಯಿಪ್ಪತ್ತೈದು ವರಹಾಂನು ಶಿಸ್ತಿನ ಭೂಮಿ ಸ್ವಸ್ತಿಯೆಂನು ಯಿ ಮಹಂತಿನ ಮಠದ ಧರ್ಮಕ್ಕೆ ಶಿವಾರ್ಪಿತವಾಗಿ ಕೊಟ್ಟು । ಯಿೂ ಭೂಮಿಗೆ ಲ್ಲಿಂಗ ಮುದ್ರೆ । ಶಿಲಾಸ್ತಾಪಿತವ ಮಾಡಿಸುವ ಬಗ್ಯೆ ಹಜೂರ್‍ರಿಂದಾ । ಊಳಿಗದ ಚಂನ ಬಸಪ್ಪಯನ ಕಳುಹ್ಸಿ ಯಿಥವ । ಯಿೂತನ ಮುಂತಿಟ್ಟು । ಚಲುಗ್ರಾಮದವರ ಕರಶಿಕೊಂಡು ಗಡಿ ತತ್ವಾರ ಬಾರದ ರೀತಿ ಯಿವನ ಮುಂತಿಟ್ಟು ಲಿಂಗಮುದ್ರೆ ಶಿಲಾಸ್ತಾಪಿತವ ಮಾಡಿಶಿಕೊಟ್ಟು । ಯಿೂ ಕಾಗದ ಶಾನುಭೋಗನ ಕಡಿತಕ್ಕೆ ಬರಶಿ ತಿರಗಾ ಯಿ ಭದ್ರಂಣನ ವಶಕ್ಕೆ ಕೊಡುವದಾಗಿಯಂದು ಬರದ ನಿರೂಪದ ಪ್ರತಿ ॥

ವಿಷಯ: ಸೋಮಶೇಖರ ನಾಯಕನು ಬಸವಲಿಂಗಪ್ಪಗೆ ಬರೆದು ಕಳುಹಿಸಿದ ಕಾರ್ಯ. ಕೊಲ್ಲುಗುಣಸೆ ಭದ್ರಂಣನು ಮಿಡಜಿ ಮಾಗಣೆಯಲ್ಲಿ ಬಸವರಾಜಪುರದ ಚನ್ನಬಸವೇಶ್ವರ ದೇವರಿಗೆ ಹರಿಟಿ ಶೀಮೆ ಉಪಿನ ಪಟ್ಟಣದ ಗ್ರಾಮದಲ್ಲಿ ನಿರ್ವಾಣ್ಯೆಯನವರ ಹೆಸರಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ಬಿಟ್ಟ ದಾನದ ವಿವರ.

ನಿರೂಪ ೪

೧೪೯ ಪರಿಧಾವಿ ಸಂವತ್ಸರದ ಮಾರ್ಗಶಿರ ಬಹುಳ ೧೦ಲ್ಲು ಶ್ರೀಮತ್ಕೆಳದಿ ಸೋಮಶೇಖರ ನಾಯಕರು ಬಸವಲಿಂಗಪ್ಪಗೆ ಬರಶಿ ಕಳುಹ್ಸಿದ ಕಾರ್ಯ ಹುಜೂರು ಕೊಲ್ಲು ಗುಣಸೆ ಭದ್ರಂಣನು । ಬಸವರಾಜಪುರದ ಪುರವರ್ಗಕ್ಕೆ ಉತ್ತರವ ಕೊಟ್ಟ ಹರ್‍ರಿಟೆ ಶೀಮೆ । ಉಪಿನ ಪಟಣದ (ಗ್ರಾಮದಲ್ಲು) ಕಟಶಿದ । ಮಹಂತಿನ ಮಠದ ಧರ್ಮಕ್ಕೆ ಉತ್ತರವ ಕೊಟ್ಟ ಸ್ವಾಸ್ತಿ । ಸಾಲದಿದ್ದರಿಂದಾ ಮಿಡಜಿಶೀಮೆ ಹರ್‍ರಿಟೆಯಲ್ಲು ದಿವಿಗೆ ಗ್ರಾಮದಿಂದಾ । ಗಾವಕಾಕಭಟನ ಭಟಗೆ ಉಂಬಳಿ ಉತ್ತರವಾದು । ಗ 3೬೦ ಮೂರು ವರಹಾಂನ ಬಗ್ಯೆ ಅರಸು ಅಪುತ್ರನಾಗಿ ಹೋದಲ್ಲಿ ಆ ಭೂಮಿಯು ಹಾಳು ಬಿದ್ದುಯಿದಲ್ಲಿ ಆ ಗ್ರಾಮದವರು ತಾವು ಸಾಗುಮಾಡಿ ಯಿ ಮಠದ ಧರ್ಮಕ್ಕೆ ನಡೆಶಿ ಬಂದೆಉ ಯಂದು ಬರಕೊಟ ಪಟಿ ಪ್ರಮಾಣ ನಡದು ಬರತ್ತದೆ ಯಿೂ ಭೂಮಿ ಮಠಕ್ಕೆ ದೂರವಾಗಿ ಅದೆ । ಯಿೂ ಭೂಮಿಯಂನು ಪುರವರ್ಗಕ್ಕೆ ಉತ್ತರವ ಕೊಟ್ಟು ಯಿ ಪುರವರ್ಗದ ಉತ್ತರದ ಯಲವಳೀ ಗ್ರಾಮದ ಆನೆಗುಂದಿ ಸ್ತಳದಿಂದಲ್ಲು ಉತ್ತರವ ಕೊಡಬೇಕೆಂದು । ಹೇಳಿಕೊಳ್ಳುತ್ತಾನೆ । ಆ ರೀತಿ ಅಪ್ಪಣೆ ಆಗಬೇಕೆಂದು । ನಿರ್ವಾಣಯ್ಯ ಮಾವನವರು ಹೇಳಿದ ಸಂಬಂಧ ಸಾವಕಾರ ಭಟಣಗೆಧಿಸಿಗೆ ಗ್ರಾಮದಲ್ಲು ಉತ್ತರವಾದ ಉಂಬಳಿ । ಗ 3೬೦ನು ಸಲವಿಟು ಪುರವರ್ಗಕ್ಕೆ ಉತ್ತರಾಕೊಟ್ಟು ಯಿೂ ಬದಲಿಗೆ ಹರ್‍ರಿಟೆ ಶೀಮೆ ಸ್ತಳದ ಶೇನಬೂವ ಬರಶಿಕೊಟ್ಟ ಚಪು ಪ್ರಮಾಣಾ ಯಿ ಶೀಮೆ ಯಲವಳೀ ಗ್ರಾಮದೊಳಗಣ ಆನೆಗೊಂದಿ ಸ್ತಳದಿಂದಾ । ಪುರವರ್ಗದ ಉತ್ತರದಿಂದಾ ಶಿಸ್ತಿನಿಂದಾ । ಗ ೨॥3॥=ನಷ್ಟದಿಂದಾ ೬೧।=ಉಭಯಂ ಪುತ್ತೂರವಕೊಟ । ಗ 3೬೦ ಉತ್ತಾರ ಬರಕೊಟ್ಟ ಶಿಸ್ತು ಹೊರತಾಗಿ ರೆಖೆಯಲ್ಲು ಬರದ ನಷ್ಟದಿಂದಾ ।೬೧ ಉಭಯಂ ।ಗ 3೬೧ರ ವಿವರ ಯಿೂ ಭದ್ರಂಣನ ಕೈಯ ಕ್ರಯ ।ಗ ೧೫೬೦ ಹದಿನೈದು ವರಹಾಂನು ಪುರವರ್ಗದ ಆದಾಯ ವೆಚ್ಚಕ್ಕೆ ತೆಗೆದುಕೊಂಡು ಉತ್ತಾರವ ಕೊಟ್ಟದು ಗ೧॥ ಶಿವಾರ್ಪಿತವಾಗಿ ಕೊಟದು ।ಗ೧॥ ಉಭಯಂ ।ಗ3೬೧ ಮೂರು ವರಹಾಂನು ವಂದು ಹಣವಿನ ಸ್ವಾಸ್ತಿಯಂನು ಕೊಲ್ಲುಗುಣಸೆ ಭದ್ರಂಣನು ಹರ್‍ರಿಟೆ ಶೀಮೆ । ಉಪಿನಪಟಣದ ಗ್ರಾಮದಲ್ಲು ಕಟಸಿದ ಮಹಂತಿನ ಮಠದ ಧರ್ಮಕ್ಕೆ ಶಿವಾರ್ಪಿತವಾಗಿ ಕೊಟ್ಟು ಯಿೂ ಭೂಮಿಗೆ ಲಿಂಗಮುದ್ರೆ ಶಿಲಾಸ್ತಾಪಿತವ ಮಾಡಿಸುವಲ್ಲಿಗೆ ಹಜೂರ್‍ರಿಂದ ಉಳಿಗದವನ ಕಳುಹ್ಸಿಯಿದೆ ಆಚ–ಉಗ್ರಾಮದವರ ಕರಶಿಕೊಂಡು ಗಡಿ ತತ್ಸಾರಬಾರದ ರೀತಿಯವನ ಮುಂತಿಟ್ಟು । ರೇಖೆ ಪ್ರಮಾಣು ಭೂಮಿಗೆ ಶಿಲಾ

ಸ್ತಾಪಿತವ ಮಾಡಿಶಿಕೊಟ್ಟು ಯಿೂ ಕಾಗದವ ಶೇನಭೋವರ ಕಡಿತಕ್ಕೆ ಬರಶಿ ತ್ತಿರಗಾ ಯಿವನ ವಶಕ್ಕೆ ಕೊಡವುದಾಗಿಯೆಂದು ಬರೆದ ನಿರೂಪದ ಪ್ರತಿ ||

ವಿಷಯ : ಶ್ರೀ ಸೋಮಶೇಖರ ನಾಯಕರು ಬಸವಲಿಂಗಪ್ಪಗೆ ಬರೆಸಿ ಕಳಿಸಿದ ಕೆಲಸ. ಕೊಲ್ಲುಗುಣಸೆ ಭದ್ರಣನು ಉಪಿನ ಪಟಣದಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ಬಿಟ್ಟ ಸ್ವಾಸ್ತಿ ಸಾಲದಿದ್ದರಿಂದ ಸ್ವಾತಿ ಹೆಚ್ಚಿಗೆ ಬಿಟ್ಟ ಉಂಬಳಿ, ದತ್ತಿಯ ವಿವರ.

ನಿರೂಪ ೫

೧೩೦ ಪರಿಧಾವಿ ಸಂವತ್ಸರದ ಮಾರ್ಗಶಿರ ಬಹುಳ ೧೦ಲ್ಲು ಶ್ರೀಮತ್ಕೆಳದಿ ಸೋಮಶೇಖರನಾಯಕರು ಬಸವಲಿಂಗಪ್ಪಗೆ ಬರಶಿ ಕಳುಹ್ಸಿದ ಪ್ರಯೋಜನಾಹುದಾರ ಕೊಲ್ಲು ಗುಣಸ ಭದ್ರಂಣನು ಬಸವರಾಜಪುರದ ಪುರವರ್ಗಕ್ಕೆ ಉತ್ತಾರವ ಕೊಟ ಹರ್‍ರಿಟೆ ಶೀಮೆ ಉಪಿನ ಪಟಣದ ಗ್ರಾಮುದಲ್ಲು ಕಟ್ಟಶಿದ ಮಹಂತಿನ ಮಠದ ಧರ್ಮಕ್ಕೆ ಪ್ರಾಶು ಉತ್ತಾರವ ಕೊಟ್ಟ ಸ್ವಾಸ್ತಿ ಸಾಲದುದ್ದರ್‍ರಿಂದಾ | ಮಿಡಜಿಶೀಮೆ ದೇಸಾಯಿ ಅಬ್ಬೆನಾಯಕ ಕೊನನಾಯಕನು ತನಗೆ ಉತ್ತಾರವಾದ ಉಂಬಳೀವಳಗೆ ಹರ್‍ರಿಟೆಶೀಮೆ ಪ್ರಜೆಗಳು ತಾವು ತೆರುವ ಶಿಸ್ತಿನ ಮೆಲ್ಲೆ |ಗ ೧ವರಹಾಕ್ಕೆ ೬=ಬೆಳೆಯಲ್ಲು ತಮ್ಮ ಶಿಸ್ತಿಗೆ ಕೂಡಿಕೊಂಡು | ಯೀ ಮಠಧರ್ಮಕ್ಕೆ ನಡಶಿ ಬಂದೆನೆಂದು | ಬರಕೊಟ್ಟ ಪಟಿ ಪ್ರಮಾಣು |ಗ ೧೨|| ಹನ್ನೆರಡುವರೆ ಉಭಯಂ |ಗ ೧೮|| 0 ಹದಿನೆಂಟುವರೆಯನ್ನು ಪುರವರ್ಗಕ್ಕೆ ಉತ್ತಾರವ ಕೊಟ್ಟು ಯಿೂ ಬಗ್ಯೆ ಕಾಣಿಕೆ ಹೆಚ್ಚಾದ ಭೂಮಿಗೆ ಕ್ರಮ ಸಹಾ ಕೊಟ್ಟೆನು ಪುರವರ್ಗಕ್ಕೆ ಉತ್ತಾರವ ಕೊಟ್ಟ ಹರ್‍ರಿಟೆ ಶೀಮೆಯಲ್ಲು | ಯಲ್ಲವಳಿ ಗ್ರಾಮುದಲ್ಲು ಆನೆಗುಂದಿ ಸ್ತಳದಿಂದಾ ಯಿ ಮಠದ ಧರ್ಮಕ್ಕೆ ಉತ್ತರವ ಕೊಡಬೇಕೆಂದು ಹೇಳುತ್ತಾನೆ | ಆ ರೀತಿ ಅಪ್ಪಣೆ ಆಗಬೇಕೆಂದು ನಿರ್ವಾಣಯ್ಯ ಮಾವನವರು ಹೇಳಿದ ಸಂಬಂಧಾ ಹರ್‍ರಿಟೆ ದೇಸಾಯಿ ಅಬ್ಬೆನಾಯಕ=ಕೊನನಾಯಕನ ಉಂಬಳಿಯಿಂದಾ ಬರಕೊಟ್ಟಪಟ್ಟೆ ಪ್ರಮಾಣ |ಗ ೬೦ ಅರು ವರಹಾ ಸಲವಿಟು ಯಿೂ ಶೀಮೆ ಪ್ರಜೆಗಳು ವರಾಡಿಸಿ ಕೊಟ್ಟು ಬಂದೆನೆಂದು ಬರಕೊಟ್ಟ ಪಟ್ಟೆ ಪ್ರಮಾಣು |ಗ ೧೨|| ಉಭಯಂಗ ೧೮|| ಹದಿನೆಂಟು ವರ ವರಹಂನು ಆ ಗ್ರಾಮುಗಳ ಶಿಸ್ತಿಗೆ ಕೂಡಿಶಿಕೊಂಡು ಪುರವರ್ಗಕ್ಕೆ ಉತ್ತಾರವಕೊಟ್ಟು | ಯಿೂಬಗ್ಗೆ ಭದ್ರಂಣನ ಕೈಯ ಕಾಣಿಕೆ ಬಗೆಯಲ್ಲು |ಗ ೧೮೫ ನೂರಾಯಂಭತ್ತು ಅಯಿದು ವರಹಾಂನು| ಉತ್ತರವಾದ ಪುರವರ್ಗದ ಆದಾಯವೆಚ್ಚಕ್ಕೆ ತೆಗೆದುಕೊಂಡು / ಉತ್ತರವ ಕೊಟದು ಹರ್‍ರಿಟೆ–ಶೀಮೆಸ್ತಳದ ಶಾನುಭೋಗ ಬರಕೊಟ್ಟ |ಚ–ಪ್ಪು ಪ್ರಮಾಣು |ಯಿೂ ಶೀಮೆಯಲ್ಲೂ ವಳೀಗ್ರಾಮದ ವಳಗಣ ಆನೆಗುಂದಿ ಸ್ತಳದಿಂದಾ |ಗ ೧೭||ಳ ನಷ್ಟದಿಂದಾ |ಗ||೧=ಉಭಯಂ|ಗ ೧೯೬೩=ವಿರರಾಯಿೊದ ಭದ್ರಂಣನು ವಪ್ಪಿಸಿಕೊಟ್ಟ ಸ್ವಾಸ್ತಿ ಪುರವರ್ಗಕ್ಕೆ ಉತ್ತರವ ಕೊಟ್ಟ ಗ೧ಳ|| ಯೀ ಪುರವರ್ಗದ ಉತ್ತರದಿಂದಾ ಉತ್ತಾರ ಕೊಟ್ಟದು ೬೨= ಉಭಯಂ ಉತ್ತರದಿಂ |ಗ೧೮||೨=ಗ೧೮| ಯೀ ಪುರವರ್ಗದ ಉತ್ತಾರ ಬರದ ಶಿಸ್ತು

ಹೊರತಾಗಿ । ರಿಪೆಯಲ್ಲುಬರದ ನಷ್ಟದಿಂದಾ ಶಿವಾರ್ಪಿತವಾಗಿ ಕೊಟದ್ದು ಗo||೧ ಉಭಯಂ।ಗ೧೯-3 ಹತ್ತೊಂಬತ್ತು ವರಹಾಂನು ಮೂರುಹಣ ಬೆಳೆ ಸ್ವಾಸ್ತಿಯಂನ್ನು ಕೊಲಗುಣಸೆಭದ್ರಂಣನು ಹರ್‍ರಿಟಿಶೀಮೆ । ಉಪಿನ ಪಟಣದ ಗ್ರಾಮದಲ್ಲು ಕಟಿಶಿದ ಮಾಹಂತಿನ ಮಠ ಧರ್ಮಕ್ಕೆ ಶಿವಾರ್ಪಿತವಾಗಿ । ಕೊಟ್ಟು ಯಿೂ ಭೂಮಿಗೆ। ಲಿಂಗಮುದ್ರೆ ಶಿಲಾಸ್ತಾಪಿತ ಮೊಡಿಸುವಲ್ಲಿ ಹಜೂರ್‍ರಿಂದಾ ಉಳಿಗದವನ ಕಳುಹ್ಸಿಯಿಂದ ಯಿವನ ಮುಂತಿಟ್ಟು ರಿಪೆ ಪ್ರಮಾಣನ ಭೂಮಿಗೆ। ಶಿಲಾಸ್ತಾಪಿತ ಮಾಡಿಶಿಕೊಟ್ಟು ಯಿೂ ಕಾಗದವ ಶ್ಯಾನಭಾಗನ ಕಡಿತಕ್ಕೆ ಬರಶಿ ತಿರುಗಿ ಯಿತನ ವಶಕ್ಕೆ ಕೊಡುವದಾಗಿ ಶಿಪೆಯಾದ ನಿರೂಪು ಪ್ರತಿ ||

ವಿಷಯ : ಶ್ರೀ ಸೋಮಶೇಖರ ನಾಯಕರು ಬಸವಲಿಂಗಪ್ಪನಿಗೆ ಬರೆದುಕಳಿಸಿದ ಕೆಲಸ. ಕೊಲ್ಲುಗುಣಸೆ ಭದ್ರಣನು ಉಪಿನ ಪಟಣದ ಗ್ರಾಮದಲ್ಲು ಕಟ್ಟಿಸಿದ ಮಹತ್ತಿನ ಮಠಕ್ಕೆ ಸ್ವಾಸ್ತ ಸಾಲದೆಹೋದ್ದರಿಂದ ಹೆಚ್ಚುವರಿಯಾಗಿ ಬಿಟ್ಟ ದಾನ-ದತ್ತಿಯ ವಿವರ. ಕೆಳದಿ ಇತಿಹಾಸದಲ್ಲಿ ಮೂವರು ಸೋಮಶೇಖರ ನಾಯಕರು ಬರುತ್ತಾರೆ. 1. ಹಿರಿಯ ಸೋಮ ನಾಯಕ (1663–1672) ಇಮ್ಮಡಿ ಸೋಮಶೇಖರ ನಾಯಕ (ಕ್ರಿ.ಶ. 1714–1739) ಶೇಖರ ಮುಮ್ಮಡಿ ಸೋಮಶೇಖರ ನಾಯಕ (ಕ್ರಿ..ಶ. 1758–1763) ಇದು ಎರಡನೇ ಸೋಮಶೇಖರನ ಕಾಲದ್ದಿರಬಹುದಾಗಿದೆ.

ನಿರೂಪ ೬

೧೨೨ ಮನ್ಮಥ ಸಂವತ್ಸರದ ಮಾಘ ಶು॥ ಶ್ರೀಮತು ರಾಜಾರಾಮರವರು ಭಟಕಳದ ಕೃಷ್ಣಾಪ್ರಭುಗೆ ಬರಶಿ ಕಳುಹಿದ ಕಾರ್ಯ ಅದಾಗಿಹ ಹರ್‍ರಿಟೆ ಶೀಮೆಯಲ್ಲು ಯಿರುವ ಶ್ಯಾನುರುಲ್ಲಾರ ತಾಲೂಕು ವಸುಧಿಗೆ ನಡೆದು ಬರುವ ಯಿನಾಮಿನ ಭೂಮಿ ಯಿಂದ ಅರಮನಿಗೆ ಬರತಕ್ಕ ಆರವಾಸೆ ಬಗೆಯಲ್ಲು ಹೈದರ ।ಗ 3೧ ಮೂವತ್ತೊಂದು ವರಹಂನು ತ್ತೆಗೆದು ಕೊಂಬುವುದು ಪಟ್ಟಿ ಪಗದಿ ವರಾಡ ಸಾಹಾ ಕೆಳದಿದ್ದ ಹಾಗೆ ಹಜೂರ್‍ರು ಬುದ್ಧಿ ಉತ್ರಾ ನಿರೂಪು ಪ್ರಕಾರ ಮೊದಲೆ ಉತ್ರಾ ಬರಶಿ ಕಳುಹಿದಲ್ಲಿ ಆ ಪ್ರಕಾರ ನಡಕೊಳದೆ ಪುನಹಾ । ಪಟ್ಟಿ ಪಗದಿ ಮುಂತಾಗಿ । ಕೊಡ ಹೇಳಿ ಉಪದ್ರಾ ಮಾಡತೀರಂತೆ-। ಕಾರಣವೇನು । ಯಿಂನಾದರು ಮೊದಲು ಬರಶಿ ಕಳುಹಿದ ಮೇರಿಗೆ ಆರವಾಸೆ ಪ್ರಕಾರ ಗ 3೧ ಮೂವತ್ತವಂದು ವರಹಾಂನ ಮೇರ್‍ರಿಗೆ ತೆಗೆದುಕೊಂಬುದು ಪಟ್ಟಿ ಪಗದಿ ಮಾಡಿದ ಬಗ್ಯೆಲ್ಲಿ ಸಹಾ ಕರಣಿಕರ ಲೆಖ ಪ್ರಕಾರ ಬರುತ್ತಿದ್ದಂ ಗ೭ಯೇಳು ವರಹಾಂನು ಬರಬೇಕು ಯೆಂದು ಕೇಳಲಾಗದು । ಯಿ ಉತ್ರಾ ಶ್ಯಾನಬಾಗರ ಲೆಖಕ್ಕೆ ಬರಶಿ ಪುನಹಾ ಯಿವರ ವಶಕ್ಕೆ ಕೊಡಿಸುವದು ಯೆಂದು ಬಂದ ಉತ್ರದ ನಕಲು.

ವಿಷಯ : ಶ್ರೀ ರಾಜಾರಾಮ ನಾಯಕರು ಭಟಕಳದ ಕೃಷ್ಣಾಪ್ರಭುಗೆ ಬರೆಸಿ ಕಳುಹಿಸಿದ ಕೆಲಸ. ಹರಿಟೆ ಶೀಮೆಯಲ್ಲಿ ಯಿರುವ ಶ್ಯಾನುಮಲ್ಲರ ತಾಲೂಕು ವಸುಧಿಗೆ ನಡೆದು ಬರುವ ಯಿನಾಮಿನ ಭೂಮಿಯಿಂದ ಅರಮನೆಗೆ ಬರತಕ್ಕ ಆರವಾಸೆಗೆ ಸಂಬಂಧಿಸಿದ ವಿವರ. ರಾಜಾರಾಮ ನಾಯಕರು ಕೆಳದಿಯನ್ನು ಕ್ರಿ.ಶ. 1571 ರಿಂದ ಆಡಳಿತ ನಡೆಸಿದರು.

1. Wilson M. M. Wilsons's Mackenzie Collection M and Co, Madras,1882, pp, 13,

2. Wilson 1882, pp. XII.

3. Taylor William Examination and Analysis of Mackenzie Manuscripts, Madras, 1838, pp. 12-13,

3. ಮೆಕೆಂಜಿ ಸಂಗ್ರಹವನ್ನಾಧರಿಸಿ ಡಾ|| ಕುಶಾಲಪ್ಪಗೌಡ, ಕೆ. ಚಿನ್ನಪ್ಪಗೌಡ ಇವರು ಸಂಪಾದಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು-ಧರ್ಮಸ್ಥಳದ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ ಉಜಿರೆ. ದ.ಕ. 1983 ಮತ್ತು ಡಾ|| ಪುರುಷೋತ್ತಮ ಬಿಳಿಮಲೆಯವರ ಮೆಕೆಂಜಿ ಕೈಫಿಯತ್ತುಗಳು, ಲೇಖಕರೇ ಪ್ರಕಾಶಕರು, 1985. ಇವು ಪ್ರಮುಖವಾದವು. ಅಲ್ಲದೆ ಇತಿಹಾಸ ದರ್ಶನ ಸಂಪುಟ 2/1992ರಲ್ಲಿ ಕೊಂಕಣ ಮಠದ ನಿರೂಪಗಳನ್ನು ಶ್ರೀ ಜಿ. ವಿ. ಕಲ್ಲಾಪುರರು ದಾಖಲಿಸಿದ್ದಾರೆ. ಡಾ|| ಎಂ. ಎಂ. ಕಲಬುರ್ಗಿಯವರು ಮೆಕೆಂಜಿ ಸಂಗ್ರಹದಲ್ಲಿಯ ಕನ್ನಡ ದಾಖಲಾತಿಗಳ ಬಗ್ಗೆ ಒಂದು project ತೆಗೆದುಕೊಂಡಿದ್ದಾಗಿ ಕೇಳಿರುವೆನು.

6. ಇದು ಇಮ್ಮಡಿ ಸೋಮಶೇಖರ ನಾಯಕ (1714–1739)ನ ಕಾಲದ ದಾಖಲೆಗಳಿರಬಹುದು.

6. ಅಲ್ಫಬೆಟಿಕಲ್ ಲೀಸ್ಟ್ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್, ಮೆಕೆಂಜಿ ಕಲೆಕ್ಷನ್ಸ್, ಜಿ. ಬಿ. ಎಂ. ಎಲ್., ಮದ್ರಾಸು, ಇದು ಒಂದು ಕ್ಯಾಟಲಾಗ್. ಡಾ|| ವಸಂತ ಮಾಧವರು ತಮ್ಮ ರಿಲಿಜಿಯನ್ಸ್ ಇನ್ ಕರ್ನಾಟಕ 1500–1763 ಎಡಿಯಲ್ಲಿ ಕೆಲವು ಮೆಕೆಂಜಿ ಸಂಗ್ರಹದ ನಿರೂಪಗಳನ್ನು ಪ್ರಕಟಿಸಿದ್ದಾರೆ.



ಚಿತ್ರ—1 ಕಲ್ಲತ್ತಿ ಪ್ರಪಾತ [illegible] ಪುಟ 40

ಚಿತ್ರ—2




[illegible] ಪುಟ—33



ಚಿತ್ರ—3 ಜಲಪಾತದ ರಮ್ಯ ವಾತಾವರಣದಲ್ಲಿರುವ ಆನೆಯ ದೇಹಭಾಗ

ಚಿತ್ರ—4



ಗುಮ್ಮನಾಯಕನ ಕೋಟೆ—ಒಂದು ಪರಿಚಯ

(ಪುಟ 67)

ಶ್ರೀಮದ್ಗೋಸಲಾರ್ಯಯತಿ

ಪ್ರೊ|| ಸಿ. ಮಹದೇವಪ್ಪ

ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಗುರುಪರಂಪರೆಯಲ್ಲಿ 12ನೆಯ ಪಟ್ಟ ಮೂರ್ತಿಯೇ ಶ್ರೀಮದ್ಗೋಸಲಾರ್ಯಗುರು. ಮೂರನೆಯ ಹೊಯ್ಸಳ ಬಲ್ಲಾಳನ ಅನಂತರ 11-8-1343 ರಂದು ಪಟ್ಟಕ್ಕೆ ಬಂದ ಆತನ ಮಗನೆ ವೀರ ವಿರೂಪಾಕ್ಷ ಬಲ್ಲಾಳ ಉರುಫ್ ಹಂಪೆಯ ಒಡೆಯ.* ಆತನು ಕೈಕೊಂಡ ದಕ್ಷಿಣದೇಶದ ವಿಜಯಯಾತ್ರೆಯ ತಾರಣ ಸಂವತ್ಸರದಲ್ಲಿ ಹರದನ ಹಳ್ಳಿಯ ಗೋಸಲಾರ್ಯವರ್ಯಸ್ವಾಮಿ ಯವರಿಂಗೆ ಬರೆಸಿಕೊಟ್ಟ ತಾಮ್ರ ಶಾಸನದಲ್ಲಿ ನಿರೂಪಿಸಿರುವ ವಿಷಯಗಳಲ್ಲಿ ಗುರುವನ್ನು ಕುರಿತು ನಿರೂಪಿತವಾಗಿರುವ ಅಂಶಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಅಲ್ಲದೆ ಆ ಶಾಸನವನ್ನೂ ಮುಂದೆ ಉಲ್ಲೇಖಿಸಿದೆ.

1. ಶ್ರೀಮದ್ಗೋಸಲಾರ್ಯಯತಿವರ್ಯರು ಅನಾದಿಗಣ ಮರುಳಾರ್ಯವಂಶದವರು. ಆ ವಂಶಪರಂಪರಾನುಗತ ಪರಿವಿಡಿದ ರಾಜಗುರು ಅಪ್ಪಣಾರ್ಯರೇ ಅವರ ತಂದೆ.

2. ನಿಜಪಟ್ಟಮೂರ್ತಿಯಾಗಿ ಅವರು ಮೆರೆದ ಪವಾಡಗಳು :-

1) ಕಲ್ಲ ಗೂಳಿಯ ನುಡಿಸಿದುದು. 2) ಪಂದವಡೆಯನೆಂಬುವನಿಗೆ ದಾಸೋಹದಲ್ಲಿ ತುಪ್ಪ ಕಡಿಮೆಯಾಗಲು ಕುಂಭೋದಕವ ತರಿಸಿ ಉಣಬಡಿಸಿದುದು. 3) ಸರ್ಪದಷ್ಟನಾದ ರಾಜನ ಮಗನನ್ನು ಬದುಕಿಸಿದುದು. 4) ತುಳುವ ದೇಶಕ್ಕೆ ಬಂದು ತುಲಕಾಣ್ಯರಿಗೆ ಮಹಿಮೆತೋರಿ "ಶತಪವಾಡ ಮಹನೀಯರೆಂದು ಬಿರುದಂ" ಪಡೆದುದು.

ಶ್ರೀ ಸ್ವಾಮಿಗಳವರ ಸನ್ನಿಧಾನಕ್ಕೆ ಸಲ್ಲಿಸಿದ ತಾಮ್ರ ಶಾಸನದಿಂದ ತಿಳಿದು ಬರುವ ಮಿಕ್ಕ ಕೆಲವು ಸಂಗತಿಗಳು :

1) ಹಿರಿಯ ಮಡಿವಾಳದ ಶಿವನಂಕಾರೇಶ್ವರ ಲಿಂಗಕ್ಕೆ ಚಂದ್ರಣಿಮಠ, 2) ಮಾದೇಶ್ವರರಿಗೆ ಕಂಚಿ ತೆಲುಗಾಣ್ಯಮಠ 3) ಪಂದೇಶ್ವರರಿಗೆ ಶ್ರೀ ವಾಣಿಜ್ಯ ಪುರಿಯ ಮಠ, 4) ಸಿದ್ಧೇಶ್ವರರಿಗೆ ಕೆಂಬಲ್ಲೂಮಠ, 5) ಬ್ರಹ್ಮೇಶ್ವರರಿಗೆ ಮಹಲಿಂಗಿ (ಮೂಲಂಗಿ) ಮಠವೆಂತಲೂ ಈ ಐದು ಲಿಂಗಗಳಿಗೆ ಈ ಮಠಗಳೆಂದು ವಿಧಿಸಿ ಆದೇವ ಸ್ಥಾನಕ್ಕೆ ಸೇರಿದ ತಮ್ಮಡಿಗಳು, ಶಿಷ್ಯರೂ, ಬೇಡಕಂಪಣಗಳಿಗೆ ಆಯಾ ಮಠಾಧಿಪತಿ

* Mysore Gazetteer Vol. II Historical 1930 Pedigree of the Hoysala Dynasty. Facing Page.

ಗಳೀ ಲಿಂಗಧಾರಣೆ, ತೀರ್ಥ ಪ್ರಸಾದಗಳನ್ನು ಕೊಟ್ಟು ಅವರಿಂದ ಕಟ್ಟು ಕಾಣಿಕೆಗಳನ್ನು ತೆಗೆದು ಆಯಾ ದೇವಾಲಯದ ಎಲ್ಲ ಕಾರ್ಯಗಳನ್ನೂ ನಡಸತಕ್ಕದ್ದೆಂದು ನೇಮಿಸಿರುತ್ತೇವೆ ಎಂದು ಶಾಸನವಿದೆ. ಮುಂದುವರಿಸಿ "ಶ್ರೀ ಮಾಹದೇಶ್ವರ" ಸ್ವಾಮಿಯವರು ಕತ್ತಲಿ* ರಾಜ್ಯದಲ್ಲಿದ್ದು. ಕನ್ಯಾಳ ದೇಶಕ್ಕೆ ಬಂದು ಶ್ರವಣನಲ್ಲಿ ಸೆರೆ ಸಿಕ್ಕಿದುದನ್ನು ಕಂಡು ಆತನನ್ನು ಸಂಹರಿಸಿದುದೂ ಪ್ರಭುಲಿಂಗಾರಾಧ್ಯರಿಂದ ಲಿಂಗಧಾರಣೆಯನ್ನು ಮಾಡಿಸಿಕೊಂಡು ವಜ್ರಮಲೆಯಲ್ಲಿ ನೆಲಸಿದ ವಿಚಾರದೊಡನೆ ಮಿಕ್ಕ ಸಂಗತಿಗಳೂ ಇವೆ.

ಮೇಲಿನ ಪಂಚಮಠದ ಸ್ವಾಮಿಗಳು ಬೇಡಕಂಪಣಕ್ಕೆ ಲಿಂಗಧಾರಣೆಮಾಡಿ, ಬೇಡಕಂಪಣ ರಾಯಣ್ಣನಾಯ್ಕರಿಗೆ ಪ್ರೋಕಳಿ ಸೇವೆಗೆ ಕರ್ತನ ಮಾಡಿದರು. ಉಪ್ಪಲಿಗ ಶೆಟ್ಟಿಯ ದೃಢಭಕ್ತಿಗೆ ಮೆಚ್ಚಿ ಗುಡ್ಡನನ್ನಾಗಿ ಮಾಡಿ ಎಂಣೆ ಮಜ್ಜನದ ಸೇವೆಗೆ ಕರ್ತನನ್ನಾಗಿ ಮಾಡಿದ್ದಲ್ಲದೆ ಭಕ್ತರಿಂದ ವಿಸ್ತರಿಸಿದ ದೇವಾಲಯಕ್ಕೆ ಪೂಜಾಕರ್ತೃತ್ವದ ವಿಷಯದಲ್ಲಿ ಶ್ರೀ ಮಹದೇಶ್ವರರು ವ್ಯಾಜ್ಯಕ್ಕೆ ಬಂದ ತಂಮಡಿಗಳಲ್ಲಿ ಮೊದಲಾಳಿಯಾದವನನ್ನೆ ದೊಣ್ಣೆ ಸಾಲಿನ ಶಿವಾಗಮದ ಸೇವೆಗೆ ನಿಯಮಿಸಿದರೆಂದೂ ತಿಳಿದುಬರುತ್ತದೆ. ಪಟ್ಟಗಾರ ರಾಯಂಣ ನಾಯ್ಕನಿಗೆ* ಬಿಳಿಚತ್ರಿ, ಪಚ್ಚೆವಂಟಿ ತೋಡ ಬಳೆ ಶಾಲುನಾಮೆ ಸಹ ಕೊಟ್ಟು ಬೇಡಕಂಪಣಕ್ಕೆ ಕರ್ತನನ್ನಾಗಿಸಿದ್ದು ಆ ವಂಶಪಾರಂಪರ್ಯವಾಗಿ ಆ ಕರ್ತೃತ್ವವನ್ನು ನಡೆಸಿಕೊಂಡು ಬರತಕ್ಕದ್ದೆಂದು ನಿಯಮಿಸಿದೆ. ಪಟಗಾರ ರಾಯಣ್ಣ ನಾಯ್ಕರ ವಂಶದವರೂ ಪಂದೇಶ್ವರ ತಮ್ಮಡಿಗಳು ಮತ್ತು ಶಿಷ್ಯರು, ಹಿಂಡಿರಾಮನ ಗುಂಪು, ಬೇಳೆಕೂಟ, ದೊಣ್ಣೆ ಕೂಟ, ಮಿಂಡಗುಡ್ಲಿ ಪಾಲಿನವರು, ಹಿರಿಯ ಮಡಿವಾಳ ಶಿವನಂಕಾರೇಶ್ವರನ ಒಕ್ಕಲಿನವರು ಈ ಪಂಚೈದು ದೇವಸ್ಥಾನದ ಮೇಲು ವಿಚಾರ ಶ್ರೀ ವಾಣಿಜ್ಯ ಮಠಾಧಿಪತಿಗಳಿಗೆ ಬಿಟ್ಟು, ಮಾದೇಶ್ವರ ಬೆಟ್ಟದ ಉರಿಗದ್ದಿಗೆಯೆಂಬ ವಿರಕ್ತ ಕಟ್ಟೆಯಲಿ ಐದನೆ ಒಂದು ($\frac{1}{5}$)ಭಾಗ ಕಾಣಿಕೆ ಕೊಡುವದಲ್ಲದೆ ರಾಯನ ಹಳ್ಳಿ, ಬಸವನಪುರವೆಂಬ ಗ್ರಾಮಗಳನ್ನು ಬಿಟ್ಟು, ಆ ಗ್ರಾಮದ ಕಾಡಾರಂಭ, ನೀರಾರಂಭ, ಗೊಪ್ಪಟ, ಪೊಂಮೆ, ಸುಂಕ, ದೇವಾದಾಯ, ಬ್ರಹ್ಮಾದಾಯ, ನಟ್ಟ, ಕಲ್ಲು, ಬಿಟ್ಟಬಸವ ಮೊದಲಾದುವುಗಳನ್ನು ಈ ಮಠಕ್ಕೆ ಅಮೃತಪಡಿದೇವಾರಾಧನೆ ಕಾರ್ಯಗಳಿಗಾಗಿ ಕೊಡುವುದಲ್ಲದೆ ನಿಮ್ಮ ತದ್ವಂಶ ಪರಂಪರೆಯಾಗಿ ಆಚಂದ್ರಾರ್ಕ ಸ್ಥಾಯಿಯಾಗಿ ನಡೆಸಿಕೊಂಡು ಬರತಕ್ಕದ್ದೆಂದು ಬರಸಿಕೊಟ್ಟ ರಾಜ ಶಾಸನದ ಅಂತ್ಯದಲ್ಲಿರುವ ಅಂಕಿತ. ॐ "ಶ್ರೀ ಅಲ್ಲಾಳನಾಥ"

[‡ ತಮಿಳು ದೇಶ]

*ಜಾತಿ ಕೆಲಸಗಳನ್ನು ಬಗೆಹರಿಸುತ್ತ, ಪ್ರೋಕಳಿ ಸೇವೆಯನ್ನು ಇಂದಿಗೂ ಸಲ್ಲಿಸುತ್ತ ಬರಗೂರಿನಲ್ಲಿ ಪಟ್ಟಗಾರ ರಾಯಪ್ಪನ ವಂಶಸ್ಥರಿದ್ದಾರೆಂದು ಪರಿಶೀಲಿಸಿದ್ದಾರೆ.

ಶಾಸನಗಳ ಪೂರ್ಣಪಾಠ

ಶ್ರೀ ನಮಸ್ತುಂಗ ಶಿರಚ್ಚುಂಬಿ ಚಂದ್ರಚಾಮರಚಾರವೇ ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥
॥ ಶ್ರೀಮದ್ಗೋಸಲಾರ್ಯಯತಿ ಪ್ರಸೀದ ॥
ಶ್ರೀಮತ್ಸಚ್ಚಿದಾನಂದ ನಿತ್ಯ ಸಂಪೂರ್ಣ ಅವಿರಳ
ಜ್ಞಾನಾನಂದ ಪರಂಜ್ಯೋತಿಃಸ್ವರೂಪ ಜಗದ್ವಿಸ್ತಾರ
ಮೂಲ ಸ್ತಂಭಾಯಮಾನ ಚರಾಚರ ಜಗಜ್ಜಾಲ
ಜನ್ಮಕಾರಣೀಭೂತ ಶೃತಿ ಸ್ಮೃತಿ ಪುರಾಣಾಗಮೇತಿ-
ಹಾಸ ಷಡಸ್ಥಳ ಪರಬ್ರಹ್ಮೇಷ್ಟಲಿಂಗಾರಾಧಕ ತತ್ತ್ವ-
ಮಸ್ಯಾದಿ ಮಹಾವಾಕ್ಯ ವಿಚಾರಧುರೀಣ ಶ್ರೀಮದ್
ವಾಣಿಜ್ಯಪುರಿ ಮಠಾಧಿಷ್ಠಿತ ಅನಾದಿಗಣ
ಮರುಳಾರ್ಯವಂಶ ಪರಂಪರಾನುಗತ ಪರಿವಿಡಿದ್ರಾಜ-
ಗುರು ಅಪ್ಪಣಾರ್ಯನಿಜಗರ್ಭಸಂಜನಿತ ವೇದ
ವೇದಾಂತೋಪನಿಷತ್ಸಾರೋದಿತಮಹ ನಿಜಪಟ್ಟ
ಮೂರ್ತಿಯಾಗಿ ಕಲ್ಲುಗೂಳಿಯಂ ನುಡಿಸಿ
ಪಂದವಡೆಯನೆಂಬುವನ ದಾಸೋಹದಲ್ಲವಗೆ
ಘೃತ ಕಡಮೆಯಾಗೆ ಕುಂಭೋದಕವ ತರಿಸಿ
ಉಣಬಡಿಸಿ ಕುಲಾಂತರಮಿಗೆ ಕೂಟಪಾಲುಗಳಂ
ವಿಂಗಡಿಸಿ ಮೂನೂರು ಮೂವತ್ತೈದು ಪಂಗಡ
ಗಳನಾಗುಮಾಡಿ ತತ್ತವವರಿಗೆ ಆರಾಧಕ
ರಾಗಿಯೆ ಕೋವಿನಕೆಱೆ ಸಾಸಲರಾಯ
ನೆಂಬುವಗೆ ಲಿಂಗಧಾರಣೆಯಂ ಮಾಡಿ ಪಟಗಾರ
ರಾಯಂಣ ನಾಯ್ಕನಿಗೆ ಮಲೆನಾಡಿಗೆ ಪಟ್ಟವಂ
ಕಟ್ಟಿ ಕಳವಂದಕೆ ವಂಬತ್ತುತ್ರಯ ಪಣ
ದಂತ್ತೆ ಯಲ್ಲರೊಳು ಕಟ್ಟು ಕಾಣಿಕೆಗಳಂನು
ಪಡೆದು ಪದಿಪತ್ತಿ ದೇಶಕ್ಕೆ ಪ್ರಯಾಣಮಾಡಿ
ಸರ್ಪದಷ್ಟನಾದ ರಾಜನ ಮಗನಂ ಬದುಕಿಸಿ
ವಾದದಲ್ಲಿ ಗೆಲಿದು ನಾಮುವಂನು ತೆಗೆಸಿ
ಭಸ್ಮವಂ ಇಡಿಸಿ ಲಿಂಗಧಾರಣೆಯಂ ಮಾಡಿ
ತುಳವ ದೇಶಕೆ ಬಂದು ತುಲಕಾಣ್ಯರಿಗೆ ಮಹಿಮೆ
ಯಂ ತೋರಿ ಶತಪವಾಡ ಮಹನೀಯರೆಂದು

ಬಿರುದಂ ಪಡೆದ ಶ್ರೀಮದ್ಹೊಸಲಾಧ್ಯವರ್ಯ-
ಸ್ವಾಮಿ ಸನ್ನಿಧಾನ ಸಂಕಾಶೇ ||
ಸ್ವಸ್ತಿ ಸಮಸ್ತ ಭುವನಾಶ್ರಯೆ

2) ಶ್ರೀಮದ್ವಲ್ಲಭ ಶ್ರೀ ಪ್ರತಾಪ ಚಕ್ರವರ್ತಿ
ಹೊಯ್ಸಳ ವೀರಬಲ್ಲಾಳದೇವರು ಶ್ರೀ
ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂ
ಗಳು ೧೨೪೬ [೧೨೬೬] ನೆಯ ತಾರಣ ಸಂಬತ್ತರದ
ಮಾಗ ಸುದ್ದ ತದಿಗೆಯಲು ದಕ್ಷಿಣದೇಶ
ವಿಜಯ ಯಾತ್ರೆಯಲು ಬರೆಸಿಕೊಟ್ಟ ತಾಂಬ್ರ
ಶಾಸನ ಕ್ರಮವೆಂತೆಂದಡೆ ||.

೧. ಹಿರಿ ಮಡಿವಾಳದ ಶಿವನಂಕಾರೇಶ್ವರ
ರಿಗೆ ಚಂದ್ರಣಿಮಠದವರು.

೨. ಮಾದೇಶ್ವರರಿಗೆ ಕಂಚಿತೆಲುಗಾಣ್ಯದ
ಮಠ

೩. ಪಂದೇಶ್ವರರಿಗೆ ಶ್ರೀ ವಾಣಿಜ್ಯಪುರಿ ಮಠ

೪. ಸಿದ್ಧೇಶ್ವರರಿಗೆ ಕೆಂಬಲ್ಲೂ ಮಠ

೫. ಬ್ರಹ್ಮೇಶ್ವರರಿಗೆ ಮಹಲಿಂಗಿಮಠ
ವೆಂತಲೂ ಈ ಪಂಚೈದು ಲಿಂಗಗಳಿಗೆ
ಈ ಮಠಗಳೆಂದು ವಿಧಿಸಿ ತತ್ತದೇವ
ಸ್ಥಾನಕ್ಕೆ ಸೇರಿದ ತಮ್ಮಡಿಗಳು ಶಿಷ್ಯರು
ಬೇಡಗಂಪಣಗಳಿಗೆ ತತ್ತಮಠಾಧಿಪತಿಗಳೆ
ಲಿಂಗಧಾರಣ ತೀರ್ಥಪ್ರಸಾದಗಳಂ ಕೊಟ್ಟು
ಅವರಿಂ ಕಟ್ಟು ಕಾಣಿಕೆಗಳಂ ತೆಗದು ಆ
ದೇವಾಲಯಗಳಲಿ ನಡೆಯುವ ಯಲ್ಲಾ ಕಾರ್ಯಗಳು
ನಡಸತಕ್ಕದ್ದೆಂದು ನೇಮಿಸಿರುತ್ತೇವೆ. ಶ್ರೀ
ಮಹದೇಶ್ವರಸ್ವಾಮಿಯು ಕತ್ತಲಿರಾಜ್ಯದೊಳು
ಇದ್ದು ಕನ್ಯಾಳದೇಶಕ್ಕೆ ಬಂದು ಸಮಸ್ತದೇವತೆ
ಗಳು ಶ್ರವಣನಲಿ ಸೆರೆಸಿಕ್ಕಿರುವದಂ ನೋಡಿ
ಅವನಂ ಸಂಹಾರಮಾಡಿ ಪ್ರಭುಲಿಂಗಾರಾಧ್ಯ
ರಿಂದ ಲಿಂಗಧಾರಣೆಯಂ ಮಾಡಿಸಿಕೊಂಡು

ವಜ್ರಮಲೆಯಲಿ ನೆಲೆಗೊಂಡು ಆಲಂಬೋಡಿ
ಜುಂಚೆಗಲುಡನಿಂದ ವಂದು ಅಂಕಣದೇವಾ
ಲಯವಂ ಕಟ್ಟಿಸಿಕೊಂಡು ಭೂಸುರನಿಂ ಬೇಡರ
ಕಂನಯನಿಂದ ಪೂಜಿಸಿಕೊಂಡು ಬೇಡರ ಕಂನಯ
ನ ದೃಢಕೆ ಮೆಚ್ಚಿ ಮೋಕ್ಷವಂಕೊಟ್ಟು
ಕುಂನಪ ನಾಗರು ಸೀಮೆ ಇದ್ದ ಬೇಡಗಂಪಣ
ರಾಯಂಣನಾಯ್ಕನ ಮನೆಯಲಿ ಕೊಂಗ
ದೊರೆಯ ಫ್ರೇಂಣ ಕೇಳಿದ್ದರಿಂದ ಅವರು
ತಲೆ ತಪ್ಪಿಸಿಕೊಂಡು ಫೋಗುತಾ ಬರಲು
ದಾರಿಯ ತುಂಗಭದ್ರಾನದಿಯು ಅಡಲಾಗಿದುದ
ರಿಂ ದಾಟಲಸಾಧ್ಯಮಾಗಿ ಪಾರ್ವತಿ ಅಂಶಳಾದ
ಭದ್ರಕಾಳಿ ಅಮ್ಮನವರಂ ಭಜಿಸಲು ಆ ದೇವಿಯು
ಪ್ರತ್ಯಕ್ಷಳಾಗಿ ಇವರ ಮನೋಭೀಷ್ಟವಂ ನೆರ
ವೇರ್ಸಿ ನದಿಯಿಂ ದಾರಿ ಬಿಡಿಸಿ ಹೊರಗೆ ಬಂದು
ಇತಪ್ಪರ ಮಕ್ಕಳಾದರೆ ಭದ್ರಿ ಭದ್ರಯಂಬ
ಹೆಸರಂ ಕೊಡುತ್ತೇವೆಂದು ಹೇಳಿ ನೇರಳೆ
ಕೆರಿಯಲಿ ಸ್ಥಳವಾಗಿದ್ದರು. ಮೇಲಿನ
ಪಂಚಮಠದ ಸ್ವಾಮಿಗಳು ಬಂದು ಬೇಡ
ಗಂಪಣಕ್ಕೆ ಲಿಂಗಧಾರಣೆಯಂ ಮಾಡಿ
ರಾಯಪ್ಪನಾಯ್ಕರಿಂಗೆ ವೋಕಳಿ ಸೇವೆಗೆ
ಕರ್ತನ ಮಾಡಿ ಶ್ರೀಮಹದೇವನು ಉಪ್ಪಲಿಗ
ಶೆಟ್ಟಿಯ ದೃಢಕ್ಕೆ ಮೆಚ್ಚಿ ಗುಡ್ಡನ ಮಾಡಿ
ಯಂಣೆ ಮಜ್ಜನದ ಸೇವೆಗೆ ಕರ್ತನ ಮಾಡಿ
ಭಕ್ತರುಗಳಿಂ ದೇವಾಲ್ಯವಂ ವಿಸ್ತರಿಸಿ ಇದಕೆ
ಪೂಜಾಕರ್ತರು ಆಲಸಾಲಂಮನ ವಂಶಸ್ಥರಾದ
ಕೆಂಪಮಾದ ತಂಮಡಿ, ಕಾಳಮಾದ ತಂಮಡಿ
ಸಂತತಿಯವರಿಂದ ಕಾಡವೀರ ತಂಮಡಿ ಮಕ್ಕಳು
ಪೂಜಾವಿರುದ್ಧವಂ ಮಾಡಿಕೊಂಡು ವ್ಯಾಜ್ಯಕ್ಕೆ ಬರಲು
ಇದಕೆ ಮೊದಲಾಳಿಯಾದವನೆ ಮೊಂಣೆ ಪಾಲಿನವನ
ಶಿವಾಗಮದ ಸೇವೆಗೆ ನೇಮಿಸಿ ಹುಡುಗರು ಪೂಜಾ
ಕರ್ತರೆಂದು ಇವರು ಉತ್ತ ಭೂಮಿಗೆ ತೆರಿಗೆ
ಇಲ್ಲವೆಂದು ಮಾಡಿ ಪಟ್ಟಗಾರ ರಾಯಂಣನಾಯ್ಕ

ನಿಗೆ ಬಿಳಿಚತ್ರಿ ಪಚ್ಚೆವಂಟಿತೋಡ ಬಳೆ
ಶಾಲುನಾಮೆ ಸಹ ಕೊಟ್ಟು ಕಂಪಣಕ್ಕೆ 'ಕರ್ತ
ನೆಂದು ನಿಂನ ತದ್ವಂಶ ಪರಂಪರೆಯಾಗಿ ನಡಸಿ
ಕೊಂಡು ಬರತಕ್ಕದ್ದೆಂದು ನಿಯಮಿಸಿ ಪಟಗಾರ
ರಾಯಂಣ ನಾಯ್ಕರ ವಂಶದವರು ಪಂದೇಶ್ವರ
ತಂಮಡಿಗಳು ಮತ್ತು ಶಿಷ್ಯರುಗಳು ಹಿಂಡಿರಾಮನ
ಗುಂಪು ಬೇಳಿಕೂಟ ದೊಣ್ಣೆಕೂಟ ಗುಪರಿನ
ಕೂಟ ಮಿಂಡಗುಡ್ಡಿ ಪಾಲಿನವರು ಕೆರಣೆಪಾಲಿ
ನವರು ಹಿರಿಮಡಿವಾಳ ಶಿವನಂಕಾರೇಶ್ವರನ
ವಕ್ಕಲಿನವರು ಈ ಪಂಚೈದು ದೇವಸ್ಥಾನದ
ಮೇಲುವಿಚಾರ ಅಧಿಕಾರವನು ಶ್ರೀವಾಣಿಜ್ಯ
ಮಠಾಧಿಪತಿಗಳಿಗೆ ಬಿಟ್ಟು ಮಾದೇಶ್ವರಬೆಟ್ಟದ
ಉರಿಗದ್ದಿಗೆಯೆಂಬ ವಿರಕ್ತಕಟ್ಟೆಯಲಿ
ಆಇದನೆವಂದು ಬಾಗ ಕಾಣಿಕೆ ಕೊಡುವುದಲ್ಲದೆ
ರಾಯನ ಹಳ್ಳಿ ಬಸವನಪುರಯೆಂಬ ಗ್ರಾಮಗಳಂ
ಬಿಟ್ಟು ಆ ಗ್ರಾಮದ ಕಾಡಾರಂಭ ನೀರಾರಂಭ
ಗೊಪ್ಪಟ ಪೊಂಮೆ ಸುಂಕ ದೇವಾದಾಯ, ಬ್ರಹ್ಮಾ
ದಾಯ ನಟ್ಟಕಲ್ಲು ಬಿಟ್ಟಬಸವ ಮೊದಲಾದುವು
ಗಳನು ಈ ಮಠಕೆ ಅಮೃತಪಡಿದೇವಾರಾಧನೆ
ಕಾರ್ಯಗಳಿಗಾಗಿ ಕೊಡುವದಲದೆ ನಿಂಮ ತದ್ವಂಶ
ಪರಂಪರೆಯಾಗಿ ಆಚಂದ್ರಾರ್ಕಸ್ತಾಇ ಆಗಿ ನಡೆಸಿ
ಕೊಂಡು ಬರತಕ್ಕದೆಂದು ಬರೆಸಿಕೊಟ್ಟ ತಾಂಬ್ರ
ಶಾಸನ. ಇದಕೆ ತಪ್ಪಿದವರು ಗಂಗೆಯ
ತಡಿಯಲಿ ಸಹಸ್ರ ಕವಿಲೆಯಂ ಕೊಂದ ಪಾಪಕ್ಕೆ
ಹೋಹರು.

ಸ್ವದತ್ತಾಂ ಪರದತ್ತಾಂವಾ ಯೋಹರೇತ್ ವಸುಂಧರಾಂ
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇಕ್ರಿಮಿಃ ||
|| ಮಂಗಳಮಹಾಶ್ರೀ ||

ಶ್ರೀ ಅಲ್ಲಾಳನಾಥ

ಓಂ

ಗುಮ್ಮನಾಯಕನ ಕೋಟೆ-ಒಂದು ಪರಿಚಯ

ಡಿ. ವಿ. ಪರಶಿವಮೂರ್ತಿ

ಕರ್ನಾಟಕದ ಅನೇಕ ಗಿರಿದುರ್ಗಗಳು ಗತಕಾಲದ ಇತಿಹಾಸಕ್ಕೆ ಮೂಕ ಸಾಕ್ಷಿಗಳಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅಳಿದುಳಿದ ಕೋಟೆ-ಕೊತ್ತಲ, ಅರಮನೆಯ ಅವಶೇಷಗಳು, ಕಟ್ಟಡಗಳ ತಳಪಾಯಗಳು ಮುಂತಾದವು ಇಂದಿಗೂ ಅನೇಕ ನಿಗೂಢ ವಿಷಯಗಳನ್ನು, ದಂತ ಕಥೆಗಳನ್ನು, ಸಾಹಸಗಾಥೆಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡು, ಒಂದು ರೀತಿಯ 'ಗುಮ್ಮ' ಗಳಾಗಿವೆ. ಇಂತಹ 'ಗುಮ್ಮ'ಗಳ ತವರೂರು 'ಗುಮ್ಮನಾಯಕನಪಾಳ್ಯ'.

ಕೋಲಾರ ಜಿಲ್ಲೆಯ ಬಾಗೇಪಲ್ಲಿಯಿಂದ ಚೇಳೂರಿಗೆ ಹೋಗುವ ದಾರಿಯಲ್ಲಿ ಪಾತಪಾಳ್ಯ ಎಂಬ ಒಂದು ಗ್ರಾಮವಿದೆ. ಇದು ಬಾಗೇಪಲ್ಲಿಯಿಂದ 15 ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಎಡಭಾಗಕ್ಕೆ ಇರುವ ರಸ್ತೆಯಲ್ಲಿ 6 ಕಿ. ಮೀ. ಚಲಿಸಿದರೆ ಗುಮ್ಮನಾಯಕನ ಪಾಳ್ಯ ಸಿಗುತ್ತದೆ. ಇದು ಸುಮಾರು 20 ಮನೆಗಳಿರುವ ಒಂದು ಕುಗ್ರಾಮ. ಸುತ್ತಲೂ ಬೆಟ್ಟ ಸಾಲುಗಳಿಂದ ಆವೃತವಾದ ಸುಂದರವಾದ ಸ್ಥಳ. ಈ ಸ್ಥಳ ಹಿಂದೆ ಸುಮಾರು 500 ವರ್ಷಗಳಷ್ಟು ಕಾಲ ವೈಭವವಾಗಿ ಮೆರೆದ ಸ್ಥಳ. ಊರಿನ ಪಕ್ಕದಲ್ಲಿರುವ ಬೆಟ್ಟದಲ್ಲಿ ಗುಮ್ಮನಾಯಕನಹಳ್ಳಿ ಪಾಳೇಗಾರರು ಕಟ್ಟಿಸಿದ ಕೋಟೆಯಿದೆ. ಈ ಕೋಟೆಗೆ ಊರಿನ ಬಳಿಯೇ ಪ್ರವೇಶದ್ವಾರವಿದೆ. ಇಲ್ಲಿನ ದ್ವಾರವನ್ನು ನೋಡಿದರೆ, ನಮಗೆ ಒಳಗೆ ಹೊಗಲೂ ಭಯವಾಗುತ್ತದೆ. ಪ್ರವೇಶದ್ವಾರದ ಎತ್ತರಕ್ಕೂ ಸೆಣಸಿ ನಿಂತಿರುವ ಮುಳ್ಳುಗಿಡಗಳ ಮಧ್ಯೆ ಒಬ್ಬರು ಹೋಗಬಹುದಾದ ದಾರಿಯಿದೆ. ಪೂರ್ವಕ್ಕೆ ಮುಖಮಾಡಿರುವ ಈ ದ್ವಾರದ ರಚನೆ ಆಕರ್ಷಕವಾಗಿದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಪೂರ್ವದಲ್ಲೇ ಈ ಪಾಳೆಯಪಟ್ಟನ ಅಸ್ತಿತ್ವವನ್ನು ವಿದ್ವಾಂಸರು ಗುರುತಿಸಿದ್ದಾರೆ[1]. ಕ್ರಿ. ಶ. 1243ರಲ್ಲಿ ನರಸಿಂಹನಾಯಕ ಖಾದ್ರಿಪತಿನಾಯಕ ಎಂಬುವರು ಕಡಪ ಜಿಲ್ಲೆಯಿಂದ ಶಿಡ್ಲಘಟ್ಟದ ಬಳಿಯ ಯಾದವ ಕೋಟೆ ಎಂಬಲ್ಲಿಗೆ ಬಂದು ನೆಲೆಸಿದರು. ಕಾಲ ಕ್ರಮೇಣ ಶ್ರೀಮಂತರಾದರು. ಇವರಲ್ಲಿ

1. ಈ ಪಾಳೇಗಾರರ ಬಗೆಗಿನ ಬರವಣಿಗೆಯೇ ಬಹಳ ಕಡಿಮೆ. ಮೊದಲಿಗೆ ಹಾಗೂ ಅಧಿಕೃತವಾಗಿ ಎಂ. ಎಸ್. ಪುಟ್ಟಣ್ಣನವರ "ಗುಮ್ಮನಾಯಕನ ಪಾಳೆಯಗಾರರು" ಎಂಬ ಕೃತಿ ಪ್ರಕಟವಾಯಿತು. ಅನಂತರ ಬಂದ ಎಲ್ಲ ಬರಹಗಳೂ ಇದೇ ಕೃತಿಯನ್ನು ಆಧರಿಸಿದ್ದು, ಪ್ರತ್ಯಕ್ಷವಾಗಿ ಯಾರೂ ಈ ಪಾಳೇಗಾರರ ಕೋಟೆಯನ್ನು ಗಮನಿಸಿಲ್ಲವೆಂಬ ಕೊರಗಿತ್ತು. ಈ ಕೊರಗನ್ನು ನೀಗಿಸುವ ಒಂದು ಸಣ್ಣ ಪ್ರಯತ್ನ ಈ ಲೇಖನ. ಈ ಹಿನ್ನೆಲೆಯಲ್ಲಿ ಕುತೂಹಲದಿಂದ ಗುಮ್ಮನಾಯಕನ ಪಾಳ್ಯದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಆ ಸಂದರ್ಭದಲ್ಲಿ ಗಮನಕ್ಕೆ ಬಂದ ಕೋಟೆ ಹಾಗೂ ಅಳಿದುಳಿದ ಅವಶೇಷಗಳ ಬಗೆಗೆ ಹೊಸ ಬೆಳಕನ್ನು ಚೆಲ್ಲಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಕಾರ್ಯದಲ್ಲಿ ಸಹಕರಿಸಿದ ಬಾಲ್ಯ ಮಿತ್ರ ಡಿ. ಎಸ್. ನಾಗರಾಜು ಅವರಿಗೆ ಕೃತಜ್ಞತೆಗಳು.

ಖಾದ್ರಿಪತಿನಾಯಕ ಎಂಬುವನಿಗೆ ಸ್ವತಂತ್ರವಾಗಿ ರಾಜ್ಯಕಟ್ಟುವ ಆಸೆಯಾಯಿತು. ಅದರಂತೆ ಬಾಗೇಪಲ್ಲಿ ತಾ|| ಪಾತಪಾಳ್ಯ ಎಂಬ ಗ್ರಾಮಕ್ಕೆಬಂದು ನೆಲಸಿದನು. ಅಲ್ಲಿದ್ದ ದುಷ್ಟಮೃಗಗಳನ್ನು ಸಂಹಾರಮಾಡಿ ಜನಪ್ರಿಯತೆಗಳಿಸಿದನು. ಈ ಗ್ರಾಮದ ಗುಮ್ಮರೆಡ್ಡಿ ಮತ್ತು ಲಕ್ಕರೆಡ್ಡಿ ಎಂಬ ಸಹೋದರರು ಇವನಿಗೆ ಬೇಕಾದ ಸಹಾಯ ನೀಡಿದರು. ಖಾದ್ರಿನಾಯಕ ಮೃತನಾಗುವಾಗ ತನ್ನ ಮಗ ಚಿನ್ನಮನಾಯಕನಿಗೆ ರೆಡ್ಡಿ ಸಹೋದರರನ್ನು ಮರೆಯಬೇಡೆಂದು ವಿನಂತಿಸಿಕೊಂಡನು. ಚಿನ್ನಮನಾಯಕನ ಕಾಲದಲ್ಲಿ ರಾಜ್ಯವು ವಿಸ್ತೀರ್ಣದಲ್ಲಿ ಇಮ್ಮಡಿಯಾಯಿತು. ರೆಡ್ಡಿ ಸಹೋದರರ ನೆನಪಿಗಾಗಿ, ಚಿನ್ನಮನಾಯಕನು ಹಲವಾರು ಕಾರ್ಯಗಳನ್ನು ಕೈಗೊಂಡನು. ಈಗಿನ ದುರ್ಗವನ್ನು ಕಟ್ಟಿಸಿದ್ದು ಅವನೇ. ಇದಕ್ಕೆ 'ಕಲ್ಯಾಣದುರ್ಗ' ಎಂದು ಹೆಸರಿಟ್ಟನು. ಅನಂತರ ದುರ್ಗದಬಳಿ ಒಂದು ಊರನ್ನು ಸ್ಥಾಪಿಸಿದನು. ಇದಕ್ಕೆ 'ಗುಮ್ಮನಾಯಕನ ಪಾಳ್ಯ' ಎಂಬ ಹೆಸರಿಟ್ಟನು. ಇವನು ಕೈಗೊಂಡ ಪ್ರಜಾಕ್ಷೇಮದ ಕೆಲಸ-ಕಾರ್ಯಗಳು ಬಹಳ ಹೆಸರು ಪಡೆದಿವೆ. ಅನೇಕ ಕೆರೆಗಳನ್ನು, ಆಹಾರ ಸಂಗ್ರಹಾಲಯಗಳನ್ನು ಕಟ್ಟಿಸಿದನು. ವಾಸ್ತುಶಿಲ್ಪಿಗಳಿಗೆ, ಬಡಗಿಗಳಿಗೆ, ಕಮ್ಮಾರರಿಗೆ ಮುಂತಾದ ಕುಶಲಕರ್ಮಿಗಳಿಗೆ ತನ್ನ ರಾಜ್ಯದಲ್ಲಿ ಆಶ್ರಯನೀಡಿ ಪ್ರೋತ್ಸಾಹಿಸಿದನು. ಕ್ರಿ.ಶ. 1296ರಲ್ಲಿ ಇವನ ಮಗ ಗುಮ್ಮನಾಯಕನು ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ಆನೆಗೊಂದಿ ಸಂಸ್ಥಾನದ ಮಂತ್ರಿ ತಿರುಮಲರಾಯನು ದಂಡೆತ್ತಿಬಂದು, ವಾರ್ಷಿಕ ಪೊಗದಿಯನ್ನು ಗೊತ್ತುಮಾಡಿಕೊಂಡನು. ಗುಮ್ಮನಾಯಕನ ನಂತರ ಅನುಕ್ರಮವಾಗಿ ಲಕ್ಕಪ್ಪನಾಯಕ, ವಸಂತನಾಯಕ, ದೊಡ್ಡಕದರಪ್ಪನಾಯಕ, ಮುಂತಾದವರು ಈ ರಾಜ್ಯವನ್ನು ಆಳಿದರು. ಈ ಪಾಳೆಯಪಟ್ಟು 560 ವರ್ಷಗಳಷ್ಟುಕಾಲ ಅಧಿಕಾರದಲ್ಲಿತ್ತು. ಕೊನೆಗಾಲದಲ್ಲಿ ಈ ರಾಜ್ಯವು ಮಹಮ್ಮದೀಯರಿಗೆ, ಇವರಿಂದ ಮರಾಠರಿಗೆ, ಅನಂತರ ಮೈಸೂರಿನ ಹೈದರಾಲಿಯ ಅಧೀನಕ್ಕೆ ಒಳಪಟ್ಟಿತು. ಹೈದರಾಲಿಯ ನಿಧನಾನಂತರ ಟಿಪ್ಪುಸುಲ್ತಾನನು ಈ ಪಾಳೆಯಪಟ್ಟನ್ನು ಪೂರ್ತಿಯಾಗಿ ವಶಪಡಿಸಿಕೊಂಡನು. ಬ್ರಿಟಿಷರಿಗೆ ಸಹಾಯಮಾಡುವ ಮೂಲಕ ಮತ್ತೊಮ್ಮೆ ಈ ಪಾಳೆಯಪಟ್ಟನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ನರಸಿಂಹನಾಯಕನು (ಕ್ರಿ. ಶ. 1765–1802) ಪ್ರಯತ್ನ ಪಟ್ಟನು. ಆದರೆ ಟಿಪ್ಪುವಿನ ಮರಣಾನಂತರ, ಮೈಸೂರು ಸಾಮ್ರಾಜ್ಯವು ಬ್ರಿಟಿಷರಿಂದ ಒಡೆಯರಿಗೆ ಹಸ್ತಾಂತರವಾಯಿತು. ಆಗ ಗುಮ್ಮನಾಯಕನ ಪಾಳ್ಯವೂ ಸಹ ಒಡೆಯರವರಿಗೆ ಸೇರಿತು. ದಿವಾನ್ ಪೂರ್ಣಯ್ಯನವರು ಬ್ರಿಟಿಷರ ಮಾತನ್ನು ಕಡೆಗಣಿಸಿ ನರಸಿಂಹನಾಯಕನಿಗೆ ರಾಜ್ಯವು ಮರಳದಂತೆ ಕಪಟನಾಟಕವನ್ನಾಡಿದರು*. ರಾಜ್ಯವು

---

* ಬ್ರಿಟಿಷರೇ ಕೊಡಲಿ ಎಂದು ಒಡೆಯರೂ ಅವರ ಬಳಿ ಇರುವುದನ್ನು ಅವರೇ ಕೊಡಲಿ ಎಂದು ಬ್ರಿಟಿಷರೂ ಇಬ್ಬರೂ ಒಬ್ಬರನ್ನೊಬ್ಬರು ತೋರಿಸುತ್ತಾ ಕಾಲ ನೂಕಿದರು. (ಕರ್ನಾಟಕ ಇತಿಹಾಸ ದರ್ಶನ : ಎಂ. ವಿ. ಕೃಷ್ಣರಾವ್, ಪುಟ : 494).

ದೊರೆಯುವ ನರಸಿಂಹನಾಯಕನು ಊರನ್ನು ತ್ಯಜಿಸಿದನು. ಇದೇ ಕೊರಗಿನಲ್ಲಿ ಪಡುಗ್ರಾಮ ಎಂಬಲ್ಲಿ ಮೃತನಾದನು. ಹೀಗೆ ವೈಭವವಾಗಿ ಮೆರೆದ ಗುಮ್ಮನಾಯಕನ ಪಾಳ್ಯವು ದುರಂತದಲ್ಲಿ ಕೊನೆಗೊಂಡಿತು.

ಇಂದು ಹಾಳುಸುರಿಯುತ್ತಿರುವ ಈ ದುರ್ಗದಲ್ಲಿ ಹೆಸರಿಗೆ ಮಾತ್ರ ಇರುವ ಹವಾ ಮಹಡಿ, ರಾಣಿಮಹಲ್, ಆಯುರ್ವೇದ ಆಸ್ಪತ್ರೆ, ಅನೇಕ ಕಟ್ಟಡಗಳ ತಳಪಾಯಗಳು, ಎಲ್ಲೆಲ್ಲೂ ಚೆಲ್ಲಿಬಿದ್ದಿರುವ ಸೈಜುಗಲ್ಲುಗಳು ನಮ್ಮನ್ನು ಮೂಕರನ್ನಾಗಿಸುತ್ತವೆ- ಮಹಾ ದ್ವಾರದಿಂದ ಬಲಗಡೆ ತಿರುಗಿದರೆ ವಿಶಾಲವಾದ ಆವರಣವೊಂದು ಸಿಗುತ್ತದೆ. ಇಲ್ಲಿ ಆಂಜನೇಯ ಮತ್ತು ಗಣೇಶನ ಎರಡು ಗುಡಿಗಳಿವೆ. ಎರಡೂ ಉತ್ತರಕ್ಕೆ ಮುಖ ಮಾಡಿವೆ. ಇದರ ಬಳಿಯೆ ಮತ್ತೊಂದು ಪ್ರವೇಶದ್ವಾರವಿದೆ. ಮುಖ್ಯದ್ವಾರದ ಅಕ್ಕಪಕ್ಕ ಎರಡು ಸಣ್ಣ ಸಣ್ಣ ದ್ವಾರಗಳಿವೆ. ರಕ್ಷಣೆಯ ದೃಷ್ಟಿಯಿಂದ ಈ ರೀತಿಯ ರಚನೆ ರೂಢಿಯಲ್ಲಿತ್ತು. ಇಲ್ಲಿಂದ ಮುಂದೆ ವಿಶಾಲವಾದ ಬಯಲು ಸಿಗುತ್ತದೆ. ಈ ಜಾಗದಲ್ಲಿಯೇ ನಗರವಿದ್ದದ್ದು. ಇಲ್ಲಿನ ಕಾಲುದಾರಿಯಲ್ಲಿ ಮುಂದುವರಿದರೆ ಮತ್ತೊಂದು ಪ್ರವೇಶದ್ವಾರ ಎದುರಾಗುತ್ತದೆ. ಇದರ ಎಡಗಡೆಗೆ 'ಹವಾಮಹಡಿ' ಇದೆ,. ರಚನೆಯ ದೃಷ್ಟಿಯಿಂದ ವಿಶಿಷ್ಟವಾದ ಕಟ್ಟಡವಿದು. ಮುಸ್ಲಿಂ ವಾಸ್ತುಶೈಲಿಯ ರೀತಿ ಯಲ್ಲಿದೆ. ಸುಮಾರು 20 ಅಡಿ ಎತ್ತರವಿರುವ ಈ ಕಟ್ಟಡಕ್ಕೆ, ಮೇಲೆ ಹತ್ತಲು ಗೋಡೆಯ ಒಳಗಡೆಯೇ ಸುರಂಗದಂತೆ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಎರಡು ಸಣ್ಣ ಕೊಠಡಿಗಳಿವೆ. ಇಡೀ ಕೊಠಡಿಗಳನ್ನು ಕಮಾನಾಕೃತಿಯ ಕಿಟಕಿಗಳಿಂದ ಅಲಂಕರಿಸಿದ್ದಾರೆ. ಚಾವಣಿಯ ಇಳಿಜಾರುಗಳನ್ನು ಅಲಂಕೃತವಾದ ಗಾರೆಯ ಕೆಲಸ ದಿಂದ ಕಟ್ಟಿದ್ದಾರೆ. ಇದು ಹಂಪೆಯ ಕಮಲಮಹಲ್‌ನ ನೆನಪನ್ನು ಮೂಡಿಸುತ್ತದೆ. ಇದರ ಪಕ್ಕವೆ ಮತ್ತೊಂದು ದೊಡ್ಡ ಕಟ್ಟಡವಿದೆ. ಇದು ಆಯುರ್ವೇದ ಆಸ್ಪತ್ರೆ ಯಾಗಿತ್ತು ಎಂದು ಸ್ಥಳೀಯರ ನಂಬಿಕೆ. ಕಟ್ಟಡದ ಮುಂದಿನ ಭಾಗ ಸಂಪೂರ್ಣವಾಗಿ ಬಿದ್ದುಹೋಗಿದೆ. ಈ ಕಟ್ಟಡದ ವಿಶೇಷವೇನೆಂದರೆ ಗೋಡೆಯ ಒಳಭಾಗವೆಲ್ಲಾ ಸಣ್ಣ ಸಣ್ಣ ಗೂಡುಗಳಿಂದ ತುಂಬಿರುವುದು. ಇವು ಒಂದು ಗೇಣಿಗೆ ಒಂದರಂತೆ ಇವೆ. ಈ ಗೂಡುಗಳಲ್ಲಿ ಗಿಡಮೂಲಿಕೆಗಳನ್ನು ಇಡುತ್ತಿದ್ದರೆಂದು ನಂಬಲಾಗಿದೆ. ಆದರೆ ಈ ಹೇಳಿಕೆ ಅನುಮಾನಪಡುವಂಥದ್ದು. ಗೋಡೆಯ ಭದ್ರತೆಗಾಗಿ ಒಳಭಾಗದಲ್ಲಿ ಎರಡು ಮೊಳಕ್ಕೆ ಒಂದರಂತೆ ಮರದ ತೊಲೆಗಳನ್ನು ನಿಲ್ಲಿಸಿದ್ದಾರೆ. ಇವುಗಳನ್ನು ತೆಗೆದು ಕೊಳ್ಳಲು ಸ್ಥಳೀಯರು ಗೋಡೆಯನ್ನು ಕೆಡವಿದ್ದಾರೆ. ಈ ಕಟ್ಟಡದ ಬಳಿಯೇ ದಕ್ಷಿಣಕ್ಕೆ ಮುಖಮಾಡಿರುವ ಈಶ್ವರ ದೇವಾಲಯವಿದೆ. ಈ ದೇವಾಲಯದ ಬಾಗಿಲವಾಡದಲ್ಲಿ ಗಜಲಕ್ಷ್ಮಿಯಿದೆ. ಅಲ್ಲದೆ ಜಯ–ವಿಜಯರೂ ಇದ್ದಾರೆ. ಗರ್ಭಗುಡಿಯಲ್ಲಿ ಮೂರ್ತಿ ಇಲ್ಲ. ದೇವರ ಪೀಠವು ಮಗುಚಿಬಿದ್ದಿದೆ. ಅದರಲ್ಲಿ 3 ಕಲಶಗಳು ಇರುವುದರಿಂದ ಇದನ್ನು ಈಶ್ವರ ದೇವಾಲಯವೆನ್ನಲು ಅನುಮಾನವಾಗುತ್ತದೆ. ನಿಧಿಯ ಆಸೆಯಿಂದ ದೇವಾಲಯವನ್ನೆಲ್ಲಾ ಅಗೆದು ಹಾಕಿದ್ದಾರೆ. ಈ ದೇವಾಲಯದ ಎದುರಿಗೆ ರಾಜ

ಪರಿವಾರದವರ ಅನುಕೂಲಕ್ಕೆ ನೀರಿನ ವ್ಯವಸ್ಥೆಯ ಜಾಗವಿದೆ. ಒಂದು ಕಲ್ಯಾಣಿ ಮತ್ತು ಎತ್ತರದಲ್ಲಿ ತೊಟ್ಟಿ ಇದೆ. ಇದರಿಂದ ಮುಂದಕ್ಕೆ ವಿಚಿತ್ರವಾದ ಒಂದು ಕುದುರೆ ಸಮಾಧಿಯಿದೆ. ಕಲ್ಲುಗಳಿಂದ ವೃತ್ತಾಕಾರವಾಗಿ 10 ಅಡಿ ಅಗಲ 15 ಅಡಿ ಎತ್ತರವಾಗಿ ಈ ಸಮಾಧಿ ಕಟ್ಟಲಾಗಿದೆ. ಇದರೊಳಗೆ ಈಗಲೂ ಮೂಳೆಗಳಿವೆಯೆಂದು ನಂಬುತ್ತಾರೆ. ಇಲ್ಲಿಂದ ಸ್ವಲ್ಪ ದೂರದಲ್ಲೇ ಒಲಸಿಮಾರಮ್ಮ ದೇವಾಲಯವಿದೆ. ಕುದುರೆ ಸಮಾಧಿಯ ಬಳಿಯೇ ಮತ್ತೊಂದು ಪ್ರವೇಶದ್ವಾರವಿದೆ. ಇದಕ್ಕೆ ಅಂಟಿದಂತೆ ದೊಡ್ಡದಾದ ಮಂಟಪವಿದೆ. ಒಂದು ತೊಲೆಯಲ್ಲಿ ಗಜಲಕ್ಷ್ಮಿಯಿದ್ದು, ಅದರ ಎರಡೂ ಪಕ್ಕ ಶಾಸನವಿದ್ದು ಪ್ರಕಟವಾಗಿದೆ[2]. ಪಕ್ಕದಲ್ಲೇ ಬಲಭಾಗಕ್ಕೆ 3 ಅಡಿ ಎತ್ತರದ ಶಂಖ, ಚಕ್ರದ ಗುರುತಿರುವ ಒಂದು ಕಲ್ಲುಗುಂಡಿದೆ. ಇದನ್ನು ವೆಂಕಟೇಶ್ವರ ಎಂದು ಕರೆಯುತ್ತಾರೆ. ಮತ್ತೊಂದು ಪಕ್ಕದಲ್ಲಿ 'ರಾಣಿ ಮಹಲ್' ಇದೆ. ಹವಾಮಹಡಿ ಯಂತೆಯೇ ಇರುವ ಇದೂ ಕೂಡ ಸುಂದರವಾದ ಶೈಲಿಯಲ್ಲಿದೆ. ಇಲ್ಲಿಂದ 10 ಗಜ ದೂರದಲ್ಲಿ ಕುದುರೆ ಸಮಾಧಿಯ ರೀತಿಯಲ್ಲೇ ಕಟ್ಟಿರುವ ಆನೆಯ ಸಮಾಧಿಯಿದೆ.

ಇಲ್ಲಿಂದ ಮುಂದೆ ಬೆಟ್ಟವು ಕಡಿದಾಗುತ್ತದೆ. ಇಲ್ಲಿನ ಕೋಟೆಯ ಗೋಡೆಗಳು ಬಹಳ ಜೀರ್ಣವಾಗಿದ್ದು, ಬತೇರಿಗಳು ಮಾತ್ರ ಅಲ್ಲಲ್ಲಿ ಕಂಡುಬರುತ್ತವೆ. ಬೆಟ್ಟದ ಮಧ್ಯಭಾಗದಲ್ಲಿ ನರಸಿಂಹಸ್ವಾಮಿ ದೇವಾಲಯವಿದೆ. ಇದು ಪಾಳೆಯಗಾರರ ಮನೆ ದೇವರು. ವಿಗ್ರಹವು 2 ಅಡಿ ಎತ್ತರ, $1\frac{1}{2}$ ಅಡಿ ಅಗಲದ ಒಂದು ಕಲ್ಲುಬಂಡೆ. ಅದರ ಮೇಲೆ ನರಸಿಂಹನ ರೇಖಾಚಿತ್ರವನ್ನು ಅಪೂರ್ಣವಾಗಿ ಬಿಡಿಸಲಾಗಿದೆ.

ದೇವಾಲಯದ ಪಕ್ಕದಲ್ಲೇ ಸುಮಾರು 20 ಅಡಿ ಎತ್ತರದ ನಾಲ್ಕು ಸ್ತಂಭಗಳಿಂದ ರಚಿಸಿರುವ ಗೋಪುರವಿದೆ. ಇಲ್ಲಿ ಶಿಲ್ಪಿಯ ತಾಂತ್ರಿಕ ನೈಪುಣ್ಯತೆ ನಮ್ಮನ್ನು ಬೆರಗುಗೊಳಿಸುತ್ತದೆ. ದೇವಾಲಯದ ಬಲಭಾಗಕ್ಕೆ ಒಂದು ಪ್ರವೇಶದ್ವಾರವಿದೆ. ಇಲ್ಲಿಗೆ ಹತ್ತಿಬಂದರೆ ವಿಶಾಲವಾದ ಬತೇರಿಯ ಮೇಲಿರುತ್ತೇವೆ. ಇದು ಸುಮಾರು 40 ಅಡಿ ಸುತ್ತಳತೆಯನ್ನು ಹೊಂದಿದ್ದು, ಇಲ್ಲಿಂದ ಇಡೀ ನಗರದ ರಚನೆಯನ್ನು ನೋಡಬಹುದು. ಇದರ ಹಿಂಬದಿಗೆ ಮತ್ತೊಂದು ದೊಡ್ಡದಾದ ಪ್ರವೇಶದ್ವಾರವಿದೆ. ಇದೇ ಕೊನೆಯ ದ್ವಾರ. ಇಲ್ಲಿನ ಕೋಟೆಯ ಗೋಡೆಯು ಬಹಳ ಸುರಕ್ಷಿತವಾಗಿದ್ದು, ಮೇಲಕ್ಕೆ ಹತ್ತಲು ಪ್ರವೇಶದ್ವಾರದ ಎರಡೂಕಡೆಯೂ ಮೆಟ್ಟಲುಗಳಿವೆ. ಇಲ್ಲಿನ ಗೋಡೆಗಳು ಗಾತ್ರದಲ್ಲಿಯೂ, ಎತ್ತರದಲ್ಲಿಯೂ ಬೃಹತ್ತಾದುದಾಗಿವೆ. ಪ್ರವೇಶದ್ವಾರದ ಎಡಗಡೆಯ ಬಂಡೆಯಲ್ಲಿ ಒಂದು ಶಾಸನವಿದೆ[3] ಇದೂ ಪ್ರಕಟವಾಗಿದೆ. ಶಾಸನದ ಎದುರಿಗಿರುವ

---

2. ನೋಡಿ ಇ. ಸಿ. ಕೋಲಾರ X ಬಾಗೇಪಲ್ಲಿ, 63–68.

3. ಇ. ಸಿ. ಕೋಲಾ Xರ ಬಾಗೇಪಲ್ಲಿ, 68. ಇಲ್ಲಿ ಗ್ರಾಮದ ಗಾಡಿಮೊಣೆ ಬಳಿ ಎಂದು ತಪ್ಪಾಗಿ ಮುದ್ರಿತವಾಗಿದೆ. ದುರ್ಗದ ಮೇಲಿನ ಗಾಡಿಮೊಣೆ ಬಳಿ ಎಂದಿರಬೇಕು.

ಬತೇರಿಯಲ್ಲಿ ನಿಂತು ಕೆಳಕ್ಕೆ ಬಗ್ಗಿ ನೋಡಿದರೆ, ಎದೆಯ ಬಡಿತ ನಿಂತಹಾಗಾಗುತ್ತದೆ. ಕಾರಣ ಅಲ್ಲಿ ಸುಮಾರು 40 ಅಡಿ ಆಳದಲ್ಲಿ ವಿಶಾಲವಾದ ನೈಸರ್ಗಿಕವಾದ ಭಾವಿಯಿದೆ. ಇದಕ್ಕೆ ಸುಲಭವಾಗಿ ಇಳಿಯಲು ಸಾಧ್ಯವೇ ಇಲ್ಲ. ಟಿಪ್ಪುಸುಲ್ತಾನನ ಕಡೆಯವರು ಕೋಟೆಗೆ ಮುತ್ತಿಗೆ ಹಾಕಿದಾಗ, ರಾಣಿ ಪರಿವಾರದವರು ತಮ್ಮ ಐಶ್ವರ್ಯದೊಡನೆ ಈ ಭಾವಿಯಲ್ಲಿ ಹಾರಿಕೊಂಡು ಸತ್ತರೆಂದು ವದಂತಿಯಿದೆ. ಇದನ್ನು 'ನಿಧಿಭಾವಿ' ಎಂದೇ ಕರೆಯುತ್ತಾರೆ. ಒಬ್ಬೊಬ್ಬರೇ ಇಲ್ಲಿ ಓಡಾಡಲು ಹೆದರುತ್ತಾರೆ. ನಿಧಿಯ ಆಸೆಗಾಗಿ ಈಗಾಗಲೇ ಹಲವಾರು ಜನರು ಪ್ರಾಣ ತೆತ್ತಿದ್ದಾರೆ. ಇದರ ಹಿಂಭಾಗ ಒಂದು ಕಟ್ಟಡವಿದ್ದು, ಇದನ್ನು ಮದ್ದಿನ ಮನೆ ಎಂದು ಕರೆಯುತ್ತಾರೆ. ಇದರ ಎದುರಿಗೆ ಚಿನ್ನಮ ನಾಯಕನು ಕಟ್ಟಿಸಿದ 'ಅಕ್ಕಗಾರುದೇವತೆ'ಯ ಗುಡಿ ಇದೆ.

ಈಗ ದುರ್ಗದ ತುದಿಯಲ್ಲಿರುವುದು ಒಂದೇ ಕಟ್ಟಡ. ಅದನ್ನು 'ದಾಸ್ತಾನುಜಾಗ' ಎಂದು ಕರೆಯುವರು. ಇದರ ವಿರುದ್ಧ ದಿಕ್ಕಿಗೆ 'ವೆಂಕಟೇಶ್ವರದೊಣೆ'ಯಿದೆ. ಇದರ ಎಡಪಕ್ಕದಲ್ಲಿನ ಕೋಟೆಯಗೋಡೆ ಸಂಪೂರ್ಣವಾಗಿ ಬಿದ್ದುಹೋಗಿದೆ. ಬಹುಶಃ ಟಿಪ್ಪುಸುಲ್ತಾನನಿಂದ ನಿಯೋಜಿತನಾದ ಮೀರ್ ಸಾಹೇಬನು ಇಲ್ಲಿಂದಲೇ ನುಗ್ಗಿ ಬಂದಿರ ಬಹುದು. ಇವನ ದಾಳಿಯಿಂದಲೇ ಈ ಕೋಟೆಯಗೋಡೆ ಒಡೆಯಲಾಗಿದೆ ಎಂದು ಊಹಿಸಬಹುದು.

ಹೀಗೆ ಒಂದು ಉತ್ತಮವಾದ ಪಾಳೆಯಪಟ್ಟಾಗಿ ಬಹುಕಾಲ ಮೆರೆದ ನಮ್ಮ ಗುಮ್ಮನಾಯಕನ ಪಾಳ್ಯವು ಇಂದು ಹಾಳು ಹಂಪೆಯ ನೆನಪನ್ನು ತರಿಸುತ್ತದೆ. ಹಿಂದೆ ಯಾವ ರೀತಿ ವೈಭವದಿಂದ ಇದು ಮೆರೆದಿತ್ತು ಎಂಬ ಕಲ್ಪನೆಯೊಂದಿಗೆ, ನಮ್ಮಿಂದ ನಿಟ್ಟುಸಿರೊಂದು ಹೊರಬೀಳುತ್ತದೆ. ಇಂದಿಗೂ ಇತಿಹಾಸಕಾರರು ಇತ್ತ ಗಮನ ಹರಿಸಿ ದರೆ ಈ 'ಮರಿಹಂಪೆ'ಯ ಅಳಿದುಳಿದ ಸ್ಮಾರಕಗಳನ್ನು ರಕ್ಷಿಸಿ, 'ಕೋಲಾರದ ಹಂಪೆ' ಯನ್ನಾಗಿ ಮಾಡಬಹುದಾದ ಸಾಧ್ಯತೆ ಇಲ್ಲದಿಲ್ಲ.

ಕೋಟೆಯ ನಕ್ಷೆಯೊಂದಿಗೆ (ಚಿತ್ರ ೪) ಅಲ್ಲಿ ನೋಡಬಹುದಾದ ಸ್ಥಳಗಳನ್ನು ಅನುಕ್ರಮಣಿಕೆಯಲ್ಲಿ ಈ ಕೆಳಗೆ ನೀಡಲಾಗಿದೆ.

1 ಮಾರುತಿ ಬತೇರಿ, ಆಂಜನೇಯ ವಿಗ್ರಹ.
2 ಕೋಟೆಯ ಮುಖ್ಯ ಪ್ರವೇಶದ್ವಾರ.
3 ಆಂಜನೇಯ ದೇವಾಲಯ, ಸಾಮಾನ್ಯ ಶೈಲಿಯಲ್ಲಿದೆ.
4 ಗಣೇಶ ದೇವಾಲಯ, ಸಾಮಾನ್ಯ ಶೈಲಿ.
5 ಎರಡನೇ ಕೋಟೆಯ ಪ್ರವೇಶದ್ವಾರ.
6 ಈಶ್ವರ ದೇವಾಲಯ, ಬಯಲಿನಲ್ಲಿ ಲಿಂಗ ಮಾತ್ರ ಇದೆ.
7 ಮೂರನೇ ಕೋಟೆಯ ಪ್ರವೇಶದ್ವಾರ.

8 ಹವಾಮುಹಡಿ, ಮುಸ್ಲಿಂಶೈಲಿ.
9 ಆಯುರ್ವೇದ ಆಸ್ಪತ್ರೆ (?).
10 ಈಶ್ವರ ದೇವಾಲಯ (ಇದು ವಿಷ್ಣುದೇವಾಲಯ ಇರಬಹುದು).
11 ನೀರಿನ ಟ್ಯಾಂಕ್, ಕಲ್ಯಾಣಿ.
12 ಒಲಿಸಿಮಾರಮ್ಮಗುಡಿ (ಸಾಮಾನ್ಯ ಶೈಲಿ).
13 ಒಲಿಸಿಮಾರಮ್ಮನ ಜಾತ್ರೆಸ್ಥಳ (ಈಗ ಜಾತ್ರೆ ನಡೆಯುತ್ತಿಲ್ಲ).
14 ಕುದುರೆ ಸಮಾಧಿ.
15 ವೆಂಕಟೇಶ್ವರ.
16 ರಾಣಿಮಹಲ್ (ಮುಸ್ಲಿಂ ಶೈಲಿ).
17 ಆನೆ ಸಮಾಧಿ.
18 ನರಸಿಂಹಸ್ವಾಮಿ ದೇವಾಲಯ.
19 ಬೆಟ್ಟದ ತುದಿಗೆ ಏಕೈಕ ಪ್ರವೇಶದ್ವಾರ.
20 ದೊಡ್ಡದಾದ ಬತೇರಿ.
21 ಶಾಸನ ಇರುವ ಸ್ಥಳ (ಕ್ರಿ. ಶ. 1762).
22 ವೆಂಕಟೇಶ್ವರ ದೊಣೆ.
23 ಗಾಡಿ ದೊಣೆ.
24 ಒಂದು ಕಟ್ಟಡದ ಅವಶೇಷ.
25 ದಾಸ್ತಾನು ಮಳಿಗೆ.
26 ನಿಧಿ ಭಾವಿ.
27 ಮದ್ದಿನ ಮನೆ.
28 ಅಕ್ಕಗಾರುದೇವತೆ.
29 ಸಿಹಿನೀರಿನ ಕೆರೆ.
30 ಹಳೆಯ ನಗರದ ನಿವೇಶನಗಳು.
31 ಹಳೆಯ ನಗರದ ನಿವೇಶನಗಳು.
32 ಉತ್ತರದ ಪ್ರವೇಶದ್ವಾರ.
33 ದಕ್ಷಿಣದ ಪ್ರವೇಶದ್ವಾರ.
34 ರಾಮಸ್ವಾಮಿ ದೇವಾಲಯ, ಶಾಸನವಿಟೆ.
35 ಈಗಿನ ಜಿ. ಪಾಳ್ಯ ಗ್ರಾಮ.
36 ಶ್ರೀರಾಮ ದೇವಾಲಯ.
37 ಹಳೆಯ ನಗರದ ನಿವೇಶನ.
38 ಹಳೆಯ ನಗರದ ನಿವೇಶನ.
39 ವೇಣುಗೋಪಾಲಸ್ವಾಮಿ ದೇವಾಲಯ.

ಕ್ರಿಯಾ ಸಮಾಸ - ಒಂದು ಪುನಃ ಪರಿಶೀಲನೆ

—ಎಂ. ಜಿ. ವಾರಿ

೧. ಈ ಸಮಾಸದ ವಿಶೇಷಾಂಶಗಳು.

i) ಇದು ಕನ್ನಡಕ್ಕೆ ಮಾತ್ರ ಸಂಬಂಧಪಟ್ಟಿರುವುದು.

ii) ಇಲ್ಲಿ ಅರಿಸಮಾಸ ನಿರ್ದೋಷವೆನಿಸುತ್ತದೆ. ಅದರಂತೆ ಪೂರ್ವಪದ ಸಂಸ್ಕೃತವಾಗಿರಬಲ್ಲುದು.

೨. ಈ ಸಮಾಸದ ಕೆಲವು ತೊಡಕುಗಳು,

i) ಕೇಶಿರಾಜನು ಕೊಟ್ಟ ಉದಾಹರಣೆಗಳನ್ನು ಎರಡು ಭಾಗವಾಗಿ ತೋರಿಸಬೇಕಾಗಿದೆ. ಕೆಲವು ತಾನಾಗಿಯೇ ಕಲ್ಪಿಸಿಕೊಟ್ಟಿರುವ ಉದಾಹರಣೆಗಳು ; ಮತ್ತೆ ಕೆಲವು ಕಾವ್ಯಗಳಿಂದ ಎತ್ತಿಕೊಂಡಿರುವ ಉದಾಹರಣೆಗಳಾಗಿವೆ. ಕೇಶಿ ರಾಜನನ್ನು ಒಳಗೊಂಡು ನಾಗವರ್ಮ ಭಟ್ಟಾಕಳಂಕರು ಕೊಟ್ಟ ಸ್ವಕಲ್ಪಿತ ಸೃಷ್ಟಿಯ ಉದಾಹರಣೆಗಳೆಲ್ಲ (ಒಂದೂ ಬಿಡದಂತೆ) ಪುರುಷವಾಚಕ ನಾಮಪದಗಳೇ ಆಗಿವೆ.

ii) ಕೊಟ್ಟಿರುವ ಕಾವ್ಯದ ಉದಾಹರಣೆಗಳಲ್ಲಿ ಇದಕ್ಕೆ ಸಂಬಂಧಿಸಿದಹಾಗೆ ಒಂದೇ ಒಂದು ಉದಾಹರಣೆಯು ಸಿಕ್ಕುತ್ತದೆ.

"....................ಕಡಗೊಂಡನೊ ಬಡೆಗೊಂಡನೋ"

ಇನ್ನುಳಿದ ಉದಾಹರಣೆಗಳೆಲ್ಲ ನಾಮಧಾತುಗಳು ಒಟ್ಟುಗೂಡಿ ಸಿದ್ಧಗೊಂಡಂಥ ಸಂಯುಕ್ತ ಕ್ರಿಯಾವಾಚಿ ಪದಗಳೇ ಆಗಿವೆ. ಆದರೆ ಚಕ್ರಂಗೊಳೆ, ಗಡೆಗೊಳೆ ಎನ್ನುವ ಉದಾಹರಣೆಗಳು 'ನಾಮಪದಗಳ ರಚನೆ' ಎಂಬ ಮೇಲಿನ ವಿವರಣೆಗೆ ವ್ಯತಿರಿಕ್ತ ಆಗುತ್ತವೆ. 'ನಾಮ + ಧಾತು'—ಸೇರಿ ಸಂಯುಕ್ತ ಕ್ರಿಯಾವಾಚಿ ಪದಗಳು ಸಿದ್ಧಿಸುತ್ತವೆ. ಹಾಗಾದರೆ ಇವುಗಳಲ್ಲಿ ಯಾವುದು ಕ್ರಿಯಾಸಮಾಸ ಇಲ್ಲಿ ಕೇಶಿರಾಜನು ಉದ್ದೇಶಿಸಿದ ಕ್ರಿಯಾ–ಸಮಾಸದ ರೂಪ ಯಾವುದು ? ಇವುಗಳಲ್ಲಿ ಪುರುಷ ಸೂಚಕ ಸಾಮಾರ್ಥ್ಯದ ರೂಪಗಳೇ ಕ್ರಿಯಾ ಸಮಾಸಗಳಾಗಿರಲು ಸಾಧ್ಯತೆಗಳಿವೆ—

ಎನ್ನುವ ಅಭಿಪ್ರಾಯದತ್ತ ವಿದ್ವಾಂಸರನೇಕರು ವಾಲುವಂತೆ ತೋರುತ್ತದೆ ೧. ಏಕೆಂದರೆ ಅವು ನಾಮಾರ್ಥವನ್ನು ಕೊಡಲು ಶಕ್ತವಾಗಿವೆ. ಜೊತೆಗೆ ಪೂರ್ಣಗೊಂಡ ಕ್ರಿಯೆಯೊಂದರ ಮೂಲಕ ವ್ಯಕ್ತಿಸೂಚಕವಾಗಿ ಈ ಸಮಾಸಪದ ಸೃಷ್ಟಿಗೊಳ್ಳುತ್ತದೆ. ಅಂದಾಗ ಇದನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು.

—ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನುಳ್ಳ ನಾಮ (ನಾಮಪ್ರಕೃತಿ + ದ್ವಿ.ವಿ.ಪ.) + ಕೃಲ್ಲಿಂಗ (ಧಾತು + ಕಾಲವಾಚಕ ಪ್ರತ್ಯಯ + ಲಿಂಗಸೂಚಕ ಪ್ರತ್ಯಯ) → ಕ್ರಿಯಾ ಸಮಾಸ ೨

—ಬಳಿಯನ್ (ಬಳಿ + ಅನ್) + ತೊಟ್ಟನ್ → ಬಳಿದೊಟ್ಟನ್ (=ಬಳಿ ತೊಟ್ಟವನು.)

ಹೀಗಿರುವಾಗ ಕೇಶಿ ರಾಜನು ಕ್ರಿಯಾ ಸಮಾಸದ ಬಗೆಗೆ ಹೊಂದಿರಬಹುದಾದ ನಿಲುವನ್ನು ಅರ್ಥೈಸಲು ಒಂದು ರೀತಿ ಗೊಂದಲ ನಿರ್ಮಾಣಗೊಂಡಂತಾಗುತ್ತದೆ.

2 ಇದರಿಂದ ಕೇಶಿ ರಾಜನ ನಿಲುವು ಮತ್ತು ಅವನಲ್ಲಿ ಮೂಡಿದ ಅನುಮಾನ (ಸ್ಪಷ್ಟವಾಗಿ ಅಲ್ಲದಿದ್ದರೂ) ಹೀಗಿದ್ದಿರಬಹುದು – ಎಂದೆನಿಸುತ್ತದೆ. ಸಮಾಸಗಳ ಉದ್ದೇಶ ಉದ್ದಿಷ್ಟನಾಮಗಳ ರಚನೆಯಾಗಿದೆ ಎಂದು ಕೇಶಿರಾಜ ತಿಳಿದವನು. ಅದಕ್ಕೆ ಪೂರಕವಾಗಿ ಕ್ರಿಯಾಸಮಾಸದಿಂದಲೂ ಕ್ರಿಯಾರ್ಥದ ಮೂಲಕ ವ್ಯಕ್ತಿಸೂಚಕ ನಾಮಗಳ ಸೃಷ್ಟಿಯಾಗಿದೆ ಎಂದು ಭಾವಿಸಿ, ಹಾಗೆಂದು ಸ್ಪಷ್ಟವಾಗಿ ಹೇಳಿಬಿಟ್ಟನು. ಆದಕ್ಕೆಂದೇ ತಾನಾಗಿಯೇ ಕೊಟ್ಟಿರುವ (ಕಾವ್ಯೇತರ)ಎಲ್ಲ ಉದಾಹರಣೆಗಳು ನಾಮಾರ್ಥವುಳ್ಳವೆ ಆಗಿವೆ. ಆದರೆ ಸಂಯುಕ್ತ ಕ್ರಿಯಾರ್ಥದ ಪದಗಳುಳ್ಳ ಕಾವ್ಯದಿಂದ ಎತ್ತಿದ ಉದಾಹರಣೆಗಳನ್ನು ಕೊಟ್ಟಿರುವನಲ್ಲಾ ! ಅದಕ್ಕೆ ಸಂಬಂಧಿಸಿ ಕೇಶಿರಾಜ ಏನನ್ನೂ

---

೧. ಕ್ರಿಯಾ ಸಮಾಸದ ಬಗೆಗೆ ವಿದ್ವಾಂಸರಲ್ಲಿ ಇಬ್ಬಗೆಯ ಅಭಿಪ್ರಾಯಗಳು ಮೂಡಿವೆ.

i) ನಾಮಾರ್ಥದ ರಚನೆ ಇರುವುದು ಮಾತ್ರ ಕ್ರಿಯಾ ಸಮಾಸವೆನಿಸುತ್ತದೆ. ಸಂಯುಕ್ತ ಕ್ರಿಯಾವಾಚಿ ಪದ ಕ್ರಿಯಾ ಸಮಾಸದಿಂದ ಹೊರಗುಳಿಯುತ್ತದೆ. ಇದು ಪಾರ್ಶ್ವಿಕ ದೃಷ್ಟಿಕೋನ ಇದ್ದಂತೆ.

ii) ನಾಮಾರ್ಥ ರಚನೆಯೊಂದಿಗೆ ಕ್ರಿಯಾಸಮಾಸದಲ್ಲಿ ಸಂಯುಕ್ತ ಕ್ರಿಯಾವಾಚಿ ಪದ ರಚನೆಯೂ ಸೇರುತ್ತದೆ. ಈ ಬಗ್ಗೆ ಕೈಪಿಡಿಕಾರರು, ತೀ. ನಂ. ಶ್ರೀ ಕುಶಾಲಪ್ಪಗೌಡ ಇವರೆಲ್ಲರ ಅಭಿಪ್ರಾಯ ಸ್ಪಷ್ಟವಾಗಿಯೇ ಇದೆ.

೨ ನಾಮಾರ್ಥರಚನೆಯಲ್ಲಿ ಉತ್ತರ ಪದ ಬಹುಮಟ್ಟಿಗೆ ಕ್ರಿಯಾಪದವೆಂದೇ (ಕೆಲವರು ಕೃನ್ನಾಮ ಎಂದು ಹೇಳಿರುವರು) ಕರೆಯಲಾಗುತ್ತಿದೆ. ಆದರೆ ವಾಸ್ತವಿಕವಾಗಿ ಕ್ರಿಯಾರ್ಥಸೂಚಕ ಮಹತ್‌ವರ್ಗದ ಪದವಾಗಿದೆ. ಅಂದರೆ ಅದು ಕೃಲ್ಲಿಂಗವೆನಿಸಿಕೊಳ್ಳುತ್ತದೆ. ಕೃಲ್ಲಿಂಗದ ಹೆಚ್ಚಿನ ವಿವರಗಳಿಗೆ ನೋಡಿ.–

ನನ್ನ ಲೇಖನ 'ಲಿಂಗ–ಒಂದು ವಿವೇಚನೆ'

ಸಾಧನೆ. ಅಕ್ಟೋಬರ್–ಡಿಸೆಂಬರ್. 1985, ಸಂ : 14. ಸ : 4

ಬಾಯಿ ಬಿಡಲಾರದವನಾದನಲ್ಲಾ !?–ಇತ್ಯಾದಿ ಅನುಮಾನಗಳು ಸೈಯೆ ಸೈ. ಇವುಗಳು ತಾತ್ವಿಕವಾಗಿ ಸಮಾಸ ಪದಗಳೆನಿಸಿದರೂ ನಾಮಾರ್ಥ ರಚನೆಗೆ ಕಾರಣವಾಗುವ (ಇದು ಪೂರ್ವದಿಂದಲೂ ಬಂದ ಮತ್ತು ಕೇಶಿರಾಜನಿಂದಲೂ ಒಪ್ಪಿತಗೊಂಡ ಪೂರ್ವಗ್ರಹಿಕೆ) ಕ್ರಿಯಾ ಸಮಾಸದ ಪರಿಧಿಯೊಳಗೆ (ಸಂಯುಕ್ತ ಕ್ರಿಯಾವಾಚಿ ಪದಗಳಿಗೆ ಸಂಬಂಧಿಸಿದಂತೆ) ವಿವರಣೆ ಕೊಡುವುದಾದರು ಹೇಗೆಂಬ ಸಂದೇಹ ಕೇಶಿರಾಜನಿಗೆ ಬಂದಿರಲೇಬೇಕು.ಅವನಿಗೆ ಈ ಸಂದೇಹ ಅನುಮಾನ ಒಂದು ರೀತಿ ಅಪರಿಹಾರ್ಯವಾಗೇ ಉಳಿದಂತೆ ತೋರುತ್ತದೆ. ಅದರಿಂದ ಸಂಯುಕ್ತ ಕ್ರಿಯಾವಾಚಿ ಪದಗಳಿಗೆ ಹೊಂದುವಂಥ ಕಾವ್ಯದ ಉದಾಹರಣೆಗಳನ್ನು ಸಮೃದ್ಧಿಯಾಗಿ ಕೊಟ್ಟರೂ ಈ ಕಾರಣದಿಂದ ಏನೂ ಹೇಳದೆ ಮೌನವಾಗಿ ಉಳಿದಿರಬೇಕು.

ಈ ತನಕದ ಚರ್ಚೆಯಿಂದ ಕ್ರಿಯಾಸಮಾಸದ ಕುರಿತು ಹೊಮ್ಮುವ ವಿಚಾರಾಂಶಗಳು ಇಷ್ಟು.—

i) ದ್ವಿತೀಯಾದಿ ಪ್ರತ್ಯಯವನ್ನುಳ್ಳ ಪದ ಕೃಲ್ಲಿಂಗದೊಂದಿಗೆ ಸೇರಿ ವ್ಯಕ್ತಿ ಸೂಚಕ ನಾಮಾರ್ಥದ ಪದ ನಿರ್ಮಾಣಗೊಳ್ಳುತ್ತದೆ. ಆದರೆ ಹೊಸಗನ್ನಡದಲ್ಲಿ ಈ ರೀತಿಯ ಅಖಂಡ ರೂಪಗಳು ಉಳಿದಿಲ್ಲ. ಇಂದು ದ್ವಿ.ವಿ.ಪ್ರ. ವನ್ನುಳ್ಳ ನಾಮ ಮತ್ತು ಕೃಲ್ಲಿಂಗಗಳೆರಡೂ ಪ್ರತ್ಯೇಕವಾಗಿಯೆ ಬಳಕೆಗೊಳ್ಳುತ್ತದೆ.

ii) (ನಾಮಪದ ರಚನೆಯಷ್ಟೆ ಅಲ್ಲ) ಸಂಯುಕ್ತ ಕ್ರಿಯಾವಾಚಿ ಪದ ರಚನೆಯೂ ಕ್ರಿಯಾಸಮಾಸವೆಂದೇ ಆಗುತ್ತದೆ. ಅಂದಮೇಲೆ ಧಾತುಗಳೆರಡು ಸೇರಿದ ಸಂಯುಕ್ತ ಕ್ರಿಯಾವಾಚಿಪದವೂ ಕ್ರಿಯಾಸಮಾಸದ ವ್ಯಾಪ್ತಿಯೊಳಗೆ ಬಂದಂತಾಗುತ್ತದೆ. ಆದ್ದರಿಂದ ಕ್ರಿಯಾ ಸಮಾಸದ ಹರವು ಇಷ್ಟಿದೆಯೆಂದು ಅದರ ಸೀಮಾ ರೇಖೆಯನ್ನು ಹೀಗೆ ಗುರ್ತಿಸಬಹುದು.

ಕ್ರಿಯಾ ಸಮಾಸ (ಪದರಚನೆ)

↓ ↓

ಸಂಯುಕ್ತ ಕ್ರಿಯಾವಾಚಿ ಪದರಚನೆ ನಾಮಾರ್ಥದ [ಪುರುಷ ಸೂಚಕ] ಪದರಚನೆ

↓ ↓

ನಾಮ + ಧಾತು ಧಾತು + ಧಾತು

iii) ಹೊಸಗನ್ನಡದಲ್ಲಿ ಸಂಯುಕ್ತ ಕ್ರಿಯಾವಾಚಿ ಪದರಚನೆಗೆ ಮಾತ್ರ ಕ್ರಿಯಾ ಸಮಾಸ ಸೀಮಿತಗೊಂಡಿದೆ ಎನ್ನಬೇಕು[೩]

೩. ಇಂದು ಪ್ರಾಥಮಿಕ ಮತ್ತು ಪ್ರೌಢ ಮಾಧ್ಯಮಿಕ ಶಾಲೆಗಳಲ್ಲಿ ಕ್ರಿಯಾಸಮಾಸವೆಂದರೆ ಈ ಸೀಮಿತ ಅರ್ಥದಲ್ಲೇ ಕಲಿಸಲಾಗುವುದು.

[ಈ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಚರ್ಚೆ ಆಗಬೇಕಾಗಿದೆ ಎಂದು ಅನಿಸಿದ್ದರಿಂದ ಕ್ರಿಯಾ ಸಮಾಸದ ಬಗೆಗೆ ನನ್ನ ಕೆಲವು ವಿಚಾರಗಳನ್ನು ಇಲ್ಲಿ ಮುಂದಿಟ್ಟಿರುವೆನು.]

ಕಾವ್ಯಾರ್ಥ ಕುತೂಹಲ - ಪ್ರತಿಕ್ರಿಯೆ

ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಶ್ರೀಮಾನ್ ವಿ. ವಿ. ಜೋಶಿಯವರು "ಕಾವ್ಯಾರ್ಥ ಕುತೂಹಲ"ವೆಂಬ ಲೇಖನದಲ್ಲಿ[1] ತಮ್ಮ ಆಳವಾದ ಕಾವ್ಯಾಧ್ಯಯನದ ಫಲವನ್ನು ವಾಚಕರೊಡನೆ ಹಂಚಿಕೊಂಡಿರುವುದಲ್ಲದೆ, ಅವರ ಪ್ರತಿಕ್ರಿಯೆಯನ್ನೂ ಕೇಳುವ ಸೌಜನ್ಯವನ್ನೂ ತೋರಿಸಿದ್ದಾರೆ. ಆ ಲೇಖನವನ್ನು ಓದಿದ ಮೇಲೆ ನನಗೆ ತೋರಿದ ಅಭಿಪ್ರಾಯಗಳನ್ನು ಇಲ್ಲಿ ಹೇಳ ಬಯಸುತ್ತೇನೆ.

ತೆಂಕಣಗಾಳಿ ಸೋಂಕಿದೊಡ ಮೊಳ್ನುಡಿಗೇಳ್ದೊಡ ಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿಪಮಲ್ಲಿಗೆಗಂಡೊಡಮಾದ ಕೆಂದಲಂ ।
ಪಂ ಕೆಳೆಗೊಂಡೊಡಂ ಮಧುಮಹೋತ್ಸವ ಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ॥

(ಪಂಪ ಭಾರತ ೪–೭೮)

ಈ ಪದ್ಯದ ಕೊನೆಯ ಸಾಲಿನ ಅರ್ಥದ ವಿಷಯವನ್ನು ಚರ್ಚಿಸುವಾಗ, ಕನ್ನಡ ನಿಘಂಟಿನಲ್ಲಿ ಆಱು ಶಬ್ದಕ್ಕೆ 'ನಿಚುಲವೃಕ್ಷ'ವೆಂಬ ಅರ್ಥ ಕೊಟ್ಟಿರುವುದನ್ನು ಗಮನಿಸಿ, "ಅಮರಕೋಶವು ನಿಚುಲ=ಪನಸ ಎನ್ನುತ್ತದೆ" ಎಂದು ಹೇಳಿದ್ದಾರೆ.

ಅಮರಕೋಶದ ಲೂಯಿರೈಸರ[2] ಆವೃತ್ತಿಯಲ್ಲಿ "ಪನಸಃ ಕಂಟಕಫಲೋ ನಿಚುಲೋಽಂಬುಜ ಇಜ್ಜಲಃ" ಎಂದಿದೆ. ಇತರ ಆವೃತ್ತಿಗಳಲ್ಲಿ ಪಾಠಾಂತರಗಳಿವೆ.[3].

ಅಮರಕೋಶದ ಈ ಶ್ಲೋಕಾರ್ಧದಲ್ಲಿರುವ ಐದು ಪದಗಳೂ ಸಮಾನಾರ್ಥಕಗಳಲ್ಲ. ನಾನು ನೋಡಿರುವ ಎಲ್ಲ ಪ್ರತಿಗಳಲ್ಲೂ ಮೊದಲ ಪಾದವನ್ನು ಒಂದು ಘಟಕವನ್ನಾಗಿಯೂ ಉಳಿದ ಭಾಗವನ್ನು ಮತ್ತೊಂದು ಘಟಕವನ್ನಾಗಿಯೂ ತೆಗೆದುಕೊಂಡಿದ್ದಾರೆ. ಎಲ್ಲ ವ್ಯಾಖ್ಯಾನಕಾರರೂ ಪನಸ ಮತ್ತು ಕಂಟಕಫಲ (ಅಥವಾ ಕಂಟಕಿಫಲ)ಗಳನ್ನು ಪನಸಕ್ಕೂ, ಉಳಿದ ಮೂರು ಪದಗಳನ್ನು ನಿಚುಲಕ್ಕೂ ಅನ್ವಯಿಸಿದ್ದಾರೆ.

---

1. ಕರ್ನಾಟಕ ಲೋಚನ, ಜೂನ್ 1993ರ ಸಂಚಿಕೆ–ಪುಟಗಳು 40–44
2. ಅಮರಕೋಶ-ಲೂಯಿರೈಸ್, 1970ರ ಆವೃತ್ತಿ ; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
3. (a) ಪನಸಃ ಕಂಟಕಿಫಲೋ, ನಿಚುಲೋ ಹಿಜ್ಜಲೋಽಮ್ಬುಜಃ ।
ನಾಮಲಿಂಗಾನುಶಾಸನಂ, ಭಟ್ಟಕ್ಷೀರಸ್ವಾಮಿ ಪ್ರಣೀತೇನ ಅಮರಕೋಶೋದ್ಘಾಟನೇನ ಸಹಿತಂ ; *Oriental Book Agency. Poona, 1941.*

ಲೂಯಿರೈಸರ ಆವೃತ್ತಿಯಲ್ಲಿ ಪನಸಕ್ಕೆ The Jack tree [Artocarpus Integripolia], ಹಲಸಿನಗಿಡ ಎಂದೂ ನಿಚುಲಕ್ಕೆ (The tree Barringtonia Acutangula) ನೀರು ಹಲಸಿನಗಿಡ ಎಂದೂ ಇಂಗ್ಲಿಷ್ ಮತ್ತು ಕನ್ನಡ ಪರ್ಯಾಯ ಪದಗಳನ್ನು ಕೊಟ್ಟಿದ್ದಾರೆ.

ಕ್ಷೀರಸ್ವಾಮಿಯು 'ನಿಚುಲ'ದ ಪರ್ಯಾಯಪದವಾದ 'ಹಿಜ್ಜಲ' ಶಬ್ದವು 'ಹಿತಜಲ'ದ ಅಪಭ್ರಂಶವೆಂದೂ[4], ಹಿಜ್ಜಲವು 'ಅಂಬುವೇತಸ'ದ ಭೇದವೆಂದೂ ಹೇಳಿದ್ದಾನೆ. 'ಅಂಬುವೇತಸ' ಶಬ್ದಕ್ಕೆ ವ್ಯಾಖ್ಯಾನ ಮಾಡುವಾಗ ಧನ್ವಂತರಿ ನಿಘಂಟಿನ ಶ್ಲೋಕಗಳನ್ನು ಕೊಟ್ಟಿದ್ದಾನೆ. ಈ ಶ್ಲೋಕಗಳಲ್ಲಿ ವೇತಸ, ಅಂಬುವೇತಸ, ನಿಚುಲ, ಇವುಗಳ ವಿಷಯವಿದ್ದು, ಅಂಬುವೇತಸವು ನೀರಿನಲ್ಲಿ ಹುಟ್ಟುವುದೆಂದೂ ಇದಕ್ಕೆ ನೀರಿನ ಆವಶ್ಯಕತೆಯಿದೆಯೆಂದೂ, ನಿಚುಲವು 'ಸ್ಥಲವೇತಸ'ವೆಂದೂ ಹೇಳಿದೆ[5]. 'ವೇತಸ'ವೆಂದರೆ ಬೆತ್ತ. ರೈಸರ ಆವೃತ್ತಿಯಲ್ಲಿ 'ವೇತಸ'ದ ಪರ್ಯಾಯ ಪದಗಳು The rattan (Calamus Spp.) ಮತ್ತು ಹಬ್ಬೆಗಿಡ. 'ಅಂಬುವೇತಸ'ಕ್ಕೆ A Kind of same growing in water ಎಂದು ಹೇಳಿ ನೀರುಹಬ್ಬೆ ಎಂಬ ಕನ್ನಡದ ಪರ್ಯಾಯಪದವನ್ನು ಕೊಟ್ಟಿದೆ,

ರಾಯಮುಕುಟನ ವ್ಯಾಖ್ಯಾನದಲ್ಲಿ 'ನಿಚುಲ'ದ ಪರ್ಯಾಯ ಪದವಾದ 'ಅಮ್ಬುಜ ಶಬ್ದಕ್ಕೆ "ಅಮ್ಬುನೋ ಜಾತಃ ಅಮ್ಬುಜಃ" (ನೀರಿನಲ್ಲಿ ಹುಟ್ಟಿದ್ದು ಅಮ್ಬುಜ) ಎಂಬ ನಿಷ್ಪತ್ತಿಯನ್ನು ಹೇಳಿ 'ನಿಚುಲ', 'ಇಜ್ಜಲ', 'ಹಿಜ್ಜಲ'ಗಳು ಪರ್ಯಾಯ ಪದಗಳೆಂದು ಹೇಳುವ 'ರಭಸಕೋಶ'ದ ವಾಕ್ಯವನ್ನು ಉದ್ಧರಿಸಿದ್ದಾನೆ ವ್ಯಾಖ್ಯಾನಕಾರ[6].

(b) ಪನಸಃ ಕಂಟಕಿಫಲೋ, ನಿಚುಲೋಽಮ್ಬುಜ ಇಜ್ಜಲಃ ।
ನಾಮಲಿಂಗಾನು ಶಾಸನೇ ರಾಯಮುಕುಟಕೃತಾ ಪದಚಂದ್ರಿಕಾ.
Sanskrit College, Calcutta-1973.

4. ಹಿತಜಲಸ್ಯಾಪಭ್ರಂಶೋ ಹಿಜ್ಜಲೋಽಮ್ಬುವೇತಸ ವಿಶೇಷತ್ವಾತ್ ।

5. ವೇತಸೋ ವಿದುಲೋ ನಮ್ರೋ ವಂಜುಲೋ ದೀರ್ಘಪತ್ರಕಃ ॥
ನಾದೇಯೀ ಗಂಧಪತ್ರಶ್ಚ ಜಲೌಕಾಸ್ಸಭೃತಸ್ತಥಾ ।
ನದೀಕೂಲಪ್ರಿಯಸ್ತ್ವನ್ಯಃ ಸುಶೀತೋ ಘನಪುಷ್ಪಕಃ ॥
ಜಲಜಾತಸ್ತೋಯಕಾಮೋ ವಿದುಲೋ ಜಲವೇತಸಃ ।
ನಿಚುಲೋ ವೇತಸಾದನ್ಯೋ ವಕ್ಷ್ಯತೇ ಸ್ಥಲವೇತಸಃ ॥
(ಧನ್ವಂತರಿ ನಿಘಂಟು, 5–116)

6. "ನಿಚುಲೇಜ್ಜಲಹಿಜ್ಜಲಾಃ" ಇತಿ ರಭಸಾತ್ । 'ಹಿಜ್ಜಲಃ' ಅಪಿ । ತ್ರೀಣಿ ಹಿಜ್ಜಲಸ್ಯ ।
ಅಡಿ ಟಿಪ್ಪಣಿಯಲ್ಲಿ 'ಸ್ಥಲವೇತಸಃ' ಎಂದಿದೆ.
ನಾಮಲಿಂಗಾನು ಶಾಸನೇ ರಾಯಮುಕುಟಕೃತಾ ಪದಚಂದ್ರಿಕಾ.

ಹೀಗೆ ಅಂಬುವೇತಸ ಮತ್ತು ನಿಚುಲ (ಅಥವಾ ಸ್ಥಲವೇತಸ)ಗಳೆರಡೂ ವೇತಸ (ಎಂದರೆ) ಬೆತ್ತದ ಪ್ರಭೇದಗಳು. ಅಂಬುವೇತಸ ನೀರಿನಲ್ಲಿ ಬೆಳೆದರೆ ನಿಚುಲ ನೀರಿನ ಸಮೀಪದಲ್ಲಿ ನೆಲದ ಮೇಲೆ ಬೆಳೆಯುತ್ತದೆ. ಆಪ್ಟೆಯವರ ಸಂಸ್ಕೃತ–ಇಂಗ್ಲಿಷ್ ಕೋಶದಲ್ಲಿ 'ಅಂಬುವೇತಸ'ವನ್ನು(A kind of cane or reed growing in water" (ನೀರಿನಲ್ಲಿ ಬೆಳೆಯುವ ಬೆತ್ತ ಅಥವಾ ಜೊಂಡುಹುಲ್ಲಿನ ಪ್ರಭೇದ) ಎಂದು ವಿವರಿಸಿ, ಅದಕ್ಕೆ ಮರಾಠೀಯಲ್ಲಿ ಲವ್ಹಾಳಾ ಎಂಬ ಪರ್ಯಾಯ ಪದವನ್ನು ಕೊಟ್ಟಿದ್ದಾರೆ. (ಬಹುಶಃ ಇದು ಹಿಂದೆ ಲೇಖನಿಗಾಗಿ ಉಪಯೋಗಿಸುತ್ತಿದ್ದ ಲಾಳದ ಕಡ್ಡಿಯಿರಬಹುದು).

ಆಪ್ಟೆಯವರು ಮೇಘದೂತದ ವಾಕ್ಯದ ಮೇಲೆ ಮಲ್ಲಿನಾಥನ ವಿವರಣೆ ಬಹಳ ಸಂದೇಹಾಸ್ಪದವೆಂದು–"ಸಮಂಜಸವಾಗಿಲ್ಲವೆಂದು" ಅಲ್ಲ—ಹೇಳಿದ್ದರೂ, 'a kind of reed' ಎಂಬ ವಿವರಣೆಗೆ ಇದು ಅನ್ವಯಿಸುವುದಿಲ್ಲ. ಆಪ್ಟೆಯವರ ಕೋಶದಲ್ಲಿ 'ನಿಚುಲ' ಶಬ್ದಕ್ಕೆ

i) ಒಂದು ಜಾತಿಯ ಜೊಂಡುಹುಲ್ಲು ;
ii) ಕಾಳಿದಾಸನ ಸಹಪಾಠಿ ;
iii) ಮೇಲಿನ ಕವಚ (ಅಂಗಿ) ;
iv) ಹಿಜ್ಜಲವೆಂಬ ಮರ ;
v) ತಾವರೆ ;
vi) ತೆಂಗಿನ ಮರ ; ಎಂಬ ಅರ್ಥಗಳನ್ನು ಹೇಳಿ,

"ನಿಚುಲೋ ಹಿಜ್ಜಲೇ ಪದ್ಮೇಽಪ್ಯಸ್ತ್ರೀ ಮಧುಫಲೇಽಪಿ ಚ"
ಎಂಬ ನಾನಾರ್ಥ ಮಂಜರಿಯ ಶ್ಲೋಕಾರ್ಥವನ್ನು ಉದ್ಧರಿಸಿದ್ದಾರೆ[7]."

---

7. ನಿಚುಲಃ—1) A kind of reed.
2) Name of a poet and friend of ಕಾಲಿದಾಸ ; ಸ್ಥಾನಾದಸ್ಮಾತ್ಸರಸನಿಚುಲಾದುತ್ಪತೋದಙ್ಮುಖಃ 2101 (Where Mallinatha obsreves- ನಿಚುಲೋ ನಾಮ ಮಹಾಕವಿಃ ಕಾಲಿದಾಸಸ್ಯ ಸಹಾಧ್ಯಾಯಃ, but this explanation is very doubtful)
3) An upper garment cover ; cf ನಿಚೋಲ.
4) The tree called ಹಿಜ್ಜಲ, (Barringtonia Acutangula)
5) A lotus,
6) A coconut tree,

Apte—The Practical Sanskrit English Dictionary, 1957 edition. (Prasad Prakashan, Poona)

ಈ ಎಲ್ಲ ಆಧಾರಗಳಂತೆ ನಿಚುಲ ಹಲಸಿನ ಮರಕ್ಕಿಂತ ಭಿನ್ನವಾದುದು. ಹಾಗಾದರೆ, ನಿಚುಲ (ಹಿಜ್ಜಲ) ಯಾವುದು ?

ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ನಿಘಂಟಿನಲ್ಲಿ "ಆರು ಎಂಬ ಕನ್ನಡ ಪದಕ್ಕೆ ರೂಢವಾದ ಹಲಸಿನ ಮರ ಎಂದು ಹೇಳದೆ ನಿಚುಲವೃಕ್ಷ ಎಂದಿರುವುದೂ ಸೋಜಿಗವಲ್ಲವೆ ?" ಎಂದು ಜೋಶಿಯವರು ಕೇಳಿದ್ದಾರಷ್ಟೆ !

ಪರಿಷತ್ತಿನ ನಿಘಂಟಿನಲ್ಲಿ ಆರ್ (ಅಥವಾ ಆರ) ಎಂಬ ಶಬ್ದಕ್ಕೆ ನಿಚುಳ ವೃಕ್ಷ ಎಂಬ ಅರ್ಥವನ್ನು ಹೇಳಿ "ನಿರ್ಜುಳ ನಿಚುಳ ಮಾರುಂ" ಎಂಬ ಮಂಗರಾಜನ **ಅಭಿನವಾಭಿಧಾನದ** ವಾಕ್ಯವನ್ನು ಉದ್ಧರಿಸಿದ್ದಾರೆ. ಅದೇ ನಿಘಂಟಿನಲ್ಲಿ ನಿಚುಲ (ನಿಚುಳ) ಎಂಬ ಶಬ್ದಕ್ಕೆ ಕೊಟ್ಟಿರುವ ಅರ್ಥ, ವಿವರಣೆಗಳು ಇಂತಿವೆ :

೧. ಒಂದು ಬಗೆಯ ಸಸ್ಯ ; ಹಬಸೆಗಿಡ : "ವಂಜುಲಃ, ನಿಚುಲಃ—ಈ ೨ ಹಬಸೇಗಿಡದ ಪೆಸರ್" ಹಲಾಯುಧನ **ಅಭಿಧಾನ ರತ್ನಮಾಲೆಯ ಕನ್ನಡ ಟೀಕೆ** 32–42 ;

೨. ಒಂದು ಬಗೆಯ ಮರ : ನೀರು ಹಲಸು ;

೩. ಒಂದು ಬಗೆಯ ಕಣಿಗಿಲೆ ಮರ ; ತೊರೆಗಣಿಗಿಲೆ ; (ನಾಚಿರಾಜೀಯದ ಹಸ್ತಪ್ರತಿ)

೪. (ಒಳ ಅಂಗಿಯ ಮೇಲೆ ತೊಡುವ) ಮೇಲಿನ ಅಂಗಿ, ಕವಚ ;

ನಿಚುಳ :— ೧. "ನಿರ್ಜುಳ ನಿಚುಳ (ಪಾಠಾಂತರ–ನಿಚುಲ) ಮಾರುಂ (ಮಂಗರಾಜನ ಅಭಿನವಾಭಿಧಾನ 34–10)

೨. "ನಿಚುಳಃ, ಅಂಬುಜಃ, ಇಜ್ಜಲಃ—2 **ಗನ್ನೇರಳೇಗಿಡದ** ಹೆಸರುಗಳು—ಇದನ್ನು **ನೀರುಹಲಸಿನಗಿಡ** ವೆನ್ನುವರು" (**ಸಟೀಕ ಅಮರಕೋಶವು**—ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ)

ಶಾರ್ಙಧರ ಪದ್ಧತಿಯಲ್ಲಿ "ನಿಚುಲನಿಕುಂಜ"ವೆಂಬ ಪ್ರಯೋಗವಿದೆ[8]. ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ನಿಕುಂಜ' ಶಬ್ದಕ್ಕೆ ಪೊದೆ, ಮೆಳೆ, ಹೊದರು, ಬಳ್ಳಿಮಾಡ, ಲತಾಗೃಹ ಎಂಬರ್ಥಗಳನ್ನು ಹೇಳಿ, ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಸಟೀಕ ಅಮರ

---

8. ಇಹ ನಿಚುಲನಿಕುಂಜೇ ವಂಶಸಂಭಾರ ಭಾಜಿ ।
ಸ್ವಪಿಷಿ ಯದಿ ಮುಹೂರ್ತಂ ಪಶ್ಯಸಿ ಕ್ಷೇತ್ರಮೇತತ್ ॥
ಇತಿ ಪಥಿಕಮುಕಸ್ಮಾನ್ಮಾರ್ಗ ಏವೋಪವಿಷ್ಟಂ
ವದತಿ ತರುಣಕಾಂತಂ ಗೋಪಿಕಾ ಸಾಂಗಭಂಗಂ ॥
(ಸುಂದರನಾದ ತರುಣ ಪ್ರಯಾಣಿಕನು ಮಧ್ಯದಾರಿಯಲ್ಲಿಯೇ

ಕೋಶದ "ನಿಕುಂಜಃ, ಕುಂಜಃ—೨ ಲತಾದಿಪಿಹಿತೋದರೇ—ಬಳ್ಳಿಗಳು ರೆಂಬೆ ಮುಂತಾದವುಗಳು ಸುತ್ತಿಕೊಂಡು ಮನೆಯಹಾಗಿರುವ ಜೇಲಿ, ಲತಾಗೃಹ" ಎಂಬ ಭಾಗವನ್ನು ಕೊಟ್ಟಿದ್ದಾರೆ. ಇದರಿಂದಲೂ 'ನಿಚುಲ'ವು ನೀರಿನ ಸಮೀಪದಲ್ಲಿ ಪೊದೆ ಯಾಗುವಂತೆ ಬೆಳೆಯುವ ಸಸ್ಯವೆಂದು ಹೇಳಿದಂತಾಯಿತು.

ಹೀಗೆ ಕನ್ನಡ ಕೋಶಕಾರರೂ "ನಿಚುಲ"ವು ಹಲಸು ಎಂದು ಹೇಳಿಲ್ಲ.

"ಆರಂಕುಸ ಮಿಟ್ಟೊಡಂ" ಎಂಬುದರ ಅರ್ಥವನ್ನು ವಿಚಾರಮಾಡುತ್ತಾ "ಅಂಕುಶ ದಿಂದ ತಿವಿಯುವ ಮಾತು ಯಾಕೆ? ಅರ್ಜುನನಿಗೆ ಅಂಕುಶದ ಭಯ ಯಾರಿಂದ?" ಎಂಬ ಪ್ರಶ್ನೆಗಳನ್ನು ಎತ್ತಿದ್ದಾರೆ ಜೋಶಿಯವರು. ಇಲ್ಲಿ 'ಅಂಕುಸ'ಕ್ಕೆ ಆಯುಧವೆಂದು ಪದಶಃ ಅರ್ಥಮಾಡದೆ, "ಅಂಕುಸವಿಡು" ಎಂಬುದಕ್ಕೆ ಲಾಕ್ಷಣಿಕವಾಗಿ ಅಡ್ಡಿಮಾಡು ಎಂದು ಅರ್ಥಮಾಡುವುದು ಸೂಕ್ತ. ಹಲಸಿನಮರ ಅಂಕುಸವಿಡುವುದೆಂದರೇನು ಎಂಬ ಪ್ರಶ್ನೆಯನ್ನೆತ್ತಿ, ಹಲಸಿನ ಹೂವು ಇಲ್ಲವೆ ಹೀಚನ್ನು ಅಂಕುಸವೆನ್ನಬಹುದೆ ? ಎಂದಾಗ, ಅವರೂ ಲಾಕ್ಷಣಿಕ ಅರ್ಥವನ್ನೇ ಮಾಡಿದ್ದಾರಷ್ಟೆ ! ಅರ್ಜುನ, ಅರಿಕೇಸರಿಗಳಿಗೆ ಅಭೇದ ವನ್ನು ಕಲ್ಪಿಸಿದ್ದಾನೆ ಪಂಪ. ರಾಜನು, ಮಂತ್ರಿಗಳು, ಸಾಮಂತರಾಜರು, ಪರದೇಶಗಳ ರಾಜದೂತರು (ambassadors) ಮುಂತಾದ ಪ್ರಮುಖರೊಡನೆ ಮಂತ್ರಾಲೋಚ ನೆಯೇ ಮೊದಲಾದ ಕಾರ್ಯಗಳಲ್ಲಿ ತೊಡಗಿರುವಾಗ, ಇತರ ಕಡೆಗೆ ಗಮನಹರಿಸಲು ಆ ಪ್ರಮುಖರೇ ಅಡ್ಡಿಯಾಗಬಹುದಷ್ಟೆ ? ಹಾಗಾದಾಗಲೂ, ತೆಂಕಣಗಾಳಿ ಸೋಂಕಿ ದೊಡೆ, ಒಳ್ನುಡಿಗೇಳ್ದೊಡೆ....ಅವನ ಮನಸ್ಸು ಅಡ್ಡಿಯನ್ನು ಮೀರಿ ಬನವಾಸಿ ದೇಶ ವನ್ನು ನೆನೆಯುವುದೆಂದು ಅಭಿಪ್ರಾಯ.

೨

ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀವೃತ್ತಿಂ ಸಪತ್ನೀ ಜನೇ ।
ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾ ಸ್ಮ ಪ್ರತೀಪಂಗಮಃ ॥
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ ।
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ ॥

ಎಂಬ 'ಪದ್ಯದ ವಾಮಾಃ ಕುಲಸ್ಯಾಧಯಃ' ಎಂದು ಮುಗಿಯುವ ಭಾಗಕ್ಕೆ 'ಪಂಡಿತರು ಹೇಳಿರುವ ಅರ್ಥ ಸಮಂಜಸವಲ್ಲವೆನಿಸುತ್ತದೆ". ಏಕೆಂದರೆ ಆ ಶ್ಲೋಕದ ಮಾತುಗಳು ಹಿತವಚನಗಳೇ ಹೊರತು ಆದೇಶಗಳಲ್ಲ. ಅಂತಹ ಸಂದರ್ಭದಲ್ಲಿ ಕಣ್ವ

ಅಕಸ್ಮಾತ್ ಕುಳಿತಿರುವುದನ್ನು ನೋಡಿದ ಗೊಲ್ಲರ ತರುಣಿ "ಇಲ್ಲಿ ಬಿದಿರುಮೆಳೆಗೆ ಹೊಂದಿಕೊಂಡಿರುವ ನಿಚುಲದ ಬಳ್ಳಿಮಾಡದಲ್ಲಿ ಮುಹೂರ್ತಕಾಲ ವಿಶ್ರಾಂತಿ ಪಡೆದರೆ ಈ 'ಕ್ಷೇತ್ರ'ವನ್ನು ನೋಡುವೆ" ಎಂದು, ಅಂಗಚೇಷ್ಟೆ ಮಾಡುತ್ತಾ ನುಡಿದಳು).

ಶಾರ್ಙಧರ ಪದ್ಧತಿ, ಚೌಖಂಬಾ ಸಂಸ್ಕೃತ ಪ್ರತಿಷ್ಠಾನ. ದಿಲ್ಲೀ. 1987ರ ಪುನರ್ಮುದ್ರಣ, 3918ನೆಯ ಪದ್ಯ.

ರಂಥ ಮೃದುಹೃದಯದ ತಂದೆ ಅಪನಂಬಿಕೆಯನ್ನು ಸೂಚಿಸಲಾರರು" ಎಂದು ಹೇಳಿ "ಕೋಮಲೆಯರಾದ ಯುವತಿಯರು ಗೃಹಿಣೀಪದವನ್ನು ಪಡೆದು(ಅದಕ್ಕೆ ಅವಶ್ಯಕವಾದ ಸ್ಥೈರ್ಯವನ್ನೂ **ಕೆಲಮಟ್ಟಿನ ಕಾಠಿನ್ಯವನ್ನು** ರೂಢಿಸಿಕೊಂಡು) ಒಂದು ಕಾಲಕ್ಕೆ ಆಧಾರಭೂಮಿಯಾಗುತ್ತಾರೆ" ಎನ್ನುತ್ತಾರೆ ಲೇಖಕರು, ಈ ಕೆಲಸವನ್ನು ಕೋಮಲೆ ಯರು ಮಾತ್ರವಲ್ಲ, ಎಲ್ಲ ತಾಯಿಯರೂ ಮಾಡುತ್ತಾರೆ.

ಶಕುಂತಲೆ ಋಷ್ಯಾಶ್ರಮದಲ್ಲಿನ ಸೌಮ್ಯ ವಾತಾವರಣದಲ್ಲಿ ಬೆಳೆದವಳು. ಆಶ್ರಮ ವಾಸಿಗಳ ಸಾಹಚರ್ಯದಲ್ಲಿಯೇ ಬೆಳೆದ ಅವಳಿಗೆ, ಆಶ್ರಮದ ಹೊರಗಿನ, ಅದರಲ್ಲೂ ಅರಮನೆಯ, ವಾತಾವರಣ ಹೇಗಿರಬಹುದೆಂದು ಏನೇನೂ ತಿಳಿಯದು. ಅಲ್ಲಿ ಸಪತ್ನೀ ಜನರಿದ್ದಾರೆ, ಏನು ತೊಂದರೆಯಾದೀತೋ ಎಂದು ಅವಳನ್ನು ಸಾಕಿದ ತಂದೆ ಆತಂಕ ಪಡುವುದು ಸಹಜ. ಆದುದರಿಂದ ರಾಜನ, ಸಪತ್ನಿಯರ ಮತ್ತು ಪರಿಜನರೊಡನೆ ಹೇಗೆ ನಡೆಯಬೇಕೆಂದು ಹೇಳಿ, ಹಾಗೆ ನಡೆದವರು ಮಾತ್ರ ಗೃಹಿಣೀಪದವನ್ನು ಹೊಂದುತ್ತಾರೆ; ಇಲ್ಲದಿದ್ದರೆ ಕುಲಕ್ಕೆ ಕೊರಗನ್ನು ಉಂಟುಮಾಡುತ್ತಾರೆ ಎಂದು ಮಗ ಳನ್ನು ಎಚ್ಚರಿಸುವುದೂ ಸಹಜವೇ. ಇದರಿಂದ ಅವಳ ನಡತೆಯ ವಿಷಯವಾಗಿ ಅಪ ನಂಬಿಕೆಯನ್ನು ಸೂಚಿಸಿದಂತಾಗದು. ಆದುದರಿಂದ ಇಲ್ಲಿ 'ವಾಮ' ಶಬ್ದಕ್ಕೆ "ಪ್ರತೀ ಪದರ್ಶಿನೀ" ಎಂಬ ಅರ್ಥವೇ ಸೂಕ್ತ. ಕೋಮಲೆ ಎಂಬ ಅರ್ಥ ಈ ಸಂದರ್ಭಕ್ಕೆ ಹೊಂದುವುದಿಲ್ಲ.

'ಆಧಿ ಎಂದರೆ ಮಾನಸಿಕ ವ್ಯಥೆ. (ವ್ಯಾಧಿ ಶಾರೀರಿಕ ವ್ಯಥೆ) ಆಪ್ಟೆಯವರು ತಮ್ಮ ಕೋಶದಲ್ಲಿ ಈ ಅರ್ಥವನ್ನು ಕೊಟ್ಟ ಮೇಲೆ 'a bane, curse' (ವ್ಯಥೆ, ಶಾಪ) ಎಂಬ ಅರ್ಥಗಳನ್ನೂ ಹೇಳಿ ಮೇಲಿನ ಪದ್ಯದ ಕೊನೆಯ ಪಾದವನ್ನೇ ಈ ಅರ್ಥ ಗಳಿಗೆ ಉದಾಹರಣೆಯಾದ ಪ್ರಯೋಗವಾಗಿ ಕೊಟ್ಟಿದ್ದಾರೆ. ಮುಂದೆ 'a place a residence' (ಸ್ಥಾನ, ವಾಸಸ್ಥಾನ) ಎಂಬರ್ಥಗಳಿವೆ. ಇತರ ಅನೇಕ ಅರ್ಥ ಗಳನ್ನು ಕೊಟ್ಟಿದ್ದರೂ, "ತಳಹದಿ" ಅವುಗಳಲ್ಲೊಂದಲ್ಲ. ಈ ಅರ್ಥದಲ್ಲಿ 'ಆಧಿ' ಶಬ್ದದ ಪ್ರಯೋಗ ಕಂಡುಬಂದಂತಿಲ್ಲ.

ಈ ಕಾರಣಗಳಿಂದ, ಇದುವರೆಗೆ ವಿದ್ವಾಂಸರು ಹೇಳಿರುವ ಅರ್ಥ ಅಸಮಂಜಸವಲ್ಲ.

೩

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ ।
ಸರಸ್ವತೀ ಶ್ರುತಿಮಹತಾಂ ಮಹೀಯತಾಂ ॥
ಮಮಾಪಿ ಚ ಕ್ಷಪಯತು ನೀಲಲೋಹಿತಃ ।
ಪುನರ್ಭವಂ ಪರಿಗತಶಕ್ತಿರಾತ್ಮಭೂಃ ॥

ಈ ಭರತವಾಕ್ಯದಲ್ಲಿ, ಪೂರ್ವಾರ್ಧದಲ್ಲಿ ಶುಭಾಶಂಸನಮಾಡಿದಮೇಲೆ, ಉತ್ತರಾ ರ್ಧದಲ್ಲಿ "ನೀಲಲೋಹಿತಃ ಮಮ ಪುನರ್ಭವಂ ಕ್ಷಪಯತು" (ನೀಲಲೋಹಿತನಾದ ಶಿವನು ನನ್ನ ಪುನರ್ಜನ್ಮವನ್ನು ನಾಶಮಾಡಲಿ) ಎಂದು ಪ್ರಾರ್ಥಿಸುತ್ತಾನೆ ಕಾಳಿದಾಸ.

'ಕ್ಷಪಯತು' ಶಬ್ದ 'ಕ್ಷಿ' ಧಾತುವಿನ ಣಿಜಂತರೂಪ. ಆಪ್ಟೆಯವರ ಶಬ್ದ ಕೋಶದಲ್ಲಿ ಈ ಶಬ್ದದ ಅಡಿಯಲ್ಲಿ "to destroy, remove, put an end to" ಎಂಬ ಅರ್ಥಗಳನ್ನೂ, ಪ್ರಯೋಗಕ್ಕೆ ನಿದರ್ಶನವಾಗಿ ಮೇಲಿನ ಶ್ಲೋಕದ ಉತ್ತರಾರ್ಧವನ್ನೂ ಕೊಟ್ಟಿದೆ. ಕವಿ ಪುನರ್ಜನ್ಮದ ನಾಶ ಎಂದರೆ ಮೋಕ್ಷವನ್ನು ಕೊಡೆಂದು ಪ್ರಾರ್ಥಿಸುವುದು ಸಹಜ, **ಕ್ರಮವಾಗಿ** ಜನನ ಮರಣ ಚಕ್ರವನ್ನು ನಿಲ್ಲಿಸು ಎಂದು ಕೇಳಿಕೊಳ್ಳುವುದು ಅಸಂಭಾವ್ಯ. ತಿರುಗುತ್ತಿರುವ ಚಕ್ರಕ್ಕೆ ಹೆದ್ದನೆ (brake) ಹಾಕಿದರೆ, ಅದು ಗಕ್ಕನೆ ನಿಲ್ಲುವುದಷ್ಟೆ ! 'ಪರಿಭ್ರಮ' ಶಬ್ದಕ್ಕೆ ಸುತ್ತುವುದು (wandering) ಎಂಬ ಅರ್ಥವಿದೆ. ಇದನ್ನು ಎಳೆದು, ಸಂಸಾರಚಕ್ರಕ್ಕೆ ಅನ್ವಯಿಸಿ, 'ಪುನರ್ಭವ' ಶಬ್ದಕ್ಕೆ ಬದಲಾಗಿ 'ಪರಿಭ್ರಮ' ಶಬ್ದವಿರಬೇಕೆನ್ನುವ ಆವಶ್ಯಕತೆಯೇನೂ ಕಂಡುಬರುವುದಿಲ್ಲ. ಜೋಶಿಯವರೇ ಶಾಕುಂತಲದ ಯಾವ ಮುದ್ರಣದಲ್ಲಿಯೂ 'ಪರಿಭ್ರಮ' ಶಬ್ದ ಕಂಡುಬಂದಿಲ್ಲವೆಂದೂ, "ಅಧ್ಯಾಪಕರಾರೋ ಹಾಗೆ ಅದನ್ನು ನುಡಿದಿರಬಹುದು" ಎಂದೂ ಹೇಳಿರುವುದರಿಂದ, ಮನಸ್ಸಿಗೆ ಹಿಡಿಸಲಿಲ್ಲವೆಂಬ ಕಾರಣಕ್ಕಾಗಿ, ಸರಿಯಾದ ಆಧಾರವಿಲ್ಲದೆ ಪಾಠವನ್ನು ಬದಲಾಯಿಸುವುದು ಉಚಿತವಲ್ಲ.

---

9. 'ಕ್ಷಪಾ' ಶಬ್ದಕ್ಕೂ ಚಂದ್ರನ ಪ್ರಕಾಶ ಕ್ರಮವಾಗಿ ಬೆಳೆದು ಇಳಿಯುವುದಕ್ಕೂ, ಸಂಬಂಧವಿಲ್ಲ. ಕೋಶಕಾರರು (ಕ್ಷೀರಸ್ವಾಮೀ, ಆಪ್ಟೆ) ಈ ಶಬ್ದಕ್ಕೆ ಕ್ಷಪಯತಿ ಚೇಷ್ಟಾಂ' (ಚಟುವಟಿಕೆಯನ್ನು ನಿಲ್ಲಿಸುತ್ತದೆ ಅಥವಾ ಕಡಮೆ ಮಾಡುತ್ತದೆ) ಎಂಬ ನಿಷ್ಪತ್ತಿಯನ್ನು ಕೊಟ್ಟಿದ್ದಾರೆ. ಕ್ಷಪಾ= ರಾತ್ರಿ ; ಅದರ ನಾಥ ಕ್ಷಪಾನಾಥ= ಚಂದ್ರ.

"ಸಮಸ್ಯಾಪೂರಣ"

ಜಸಮೆಂಬುದು ಕೃತಿಶೀಲನ
ಬೆಸಗೊಂಡೊಡನಾಡಿ ಬರ್ಪುದೆಂಬುದು ನಿರುತಂ
ಜಸಕಾಗಿಯೆ ಕೃತಿಗೈವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ

—ಡಾ॥ ಉಪ್ಪಂಗಲ ರಾಮಭಟ್

ಶ್ರೀಮಾನ್ ರಂಗನಾಥ ಶರ್ಮರ "ಅಭಿಪ್ರಾಯಕ್ಕೆ" ಒಂದು ಪ್ರತಿಕ್ರಿಯೆ

ಸೇಡಿಯಾಪು ಕೃಷ್ಣಭಟ್ಟ

"ವಿ.ಸೀ. ಸಂಪದ" ಎಂಬ ಹೆಸರಿನ ಗ್ರಂಥಮಾಲೆಯ ಸಂಪಾದಕರ ಅಪೇಕ್ಷೆಯಂತೆ "ಗಮಕ ಸಮಾಸ"ದ ಕುರಿತಾಗಿ ನಾನೊಂದು ಲೇಖನವನ್ನು ಬರೆದಿದ್ದೆ. ಅದು ಸಣ್ಣದೊಂದು ಪುಸ್ತಕದ ರೂಪದಲ್ಲಿ ಪ್ರಕಟವಾಗಿದೆ. ಮತ್ತೆ ಅದು "ವಿಚಾರ ಪ್ರಪಂಚ" ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ನನ್ನ ಲೇಖನಗಳ ಒಂದು ಸಮುಚ್ಚಯದಲ್ಲಿಯೂ ಪ್ರಕಾಶಿತವಾಗಿದೆ. ಅದರಲ್ಲಿ ನಾನು ಪ್ರತಿಪಾದಿಸಿದ ವಿಷಯಗಳೊಳಗೆ ಕೆಲವನ್ನು ವಿದ್ವಾನ್ ಶ್ರೀ ರಂಗನಾಥ ಶರ್ಮರು ಆಕ್ಷೇಪಿಸಿ 'ಕರ್ನಾಟಕ ಲೋಚನ'ದ 1992ನೇ ಜೂನ್ ತಿಂಗಳ ಸಂಚಿಕೆಯಲ್ಲಿ ಒಂದು ಲೇಖನವನ್ನು ಪ್ರಕಾಶಪಡಿಸಿರುವುದನ್ನು ಮಿತ್ರರೊಬ್ಬರು ನನಗೆ ಓದಿ ಹೇಳಿದರು. ಆ ಆಕ್ಷೇಪಗಳಲ್ಲಿ ಮುಖ್ಯವಾದವುಗಳಿಗೆ ಯಥಾಮತಿಯಾಗಿ ಸಮಾಧಾನವನ್ನು ಹೇಳುವ ಪ್ರಯತ್ನವನ್ನು ಇಲ್ಲಿ ಮಾಡುತ್ತಿದ್ದೇನೆ.

1. ಪೂರ್ವೋಕ್ತವಾದ ನನ್ನ ಲೇಖನದಲ್ಲಿ ನಾನು ಹೇಳಿದ ಮಾತುಗಳು ಹೀಗಿವೆ.

"ಸಂಸ್ಕೃತ ಭಾಷೆಯ ಷಷ್ಠ್ಯಂತ ನಾಮಪದಕ್ಕೂ ಕನ್ನಡದ ಷಷ್ಠ್ಯಂತ ನಾಮಪದಕ್ಕೂ ಮುಖ್ಯವಾದುದೊಂದು ಭೇದವಿದೆ. ಸಂಸ್ಕೃತ ಷಷ್ಠ್ಯಂತ ಪದವು ಅದಕ್ಕೆ ಸಂಬಂಧಿಸಿದ ನಾಮಪದದ ಹಿಂದೆ ಇದ್ದರೂ ಮುಂದೆ ಇದ್ದರೂ ಸಮಾನವಾದ ಅರ್ಥವೇ ಅಲ್ಲಿ ಪ್ರಕಟವಾಗುತ್ತದೆ. ಉದಾಹರಣೆ : 'ಇದಂ ಮಮ ಪುಸ್ತಕಂ' (ಇದು ನನ್ನ ಪುಸ್ತಕ) ಈ ವಾಕ್ಯವನ್ನು 'ಇದಂ ಪುಸ್ತಕಂ ಮಮ' ಎಂದು ರೂಪಿಸಿದಾಗಲೂ ವಾಕ್ಯವು ಕೆಡುವುದಿಲ್ಲ. ಆದರೆ 'ಇದಂ ಪುಸ್ತಕಂ ಮಮ' ಎಂಬ ವಾಕ್ಯವನ್ನು ಪದಗಳ ಅನುಕ್ರಮದಂತೆ ಕನ್ನಡದಲ್ಲಿ ಭಾಷಾಂತರಿಸಿದರೆ ಅದು 'ಇದು ಪುಸ್ತಕ ನನ್ನ' ಎಂದಾಗಿ ಅರ್ಥಹೀನವಾಗುತ್ತದೆ. ಇದು ಅರ್ಥಹೀನವಾಗದಿರಬೇಕಾದರೆ 'ಈ ಪುಸ್ತಕ ನನ್ನದು' ಎಂದು ಭಾಷಾಂತರಿಸಬೇಕಾಗುತ್ತದೆ. ಹೀಗಾಗಲು ಕಾರಣವೇನೆಂದರೆ, ನಾವು ಕನ್ನಡದಲ್ಲಿ ಪ್ರಯೋಗಿಸುವ 'ನನ್ನ' ಮತ್ತು 'ನನ್ನದು' ಎಂಬ ಎರಡು ಅರ್ಥಗಳನ್ನೂ ಸಂಸ್ಕೃತದ 'ಮಮ' ಎಂಬ ಒಂದೇ ಪದರೂಪವು (ಕೆಲವು ವೇಳೆ) ತಿಳಿಸಲು ಸಮರ್ಥವಾಗಿರುವುದಾಗಿದೆ. ಆದರೆ ಕನ್ನಡದ 'ನನ್ನ' ಎಂಬ ಷಷ್ಠ್ಯಂತ ಪದವು ಸಂಬಂಧಿತ ಪದಕ್ಕಿಂತ ಹಿಂದೆಯೇ ಯಾವಾಗಲೂ ಇರಬೇಕಾಗುತ್ತದೆ. ಅದನ್ನು ಸಂಬಂಧಿತ ಪದದಿಂದ ಅನಂತರ ಪ್ರಯೋಗಿಸಬೇಕಾಗಿದ್ದರೆ 'ನನ್ನ' ಎಂಬ ಷಷ್ಠ್ಯಂತ ಪದವನ್ನು

ಪ್ರಕೃತಿವತ್ ಸ್ವೀಕರಿಸಿ ಲಿಂಗವಚನ ವಿಭಕ್ತಿ ಸೂಚಕವಾದ ಪ್ರತ್ಯಯವನ್ನು ಸೇರಿಸಬೇಕಾಗುತ್ತದೆ.

ನನ್ನೀ ಅಭಿಮತವನ್ನು ಆಕ್ಷೇಪಿಸಿ ಶ್ರೀಮಾನ್ ಶರ್ಮರು "ಈ ಮಾತು ಸರಿಯಲ್ಲವೆಂದು ನನ್ನ ಅಭಿಪ್ರಾಯ" ಎನ್ನುತ್ತಾರೆ. ಅವರ ಮಾತು ಹೀಗಿದೆ–" 'ಮಮ' ಎಂಬುದು 'ನನ್ನದು' ಎಂಬ ಅರ್ಥವನ್ನು ಸೂಚಿಸಲು ಸಮರ್ಥವಲ್ಲ. ಆಗ 'ಮದೀಯಂ' ಎಂದೇ ಹೇಳಬೇಕು"[1].

ನನ್ನ ವಿಜ್ಞಾಪನೆ ಏನೆಂದರೆ 'ಮಮ' ಎಂಬುದಕ್ಕೆ 'ನನ್ನದು' ಎಂಬರ್ಥವಿರುವ ಪೂರ್ವಪ್ರಯೋಗಗಳು ಸಂಸ್ಕೃತದಲ್ಲಿ ಇವೆ ಎಂದಾಗಿದೆ. ಉದಾಹರಣೆ : ಹೋಮದಾನಾದಿ ಕ್ರಿಯಾವಿಶೇಷಗಳಲ್ಲಿ ಉಚ್ಚರಿಸಲ್ಪಡುವ 'ನ ಮಮ' ಎಂಬ ಉಕ್ತಿಯಲ್ಲಿ 'ಮಮ' ಎಂಬ ಶಬ್ದವು 'ನನ್ನ' ಎಂಬ ಅರ್ಥವನ್ನು ಕೊಡುತ್ತದೆಯೋ ಅಥವಾ 'ನನ್ನದು' ಎಂಬರ್ಥವನ್ನು ಕೊಡುತ್ತದೆಯೋ ? "ಇದಂ ನ ಮಮ" ಎಂಬುದನ್ನು 'ಇದು ನನ್ನ ಅಲ್ಲ' ಅಥವಾ 'ಇದು ಅಲ್ಲ ನನ್ನ' ಎಂದು ಭಾಷಾಂತರಿಸಿದರೆ ಅದು ಕನ್ನಡವೆನಿಸಿಕೊಂಡೀತೇ? 'ಇದಂ ನ ಮಮ' ಎಂಬುದನ್ನು 'ಇದು ನನ್ನದಲ್ಲ' ಎಂದು ಭಾಷಾಂತರಿಸಿದರೆ ಮಾತ್ರ ಅದು ಕನ್ನಡವೆಂದಾದೀತಲ್ಲವೇ ? ಹಾಗಾದರೆ ಈ ಸಂದರ್ಭದಲ್ಲಿ ಬರುವ 'ಮಮ' ಎಂಬ ಶಬ್ದವು 'ನನ್ನದು' ಎಂಬರ್ಥವನ್ನೇ ಕೊಡುತ್ತದೆಂಬುದರಲ್ಲಿ ಸಂದೇಹವುಂಟೇ ?

ಶ್ರೀ ಶಂಕರ ಭಗವತ್ಪಾದಾಚಾರ್ಯರ ವೇದಾಂತ ಭಾಷ್ಯದ ಆರಂಭ ಭಾಗವಾದ 'ಅಧ್ಯಾಸ ಭಾಷ್ಯ'ದಲ್ಲಿ "ಅಹಮಿದಂ ಮಮೇದಂ ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ" ಎಂಬ ವಾಕ್ಯವಿದೆ. ಇದರಲ್ಲಿರುವ "ಮಮೇದಂ" (ಮಮ+ಇದಂ) ಎಂಬುದಕ್ಕೆ 'ನನ್ನದು ಇದು' ಎಂದೇ ಅರ್ಥವೆಂಬುದೂ,'ನನ್ನ ಇದು'ಎಂದಲ್ಲವೆಂಬುದೂ ಸುಸ್ಪಷ್ಟವಲ್ಲವೇ ? ಹೀಗಿರುವಾಗ " 'ಮಮ' ಎಂಬುದು 'ನನ್ನದು' ಎಂಬರ್ಥವನ್ನು

1. ವಾಚಕರಲ್ಲಿ ನನ್ನದೊಂದು ಅರಿಕೆ :–ಸಂಸ್ಕೃತದಲ್ಲಿ 'ಮಮ' ಎಂದು ಪ್ರಯೋಗಿಸಬಹುದಾದ ಸಂದರ್ಭಗಳಲ್ಲಿ ಪದಗಳ ಅನುಕ್ರಮವನ್ನು ಬದಲಾಯಿಸದೆ ಕನ್ನಡದಲ್ಲಿ ಭಾಷಾಂತರಿಸುವಾಗ ಕೆಲವು ವೇಳೆ 'ನನ್ನ' ಎಂದಿಷ್ಟೇ ಹೇಳದೆ 'ನನ್ನದು' ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅದು ಕನ್ನಡ ವಾಕ್ಯವೆನಿಸಿಕೊಳ್ಳಲಾರದು ಎಂದಿಷ್ಟೇ ನಾನು ಹೇಳಿದ ಮಾತುಗಳ ಅಭಿಪ್ರಾಯವಾಗಿದೆ ಹೊರತು, ಕನ್ನಡದಲ್ಲಿ 'ನನ್ನದು' ಎಂಬ ಶಬ್ದರೂಪವನ್ನು ಪ್ರಯೋಗಿಸಬೇಕಾದ ವಾಕ್ಯವನ್ನು ಸಂಸ್ಕೃತಕ್ಕೆ ಯಥಾವತ್ತಾಗಿ ಭಾಷಾಂತರಿಸುವಾಗ 'ಮಮ' ಎಂದಿಷ್ಟೇ ಹೇಳಿದರೆ ಸಾಕೆಂಬುದು ನನ್ನ ಅಭಿಮತವಲ್ಲ. 'ನನ್ನದು' ಎಂಬುದನ್ನು ಯಥಾವತ್ತಾಗಿ ಸಂಸ್ಕೃತದಲ್ಲಿ ಹೇಳಬೇಕಾದರೆ 'ಮದೀಯಂ' ಎಂದು ಹೇಳಬೇಕೆಂಬ ತಥ್ಯದ ಅರಿವು ನನಗೆ ಇದೆ. ಶ್ರೀಮಾನ್ ಶರ್ಮರು ನನ್ನ ಮಾತುಗಳನ್ನು ಯಥಾವತ್ತಾಗಿ ತಿಳಿಯುವ ಪ್ರಯತ್ನವನ್ನು ಮಾಡದೆ ವೃಥಾ ವಾದಕ್ಕೆಡೆಮಾಡಿರುವುದು ಖೇದಾಸ್ಪದವೆಂದು ನಮ್ರತೆಯಿಂದ ವಿಜ್ಞಾಪಿಸುತ್ತೇನೆ.

ಸೂಚಿಸಲು ಸಮರ್ಥವಲ್ಲ" ಎಂಬ ಶ್ರೀಮಾನ್ ಶರ್ಮರ ಮಾತು ಸರಿಯಲ್ಲವೆಂದು ವಾಚ್ಯವಾಗಿ ಹೇಳಬೇಕಾದ ಅವಶ್ಯಕತೆ ಏನೂ ಇಲ್ಲ[2].

'ಮಮ' ಎಂಬುದು ಉತ್ತಮ ಪುರುಷ ಸರ್ವನಾಮ ಷಷ್ಠ್ಯಂತ ಏಕವಚನ; ಇದರಂತೆಯೇ 'ತವ'ಎಂಬುದು ಮಧ್ಯಮ ಪುರುಷ ಸರ್ವನಾಮ ಷಷ್ಠ್ಯಂತ ಏಕವಚನ, ಈ ಎರಡು ಶಬ್ದಗಳು ಬೇರೆ ಬೇರೆ ಅರ್ಥಗಳನ್ನು ಕೊಡುವಂಥವುಗಳಾದರೂ ಪ್ರಯೋಗ ದೃಷ್ಟಿಯಿಂದ ನೋಡಿದಾಗ ಇವು ಸಮಾನಧರ್ಮದವುಗಳೆಂಬುದು ಗೊತ್ತಾಗದಿರದು. ಆದುದರಿಂದ ಈ ಮೇಲೆ ತೋರಿಸಿದಂತೆ 'ಮಮ' ಎಂಬ ಶಬ್ದಕ್ಕೆ ಕೆಲವೆಡೆಗಳಲ್ಲಿ 'ನನ್ನದು' ಎಂಬರ್ಥವು ಬರುವಂತೆಯೇ 'ತವ' ಎಂಬ ಶಬ್ದಕ್ಕೆ ಕೆಲವೆಡೆಗಳಲ್ಲಿ 'ನಿನ್ನದು', 'ನಿನ್ನವನು' ಎಂಬರ್ಥವು ಕಂಡು ಬರುವ ಸಂದರ್ಭಗಳು ಸಂಸ್ಕೃತವಾಙ್ಮಯದಲ್ಲಿ ವಿಖ್ಯಾತರಾದ ಪೂರ್ವ ಕವಿಗಳ ಪ್ರಯೋಗಗಳಿಂದ ತಿಳಿದುಬರುತ್ತದೆ. ಅವುಗಳೊಳಗೆ ಒಂದೆರಡನ್ನು ಇಲ್ಲಿ ಉದಾಹರಿಸುತ್ತೇನೆ :–

ಶ್ರೀ ಶಂಕರಾಚಾರ್ಯರಿಂದ ರಚಿತವಾದುದೆಂದು ಪ್ರಸಿದ್ಧವಾಗಿರುದ 'ವಿಷ್ಣು ಷಟ್ಪದಿ' ಎಂಬ ಸ್ತೋತ್ರದ ಒಂದು ಪದ್ಯವು ಹೀಗಿದೆ :—

ಸತ್ಯಪಿ ಭೇದಾಪಗಮೇ.
ನಾಥ ತವಾಹಂ, ನ ಮಾಮಕೀನಸ್ತ್ವಂ ।
ಸಾಮುದ್ರೋ ಹಿ ತರಂಗಃ
ಕ್ವಚನ ಸಮುದ್ರೋ ನ ತಾರಂಗಃ ॥

ನಮಗಿಲ್ಲಿ ಪ್ರಸ್ತುತವಾಗಿರುವುದು ಈ ಪದ್ಯದ ಎರಡನೆಯ ಪಾದವಾಗಿದೆ. ಇದು ಪದಶಃ ಭಾಷಾಂತರಿಸಲ್ಪಟ್ಟಾಗ ಹೀಗಾಗುತ್ತದೆ :– ನಾಥ=ಒಡೆಯಾ!- ತವ=ನಿನ್ನ, ಅಹಂ=ನಾನು, ನ=ಅಲ್ಲ, ಮಾಮಕೀನಃ=ನನ್ನವನು, ತ್ವಂ=ನೀನು. ಈ ಪದ್ಯ ಭಾಗವು ಅನ್ವಯಾನುಸಾರವಾಗಿ ಬರೆಯಲ್ಪಟ್ಟಾಗ ಈ ಕೆಳಗಿನಂತಾಗುತ್ತದೆ :— 'ನಾಥ ! ಅಹಂ ತವ'=ಒಡೆಯಾ ! ನಾನು ನಿನ್ನ (ನಿನ್ನವನು); ತ್ವಂ ಮಾಮಕೀನಃ ನ'=ನೀನು ನನ್ನವನು ಅಲ್ಲ. ಇದನ್ನು ಪರಾಮರ್ಶಿಸುವಾಗ 'ತವ' ಎಂಬುದನ್ನು 'ನಿನ್ನ' ಎಂದು ಮಾತ್ರ ಭಾಷಾಂತರಿಸಿದರೆ ಈ ವಾಕ್ಯಕ್ಕೆ ಕನ್ನಡದಲ್ಲಿ (ಒಡೆಯಾ, ನಾನು ನಿನ್ನ) ಯಾವ ಅರ್ಥವೂ ಹೊಳೆಯಲಾರದೆಂಬುದು ಸುಸ್ಪಷ್ಟ. ಇಲ್ಲಿರುವ 'ತವ'

---

2 "The Philosophy of Sri Shankara in his own words" ಎಂದು ಇಂಗ್ಲಿಷ್‌ನಲ್ಲಿ ವಿವರಣೆಯನ್ನು ನೀಡಿರುವ, ಪ್ರೊ|| ಎಸ್. ಕೆ. ರಾಮಚಂದ್ರರಾವ್–ಇವರು ಕನ್ನಡದಲ್ಲಿ ರಚಿಸಿರುವ "ಶಂಕರವಾಣಿ" ಎಂಬ ಗ್ರಂಥದಲ್ಲಿ, ಈ ಮೇಲೆ ನಾನು ಉದಾಹರಿಸಿ ರುವ ಶ್ರೀ ಶಂಕರಾಚಾರ್ಯರ ವಾಕ್ಯವನ್ನು ಈ ಕೆಳಗಿನಂತೆ ಭಾಷಾಂತರಿಸಿರುತ್ತಾರೆ :— 'ನಾನು ಇದು' 'ನನ್ನದು ಇದು' ಎಂದು ಜನರು ವ್ಯವಹಾರ ಮಾಡುತ್ತಿರುವುದು ಸಹಜ ವಾಗಿಯೇ (ಎಂದರೆ ಸ್ವಾಭಾವಿಕವಾಗಿಯೇ) ಇದೆ". (ಶಂಕರವಾಣಿ, ಪುಟ : 37).

ಎಂಬುದನ್ನು 'ನಿನ್ನವನು' ಎಂದು ಭಾಷಾಂತರಿಸಿದರೆ ಮಾತ್ರ ವಿವಕ್ಷಿತಾರ್ಥವು ತಿಳಿದು ಬರುವುದು. ಈ ಪದ್ಯಭಾಗದಲ್ಲಿ ಮುಂದೆ ಮಾಮಕೀನಃ (ನಿನ್ನವನು) ಎಂದಿರುವುದರಿಂದ 'ನಾಥ ಅಹಂ ತವ' ಎಂಬ ಭಾಗದಲ್ಲಿ ಬಂದಿರುವ 'ತವ' ಎಂಬುದು ಕೇವಲ ನಿನ್ನ ಎಂಬಷ್ಟೇ ಅರ್ಥವನ್ನು ಕೊಡುವುದಾಗಿರದೆ, 'ತಾವಕೀನಃ (ನಿನ್ನವನು)' ಎಂಬರ್ಥವನ್ನೇ ತಿಳಿಸುವಂತಹದಾಗಿದೆ ಎಂಬುದರಲ್ಲಿ ಸಂದೇಹವಿರುವಂತಿಲ್ಲ. ಆದುದರಿಂದ ಹಿಂದೆ ಉದಾಹರಿಸಿದ 'ನ ಮಮ' ಎಂಬುದರಲ್ಲಿ 'ಮಮ' ಎಂಬುದರ ಅರ್ಥವು 'ನನ್ನದು' ಎಂದಾಗಿರುವಂತೆಯೇ ಉದಾಹೃತ ಪದ್ಯದಲ್ಲಿರುವ 'ತವ' ಎಂಬುದರ ಅರ್ಥವು 'ನಿನ್ನವನು' ಎಂದೇ ಆಗಿರುತ್ತದೆಂಬುದು ನಿಶ್ಚಯ.

ಇನ್ನೊಂದು ಉದಾಹರಣೆಯನ್ನು ನೋಡಿರಿ :—

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

(ಶ್ರೀಮದ್ವಾಲ್ಮೀಕಿ ರಾಮಾಯಣ, ಯುದ್ಧಕಾಂಡ : ಸರ್ಗ–18, ಶ್ಲೋಕ–33)

ಈ ಶ್ಲೋಕದ ಪೂರ್ವಾರ್ಧದಲ್ಲಿರುವ 'ತವಾಸ್ಮೀತಿಚ ಯಾಚತೇ' ಎಂಬುದು ನಮಗಿಲ್ಲಿ ಪ್ರಸ್ತುತವಾದ ಭಾಗ ; ಅದರೊಳಗೂ 'ತವಾಸ್ಮಿ' ಎಂಬುದು ಮಾತ್ರ ಪ್ರಸ್ತುತ ವಿಷಯ. (ಈ ಭಾಗದ ಪ್ರತಿಪದಾರ್ಥ ಹೀಗೆ :– ತವ=ನಿನ್ನ, ಅಸ್ಮಿ=ಆಗಿರುತ್ತೇನೆ, ಇತಿ ಚ=ಹೀಗೆಯೂ, ಯಾಚತೇ=ಬೇಡುವವನಿಗೆ, ಇಲ್ಲಿ 'ತವಾಸ್ಮಿ' ಎಂಬುದನ್ನು ಕನ್ನಡದಲ್ಲಿ ಹೇಗೆ ಭಾಷಾಂತರಿಸಬೇಕು ? 'ನಿನ್ನ ಆಗಿರುತ್ತೇನೆ' ಎಂದೋ, 'ನಿನ್ನವನಾಗಿರುತ್ತೇನೆ' ಎಂದೋ ? 'ನಿನ್ನ ಆಗಿರುತ್ತೇನೆ' ಎಂದು ಹೇಳಿದರೆ ಯಾವ ಅರ್ಥವೂ ಹೊಳೆಯುವುದಿಲ್ಲ. ಆದುದರಿಂದ (ನಾನು) 'ನಿನ್ನವನಾಗಿರುತ್ತೇನೆ'. (ನಿನ್ನವನು+ಆಗಿರುತ್ತೇನೆ) ಎಂದು ಭಾಷಾಂತರಿಸಿದರೆ ಮಾತ್ರ ಪ್ರಸ್ತುತಾರ್ಥವು ತಿಳಿದುಬರುತ್ತದೆ. ಹಾಗಾದರೆ 'ತವ' ಎಂಬುದು'ನಿನ್ನವನು' ಎಂಬರ್ಥವನ್ನು ಸಹ ಕೊಡುವ ಶಕ್ತಿಯುಳ್ಳದ್ದೆಂದು ತಿಳಿದುಬರುವುದಿಲ್ಲವೇ ? ಕನ್ನಡದ 'ನಿನ್ನ' ಎಂಬುದಕ್ಕೆ 'ನಿನ್ನವನು' ಎಂಬರ್ಥವನ್ನು ಕೊಡುವ ಶಕ್ತಿ ಇದೆಯೇ ? ಆದುದರಿಂದ 'ಗಮಕ ಸಮಾಸ'ವೆಂಬ ನನ್ನ ಲೇಖನದಲ್ಲಿ ನಾನು ಹೇಳಿರುವ, ನಾವು ಕನ್ನಡದಲ್ಲಿ ಪ್ರಯೋಗಿಸುವ 'ನನ್ನ' ಮತ್ತು 'ನನ್ನದು'ಎಂಬ ಎರಡು ಅರ್ಥಗಳನ್ನೂ ಸಂಸ್ಕೃತದ 'ಮಮ' ಎಂಬ ಒಂದೇ ಪದರೂಪವು (ಕೆಲವು ವೇಳೆ) ತಿಳಿಸಲು ಸಮರ್ಥವಾಗಿರುವುದಾಗಿದೆ" ಎಂಬ ಮಾತು ಸರಿಯೆಂದು ಸಿದ್ಧವಾಗುವುದಿಲ್ಲವೇ ? ವಿದ್ವಾನ್ ಶ್ರೀ ರಂಗನಾಥ ಶರ್ಮರು ವಾಲ್ಮೀಕಿ ರಾಮಾಯಣವನ್ನು ಕನ್ನಡಿಸಿರುವರೆಂದು ತಿಳಿದುಬರುತ್ತದೆ.

ಅದನ್ನು ನಾನು ಓದಿಲ್ಲ. ಅದರಲ್ಲಿ ಅವರು ಈ ಮೇಲೆ ಉದಾಹರಿಸಿದ ಶ್ಲೋಕದ ಪ್ರಸ್ತುತ ಭಾಗವನ್ನು-"(ನಾನು) ನಿನ್ನ ಆಗಿರುತ್ತೇನೆ" ಎಂದು ಖಂಡಿತವಾಗಿಯೂ ಭಾಷಾಂತರಿಸಿರಲಾರರೆಂದು ಹೇಳುವ ಸಾಹಸಮಾಡುತ್ತೇನೆ*,

2. "ಪಕ್ಷಿ ಎಂಬ ಮೂಲ ಪ್ರಾತಿಪದಿಕವಿರುವಂತೆ 'ಒಕ್ಕೆ' ಎಂಬ ಪ್ರಾತಿಪದಿಕ ಉಂಟೇನು ?" ಎಂದು ಶ್ರೀಮಾನ್ ಶರ್ಮರು ಕೇಳುತ್ತಿದ್ದಾರೆ. ನನ್ನ ಲೇಖನದ 8ನೇ ಟಿಪ್ಪಣಿಯ ('ವಿಚಾರ ಪ್ರಪಂಚ' ಪುಟ 287) ಮಾತುಗಳನ್ನು ಅವರು ಪರಾಮರ್ಶಿ ಸುತ್ತಿದ್ದರೆ ಈ ಶಂಕೆಯನ್ನು ಅವರು ಎತ್ತುತ್ತಿರಲಿಲ್ಲ. ['ಪಕ್ಷಿಯ ರೆಕ್ಕೆ' ಎಂಬುದೂ 'ಒಕ್ಕೆಯ ಭಾಷೆ' ಎಂಬುದೂ ಸಮಾನವೆಂಬ ಮಾತನ್ನು ಪ್ರಯೋಗಿಸಿದ್ದು ವ್ಯಾಕರಣ ವನ್ನರಿಯದ ಸಾಮಾನ್ಯಜನರ ಅಥವಾ ವಿದ್ಯಾರ್ಥಿಗಳ ದೃಷ್ಟಿಗೆ ಕಾಣುವ ಶಂಕಾರೂಪ ವಾಗಿದೆ ಹೊರತು ವ್ಯಾಕರಣ ದೃಷ್ಟಿಯಿಂದ ಅವು ಸಮಾನವೆಂದು ನಾನು ಹೇಳಿಲ್ಲ. ವ್ಯಾಕರಣಾನುಸಾರವಾಗಿ ವಿಚಾರಮಾಡಿದಾಗ 'ಒಕ್ಕೆಯ' ಮತ್ತು 'ಪಕ್ಷಿಯ'ಎಂಬ ವುಗಳು ಸ್ವಭಾವತಃ ಭಿನ್ನಗಳೆಂದು ಆ ಟಿಪ್ಪಣಿಯಲ್ಲಿ ಸೋದಾಹರಣವಾಗಿ ನಿರೂಪಿಸ ಲಾಗಿದೆ. (ಆ ಟಿಪ್ಪಣಿಯಲ್ಲಿ 'ಒಕ್ಕೆ'ಯೆಂಬ ಶಬ್ದರೂಪದ ಸಾಧರ್ಮ್ಯವುಳ್ಳ 'ಕರಿ' ಎಂಬುದನ್ನು ಬಳಸಲಾಗಿದೆ.) ಶ್ರೀಮಾನ್ ಶರ್ಮರು ಆ ಭಾಗವನ್ನು ಇನ್ನೊಮ್ಮೆ ಓದಿನೋಡಬೇಕಾಗಿ ನನ್ನ ವಿನಂತಿ.]

3. "ಪಂಪನ 'ನೆನೆಯದಿರಣ್ಣ' ಎಂಬ ಪದ್ಯದಲ್ಲಿ 'ಕರ್ಣನಳವಂಕದ, ಕರ್ಣನ ಚಾಗಮೆಂದು' ಎಂಬ ಸ್ಥಳದಲ್ಲಿ ಪೂರ್ವಾಪರಪದಗಳ ಅನ್ವಯವು 'ಅಂಕದ ಕರ್ಣನ ಅಳವು' ಎಂದಾಗಿದೆ ಹೊರತು ಮುಂದಿರುವ 'ಕರ್ಣನ ಚಾಗ' ಎಂಬುದಕ್ಕೆ 'ಅಂಕದ' ಎಂಬುದು (ಅಂಕಕಾಳಗ) ಅನ್ವಯಿಸುವಂತಹುದಲ್ಲ" ಎಂಬ ನನ್ನ ಮಾತನ್ನು ಆಕ್ಷೇಪಿಸಿ ಶ್ರೀಮಾನ್ ಶರ್ಮರು "ಆದರೆ ಅಂಕದ ಕರ್ಣ, ಕಲಿಪಾರ್ಥ-ಮುಂತಾದ ಶಬ್ದಗಳ ಒಂದು ಅನುಪೂರ್ವಿ ಕವಿಪರಂಪರೆಯಲ್ಲಿ ಬಂದಿದೆ. ಅದೊಂದು ಬಿರುದಿನಂತೆ ಕವಿಗಳು ಬಳಸುತ್ತಾರೆ. 'ಅಂಕದ ಕರ್ಣನ ಚಾಗ' ಎಂದು ಅನ್ವಯಿಸುವುದೇ ಸಮಂಜಸವೆಂದು ನನ್ನ ನಮ್ರವಾದ ಸೂಚನೆ" ಎಂದು ಹೇಳಿ ಅನಂತರ "ಅಳವು" ಕಾಳಗ ದಲ್ಲಿಯೇ ತೋರಬೇಕಾದದ್ದು, 'ಅಂಕದ' ಅನ್ನುವುದಕ್ಕೆ ಆಗ ಅರ್ಥಪುಷ್ಟಿಯಿಲ್ಲ" ಎನ್ನುತ್ತಾರೆ.

ಶ್ರೀಮಾನ್ ಶರ್ಮರ "ಸೂಚನೆ"ಗೆ ಸಮಾಧಾನ ಹೇಳುವ ಮೊದಲು ಈ ಮೇಲೆ ಉದ್ಧರಿಸಿದ ಅವರ 'ಅಳವು ಕಾಳಗದಲ್ಲಿಯೇ ತೋರಿಸಬೇಕಾದದ್ದು' ಎಂಬ ಮಾತಿಗೆ ಉತ್ತರ ಕೊಡುತ್ತೇನೆ : 'ಅಳವು' ಕಾಳಗದಲ್ಲಿಯೇ ತೋರಿಸಬೇಕಾದ ಸಾಮರ್ಥ್ಯವೇನೂ ಅಲ್ಲ. ಗಮಕ ಸಮಾಸವೆಂಬ ನನ್ನ ಲೇಖನದಲ್ಲಿಯೇ ಬೇರೆಡೆಯಲ್ಲಿ ಉದಾಹರಿಸಿದ ರುದ್ರಭಟ್ಟನ ಮಾತು ಹೀಗಿದೆ :-'ಅಳವಲ್ಲೀ ಸ್ತುತಿಯನ್ನ' (ಈ ಸ್ತುತಿ ಎನ್ನ ಅಳವು ಅಲ್ಲ.) ಇಲ್ಲಿ ರುದ್ರಭಟ್ಟನು ಸ್ತುತಿಸುವುದರಲ್ಲಿ ತನಗೆ ಸಾಮರ್ಥ್ಯವು ಸಾಲದೆನ್ನುವನೇ

* 'ನಾನು ನಿನ್ನವನು' ಎಂದೇ ಭಾಷಾಂತರಿಸಿರುತ್ತಾರೆ. (ಸಂ.) ಪುಟ : 126.

ಹೊರತು ಕಾಳಗದಲ್ಲಿ ತಾನು ಅಸಮರ್ಥನೆಂದು ಹೇಳಹೊರಟಿಲ್ಲ. 'ಅಳವು' ಎಂಬ ಶಬ್ದದ ಬೇರೆ ಬೇರೆ ಪ್ರಯೋಗಗಳನ್ನೆಲ್ಲ ಪರಾಮರ್ಶಿಸಿದರೆ ಅದು 'ಕಾಳಗದಲ್ಲಿಯೇ ತೋರಬೇಕಾದದ್ದು' ಎಂಬ ಅರ್ಥವು ಆ ಶಬ್ದಕ್ಕೆ ಎಲ್ಲಿಯೂ ಇಲ್ಲವೆಂಬುದು ಗೊತ್ತಾಗದಿರದು. ಇನ್ನು ಅವರ "ಸೂಚನೆ"ಗೆ ಸ್ವಲ್ಪ ವಿವರವಾಗಿಯೇ ಉತ್ತರ ಕೊಡಬೇಕಾಗುತ್ತದೆ :—

'ಅಂಕ' ಎಂಬ ಶಬ್ದಕ್ಕೆ ಎರಡು ಮೂಲಗಳು ಇವೆ : ಅವುಗಳೊಳಗೆ ಒಂದು ಸಂಸ್ಕೃತ, ಇನ್ನೊಂದು ಕನ್ನಡ. ಕಾಲಾಂತರದಲ್ಲಿ ಇವೆರಡೂ ಒಂದೇ ಮೂಲದವು ಎಂದು ಭಾವಿಸಲ್ಪಟ್ಟಿರುವುದು ಕಂಡುಬರುತ್ತದೆ. (ಈ ಕಾರಣದಿಂದ ಕೇಶಿರಾಜನು ಸಂಸ್ಕೃತವೆನಿಸಲೂಬಹುದಾದ, ಕನ್ನಡವೆನಿಸಲೂಬಹುದಾದ ಶಬ್ದಗಳ–ಎಂದರೆ ಅವನ ಪರಿಭಾಷೆಯಲ್ಲಿ ತತ್ಸಮಗಳ–ಪಟ್ಟಿಯಲ್ಲಿ ಈ ಶಬ್ದವನ್ನು ಸೇರಿಸಿರುತ್ತಾನೆ.) ಭರತನು ತನ್ನ 'ನಾಟ್ಯಶಾಸ್ತ್ರ'ದಲ್ಲಿ (ನಾಟಕಗಳ ಬೇರೆ ಬೇರೆ ಭಾಗಗಳನ್ನು ತಿಳಿಸುವ) 'ಅಂಕ' ಎಂಬ ಶಬ್ದದ ರೂಪನಿಷ್ಪತ್ತಿಯನ್ನು ಹೇಳದೆ "ಅಂಕ ಇತಿ ರೂಢಿಶಬ್ದಃ" ಎಂದಿಷ್ಟೇ ಹೇಳಿರುತ್ತಾನೆ. ಅವನು ಹೀಗೆ ಹೇಳಲು ಕಾರಣವೇನೆಂದರೆ, ನಾಟಕಗಳಲ್ಲಿ ಪ್ರಯುಕ್ತವಾಗುವ 'ಅಂಕ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಅನ್ವರ್ಥತೆ ಅವನಿಗೆ ಕಂಡುಬಾರದಿದ್ದುದಾಗಿದೆ. (ಮೂಲತಃ 'ಕಾಳಗ' ಎಂಬುದೇ ಅರ್ಥವಾಗಿರುವ 'ಅಂಕ' ಎಂಬ ಕನ್ನಡ ಶಬ್ದವು ನಾಟಕಗಳ ಭಾಗ ಎಂಬರ್ಥವನ್ನು ಸಂಸ್ಕೃತದಲ್ಲಿ ಏಕೆ ಮತ್ತು ಹೇಗೆ ಪಡೆಯಿತು ಎಂಬುದರ ಕೂಲಂಕಷ ವಿಚಾರವನ್ನು 'ಏಕಾಂಕ ನಾಟಕ' ಎಂಬ ನನ್ನ ಒಂದು ಲೇಖನದಲ್ಲಿ ಮಾಡಿರುತ್ತೇನೆ. ಆಸ್ತಕರು ಇದನ್ನು ಓದಿ ನೋಡಬೇಕು–'ವಿಚಾರ ಪ್ರಪಂಚ' ಪುಟ : 79–101). 'ಅಂಕ'ವೆಂಬ ಈ ಶಬ್ದವು ಕನ್ನಡ ಶಬ್ದವಾಗಿದ್ದು, ಸಂಸ್ಕೃತಕ್ಕೆ ಸಂಕ್ರಮಿಸಿದುದಾಗಿದೆ. ಈ ದೇಶ್ಯಮೂಲದ 'ಅಂಕ' ಎಂಬುದಕ್ಕೆ 'ಕಾಳಗ'ವೆಂಬುದು ಅರ್ಥ. ಈ ಅರ್ಥದ ಪ್ರಯೋಗವು ಕನ್ನಡದಲ್ಲಿ ಈಗಲೂ ಇದೆ. ಉದಾಹರಣೆ 'ಕೋಳಿಯ ಅಂಕ' (ಕೋಳಿಗಳ ಕಾಳಗ) ಸಂಸ್ಕೃತ ಮೂಲದ 'ಅಂಕ' ಎಂಬ ಶಬ್ದಕ್ಕೆ ಗುರುತು, ಹೆಸರು, ಬಿರುದು, ಅಂಕೆ (ಸಂಖ್ಯೆ), ಮಡಿಲು ಇತ್ಯಾದಿ ಹಲವು ಅರ್ಥಗಳು ಇವೆ. ಕನ್ನಡದ ಅಂಕ'ಕ್ಕೆ 'ಯುದ್ಧ'ವೆಂಬುದೇ ಅರ್ಥವಾಗಿದೆ ಎಂಬುದು ಪಂಪ ಭಾರತದಲ್ಲಿ ಬೇರೆಡೆಗಳಲ್ಲಿಯೂ ಕಂಡುಬರುತ್ತದೆ. ಉದಾಹರಣೆ : 'ಬಪ್ಪುವನೆಂಬ ಅಂಕಕಾರಂ'. ಇದು ಅರಿಕೇಸರಿಯಿಂದ ಸೋಲಿಸಲ್ಪಟ್ಟಿದ್ದ ಒಬ್ಬ ಮಹಾವೀರನ ಕುರಿತಾಗಿದೆ. ಕೀ.ಶೇ. ಪಂಡಿತ ತಿಮ್ಮಪ್ಪಯ್ಯನವರ ಅಭಿಪ್ರಾಯದಂತೆ ಬಪ್ಪುವನನ್ನು ಕರ್ಣನಲ್ಲಿ ಪಂಪನು ಸಮೀಕರಿಸಿದ್ದಾನೆಂದಾಗಿದೆ (ನಾಡೋಜ ಪಂಪ). ಇನ್ನು 'ಅಂಕದ ಕಲಿ'ಎಂಬ ಮಾತು ಬೇರೆ ಕಾವ್ಯಗಳಲ್ಲಿಯೂ ಕಂಡುಬರುತ್ತದೆ. ಆ ಸಂದರ್ಭಗಳಲ್ಲಿ ಅಂಕವೆಂದರೆ ಯುದ್ಧವೆಂದೇ ಅರ್ಥವಾಗಿದೆ. ಶ್ರೀಮಾನ್ ಶರ್ಮರು 'ಅಂಕ' ಎಂಬುದು ವಿಶೇಷಾರ್ಥವಿಲ್ಲದ ಒಂದು ಬಿರುದಿನ ರೂಪದಲ್ಲಿ ಪ್ರಯುಕ್ತವಾಗಿರುತ್ತದೆ

ಎನ್ನುತ್ತಾರೆ. ಆದರೆ ಆ ಸಂದರ್ಭಗಳಲ್ಲಿ ಬಳಸಲ್ಪಟ್ಟಿರುವ ‹ಅಂಕ' ಎಂಬುದು ಸಂಸ್ಕೃತ ಮೂಲದ ಶಬ್ದವಾಗಿದೆ ಹೊರತು, ಯುದ್ಧವೆಂಬರ್ಥವನ್ನು ಕೊಡುವ ಕನ್ನಡ ಮೂಲದ ‹ಅಂಕ'ವಲ್ಲ, ಶಶಾಂಕ, ವಿಕ್ರಮಾಂಕ, ರಾಘವಾಂಕ ಇತ್ಯಾದಿಗಳಲ್ಲಿ ಕಾಣುವ ‹ಅಂಕ' ಎಂಬುದು ಸಂಸ್ಕೃತಮೂಲ ಶಬ್ದ. ಆದರೆ ಅಂಕದಕಲಿ ಎಂಬಲ್ಲಿರುವ ‹ಅಂಕ' ಎಂಬುದಕ್ಕೆ ‹ಯುದ್ಧ'ವೆಂಬುದೇ ಅರ್ಥವಾಗಿದ್ದು ಅದು ಕನ್ನಡ ಮೂಲದ್ದಾಗಿದೆ. ಈ ಎರಡು ಬಗೆಯ ‹ಅಂಕ'ಗಳನ್ನೂ ಒಳಕೊಂಡಿರುವ ಕವಿ ರನ್ನನ ಪದ್ಯ ಒಂದನ್ನು ನೋಡಿರಿ :–

ಅಂಕದ ಕಲಿ ಕುರುವಂಶ ಶ
ಶಾಂಕನೆ ದುರ್ಯೋಧನಾಂಕನೆನೆ ನೆಗೞ್ದಿಯಶಃ
ಪಂಕದೊಳಮೀ ಸರೋವರ
ಪಂಕದೊಳಂ ನೀನೆ ನಿನ್ನನಿಂತರ್ದುವರೇ ॥

(“ಗದಾಯುದ್ಧ” 7–2)

ಈ ಪದ್ಯದಲ್ಲಿ ಕಂಡುಬರುವ ಮೂರು ‹ಅಂಕ'ಗಳೊಳಗೆ ಮೊದಲನೆಯದು ‹ಕಾಳಗ'ವೆಂಬರ್ಥದ ಕನ್ನಡ ಶಬ್ದ ; ಎರಡನೆಯದು ‹ಗುರುತು' ಎಂಬರ್ಥದ ಸಂಸ್ಕೃತ ಶಬ್ದ ; ಮೂರನೆಯದು ‹ಹೆಸರು' ಎಂಬರ್ಥದ ಸಂಸ್ಕೃತ ಶಬ್ದ.

ಇಲ್ಲಿ ನಾನು ಮಾಡಿರುವ ವಿವರಣೆಯ ಸಾರಾಂಶ :—‹ಅಳವು' ಎಂದರೆ 'ಸಾಮರ್ಥ್ಯ' ಎಂದಿಷ್ಟೇ ಅರ್ಥ ಹೊರತು 'ಯುದ್ಧದಲ್ಲಿ ತೋರಲ್ಪಡುವ ಸಾಮರ್ಥ್ಯ' ಎಂಬ ಅರ್ಥವಿಲ್ಲ. ಪಂಪನ ‹ಅಂಕಕಾರ' ಎಂಬ ಪ್ರಯೋಗದಿಂದ ‹ಅಂಕ'ವೆಂದರೆ ‹ಯುದ್ಧ'ವೆಂಬುದೇ ಅರ್ಥವೆಂಬುದು ಸುಸ್ಪಷ್ಟ. ಮತ್ತು ‹ಅಂಕಕಾರ' ಎಂಬಲ್ಲಿರುವ ‹ಅಂಕ' ಎಂಬುದಕ್ಕೆ 'ಬಿರುದು' ಎಂದು ಅರ್ಥಮಾಡಿದರೆ ‹ಅಂಕಕಾರ' ಎಂಬ ಪ್ರಯೋಗವೇ ನಿರರ್ಥಕವಾಗುತ್ತದೆ. (ಇದೂ ಅಲ್ಲದೆ ಕರ್ಣನು ಕಾಳಗದ ಮಧ್ಯದಲ್ಲಿಯೇ ಕವಚ ಕುಂಡಲಗಳನ್ನು ದಾನಮಾಡಿದನೆಂದು ಶ್ರೀಮಾನ್ ಶರ್ಮರು ಹೇಳುತ್ತಾರೆ. ಆದರೆ ಕರ್ಣನು ಕವಚ ಕುಂಡಲಗಳನ್ನು ಯುದ್ಧಕಾಲದಲ್ಲಿ ದಾನಮಾಡಿದ ಪ್ರಸ್ತಾಪವೇ ಪಂಪ ಭಾರತದಲ್ಲಿ ಇಲ್ಲ. ಆದುದರಿಂದ ಪಂಪನ ಕರ್ಣನಿಗೆ ಶ್ರೀ ಶರ್ಮರ ಮಾತು ಸರ್ವಥಾ ಅನ್ವಯಿಸುವಂತಿಲ್ಲ.) ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ‹ಅಂಕದ ಕರ್ಣನ ಚಾಗ' ಎಂಬ ಮಾತು ಸಮಂಜಸವಲ್ಲವೆಂಬುದರಲ್ಲಿ ಸಂದೇಹವಿಲ್ಲ. ಆದಕಾರಣ ಕರ್ಣನ ಅಂಕದ ಅಳವು ಎಂದೇ ಆ ನುಡಿಯ ಸಮಂಜಸವಾದ ಅನ್ವಯರೂಪವೆಂದು ತಿಳಿಯಬೇಕು.

4. ಸಂಖ್ಯಾಸಮಾಸಗಳ ವಿಷಯದಲ್ಲಿ ಕೇಶಿರಾಜನ ಅಭಿಪ್ರಾಯವು ಸಮಂಜಸ ವೆಂಬುದರಲ್ಲಿ ಸಂದೇಹವೇನೂ ಕಂಡುಬರಲಾರದು. ‹ಇಪ್ಪತ್ತನಾಲ್ಕು' ಎಂಬ ಸಂಖ್ಯಾ ವಾಚಕ ಶಬ್ದದ್ವಯಗಳ ಪೂರ್ವಪದದ ಕೊನೆಯ ಅಕಾರವು ಷಷ್ಠಿ ವಿಭಕ್ತಿಯ ಅಕಾರವೇ

ಹೊರತು ಬೇರೇನೂ ಅಲ್ಲ ಎಂಬುದನ್ನು 'ಸಾವಿರದ ನೂರು' ಇತ್ಯಾದಿ ಪದಪುಂಜಗಳು ನಿಸ್ಸಂದಿಗ್ಧವಾಗಿ ತೋರಿಸಿಕೊಡುತ್ತವೆ[3].

5. ಉಪಪದವೆಂಬ ಪದಭೇದವೊಂದನ್ನು ಸ್ವೀಕರಿಸಿದರೆ ಹಲವು ತೊಡಕುಗಳು ಬಾರದಿರಲಾರವು ಎಂದು ಶ್ರೀಮಾನ್ ಶರ್ಮರು ಹೇಳುತ್ತಾರೆ. ಆದರೆ ಈ ಆಕ್ಷೇಪವು ಈಗ ಅಪ್ರಸ್ತುತ. ಕನ್ನಡ ವಿದ್ವಾಂಸರೆಲ್ಲ ನಾನು ಮಂಡಿಸಿದ ಉಪಪದವೆಂಬ ಒಂದು ಪದಭೇದವನ್ನು ಸ್ವೀಕರಿಸಿದಾಗ ಮಾತ್ರ ಈ ತೊಡಕುಗಳ ಬಗೆಗೆ ವಿಚಾರಮಾಡಿದರೆ ಸಾಕು. ವ್ಯಾಕರಣದ ಯಾವುದೊಂದು ನಿಯಮಕ್ಕಾದರೂ ಅಷ್ಟಿಷ್ಟು ಅಪವಾದಗಳು ಇದ್ದೇ ಇರುತ್ತವೆ. ಮೇಧಾವಿಯಾದ ವೈಯಾಕರಣನು ಅಂಥವುಗಳನ್ನು ಗುರುತಿಸಿ ವಿದ್ವತ್ಸಮ್ಮತವಾದ ಪರಿಹಾರವನ್ನು ಹೇಳುವುದಕ್ಕೆ ಶಕ್ತನಾಗದಿರನು. ಪೂರ್ವಪದಾರ್ಥವು ಪ್ರಧಾನವಾಗಿರುವ ತತ್ಪುರುಷ ಸ್ವಭಾವದ ಕೆಲವು ಸಮಾಸಪದಗಳನ್ನು "ಪೂರ್ವಪದಾರ್ಥಪ್ರಧಾನೋ ಅವ್ಯಯೀಭಾವಃ" ಎಂಬ ಸಂಸ್ಕೃತ ವೈಯಾಕರಣರ ಮಾತನ್ನು ಕಣ್ಣು ಮುಚ್ಚಿ ಅನುಸರಿಸಿ,ಸಂಸ್ಕೃತದ ಅವ್ಯಯೀಭಾವ ಸಮಾಸದ ಲಕ್ಷಣವೇನೂ ಇಲ್ಲದಿರುವ ಕೆಲವು ಕನ್ನಡ ಸಮಾಸಗಳನ್ನು ಕೇಶಿರಾಜನು ಹಾಗೆ ಹೆಸರಿಸಿ ಮಾಡಿದ ಅಚಾತುರ್ಯವನ್ನು ಪರಿಹರಿಸುವ ಪ್ರಯತ್ನವಾಗಿ, ಭಟ್ಟಾಕಳಂಕನು ಅಂತಹ ಸಮಾಸಪದಗಳಿಗೆ 'ಅಂಶಿ ಸಮಾಸಗಳು' ಎಂಬ ಸಮಂಜಸವಾದ ಹೆಸರನ್ನು ಕೊಟ್ಟು ಶ್ಲಾಘ್ಯವಾದೊಂದು ಪ್ರಯತ್ನವನ್ನು ಮಾಡಿರುವೆನೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಶ್ರೀಮಾನ್ ಶರ್ಮರ ಆಕ್ಷೇಪಗಳಿಗೆ ಯಥಾಮತಿಯಾಗಿ ಈವರೆಗೆ ನಾನು ಸೂಚಿಸಿದ ಸಮಾಧಾನಗಳನ್ನು ಕನ್ನಡ ವಿದ್ವಾಂಸರು ಮುಕ್ತಮನಸ್ಸಿನಿಂದ ಪರಾಮರ್ಶಿಸುವರಾಗಿ ನಂಬಿದ್ದೇನೆ.

---

3. ಸಮಾಸನಾಮ ವಿಷಯದಲ್ಲಿ ವಿದ್ವಾಂಸರೊಳಗೂ ಅನೇಕ ಬಾರಿ ಮತಭೇದಗಳು ಕಂಡುಬರುವುದುಂಟು. ಇದಕ್ಕೆ, ಸಮಾಸಾಂತರ್ಗತವಾದ ಎರಡು ಪದಗಳೊಳಗೆ ಯಾವುದು ಮುಖ್ಯ ಎಂಬುದನ್ನು ಅವಲಂಬಿಸಿ ನಮ್ಮ ವೈಯಾಕರಣರು ಮಾಡಿಟ್ಟಿರುವ ಸಮಾಸವಿಭಾಗಕ್ರಮವೇ ಕಾರಣವಾಗಿದೆ. ಈ ತೊಡಕು ಬಾರದಂತಹ ಬೇರೆ ಸಮಾಸ ವಿಭಾಗಕ್ರಮವನ್ನು ಗಮಕ ಸಮಾಸವೆಂಬ ಲೇಖನದಲ್ಲಿಯೇ ನಾನು ವಿದ್ವಾಂಸರ ಮುಂದಿಟ್ಟಿರುತ್ತೇನೆ. ಅದರ ಕುರಿತು ಶ್ರೀಮಾನ್ ಶರ್ಮರು ವಿಚಾರಮಾಡಿದಂತೆ ತೋರುವುದಿಲ್ಲ. ಆ ವಿಭಾಗಕ್ರಮವನ್ನು ಅನುಸರಿಸಿದರೆ ಕನ್ನಡ ಭಾಷೆಯ ಸಮಾಸಗಳ ವಿಷಯದಲ್ಲಿ ಯಾವ ಮತಭೇದವೂ ವಿದ್ವಾಂಸರಲ್ಲಿ ಹುಟ್ಟುವುದಿಲ್ಲವೆಂದು ಹೇಳುವ ಸಾಹಸಮಾಡುತ್ತಿದ್ದೇನೆ.

“ಬಾಷ್ಪ” ಒಂದು ವಿವೇಚನೆ

—ಬಿ. ಎಸ್. ಸಣ್ಣಯ್ಯ

ಮಂಗರಾಜನ ‘ಖಗೇಂದ್ರಮಣಿದರ್ಪಣಂ’[1] ಎಂಬ ವಿಷವೈದ್ಯ ಗಂಥದಲ್ಲಿ ಸ್ಥಾವರ ಜಂಗಮ ಕೃತ್ರಿಮ ವಿಷಭೇದಗಳನ್ನು ಹೇಳುತ್ತಾ

“ಕೃತ್ರಿಮ ವಿಷಂಗಳಾವುವೆನೆ”

ಬಾಷ್ಪಂಗಳೆಂಬನಿತ್ತಱ
ಕಷ್ಟತೆಯಿಂ ಕೃತ್ರಿಮಂಗಳಂ ಪೆಱರಿಂದಂ
ಚೇಷ್ಟಿಸಿದಭಿಚಾರಂಗಳ
ನಿಷ್ಠಿತ್ವವಿಘಾತ ಮಂತ್ರತಂತ್ರಮನುಸಿರ್ವೆಂ ॥೧–೨೦॥

ಎಂದು ಹೇಳಲಾಗಿದೆ. ಇದರ ಸಾರಾಂಶವೆಂದರೆ ಬಾಷ್ಪಗಳೆಂಬ ಕಷ್ಟತರವಾದ ಕೃತ್ರಿಮಗಳನ್ನೂ, ಪರರಿಂದಾದ ಅಭಿಚಾರಗಳನ್ನೂ ನಿವಾರಿಸುವ ಮಂತ್ರ ತಂತ್ರಗಳನ್ನು ಹೇಳುತ್ತೇನೆ ಎಂಬುದಾಗಿದೆ. ಎಂದರೆ ಕೃತ್ರಿಮ ವಿಷಗಳಲ್ಲಿ ‘ಬಾಷ್ಪ’ವನ್ನು ಹೇಳಿದಂತಾಗಿದೆ. ಆದರೆ ಇದು ಎಂತಹ ವಿಷ? ಇದು ಉಂಟಾಗುವ ಬಗೆ ಹೇಗೆ? ಎಂದೆಲ್ಲಾ ವಿವರಣೆಯನ್ನು ಪಡೆಯಬೇಕಾದಲ್ಲಿ ಬಾಷ್ಪ ಚಿಕಿತ್ಸೆಗೇ ಮೀಸಲಾಗಿರುವ ಹದಿನೈದನೆಯ ಪ್ರಕರಣವನ್ನು ನೋಡಬೇಕಾಗುತ್ತದೆ. ಈ ಪ್ರಕರಣದ ಮೊದಲಲ್ಲಿಯೇ ‘ಬಾಷ್ಪ ಚಿಕಿತ್ಸಾ ಪ್ರಕರಣಂ’ ‘ಬಾಷ್ಪ ವಿಧಾನ ಚಿಕಿತ್ಸೆಯಂ ಪೇೞ್ವೆಂ’ ‘ಬಾಷ್ಪ ಭೇದಮಂ ವಿವರಿಸುವೆಂ’ ‘ಬಾಷ್ಪ ವಿಷ ಪ್ರಹರಣಮಪ್ಪ ವೈದ್ಯವಂ ಪ್ರಕಟಿಸುವೆಂ’ (೧೫–೨).

ಕ್ಷಿತಿಯೊಳ್ ಬಾಷ್ಪಮೆ ಕೋಟಿ ಭೇದಮದು ತಾನೆಂಬತ್ತುನಾಲ್ಕೆಂಬ ಸೂ
ಚಿತಮುಂಟಲ್ಲಿ ಸಮಸ್ತರಂ ತಿಳಿಪಲೆಂದಾನೆಲ್ಲಮಂ ಪೇೞ್ದೊಡಂ
ವಿತತಂ ಶಾಸ್ತ್ರಮದಕ್ಕುಮಂತಱಿವವರ್ಗಾಲಸ್ಯಮೆಂದಿಂತಿದ
ಪ್ರತಿಮಂ ತಾನೆನೆ ಪೇೞ್ವೆನಾಂ ಕಿಱಿದಱಿಂ ತತ್ಸಾರಮಂ ಸಾಂಗದಿಂ ೧೫–೩

ಎಂಬಿವೇ ಮೊದಲಾದ ವಿವರಗಳನ್ನು ನೋಡುತ್ತೇವೆ. ಇಲ್ಲಿ ಬಾಷ್ಪ, ಬಾಷ್ಪ ವಿಷ ಎಂಬೆರಡೂ ಪದ ಪ್ರಯೋಗಗಳನ್ನು ಕಾಣಬಹುದು. ಈಗ ಅಚ್ಚಾಗಿರುವ ಗ್ರಂಥದಲ್ಲಿ ಸಂಪಾದಕರು ಅರ್ಥಕೋಶಗಳಲ್ಲಿ ಈ ಪದ ದೊರೆಯದಿದ್ದುದರಿಂದಲೊ ಏನೊ ‘ಬಾಷ್ಪ’ ಪದಗಳೆಲ್ಲವನ್ನೂ ‘ಬಾಷ್ಪ’ ಎಂದು ತಿದ್ದಿಕೊಂಡಿದ್ದಾರೆ ; ಕೆಲವೆಡೆ ‘ಬಾಷ್ಪ’ ಎಂಬುದನ್ನು ಆವರಣ ಚಿಹ್ನೆಯಲ್ಲಿ ಕೊಟ್ಟಿದ್ದಾರೆ. ಆದರೆ ೧–೨೦ ನೆಯ ಪದ್ಯದಲ್ಲಿ ಬರುವ ‘ಬಾಷ್ಪ’ ಪದ ಪ್ರಾಸಸ್ಥಾನದಲ್ಲಿರುವುದರಿಂದ ಇದನ್ನು ಹಾಗೆಯೇ ಬಿಟ್ಟಿದ್ದಾರೆ. ವಿಷಯಸೂಚಿಯಲ್ಲಿ ಮಾತ್ರ ‘ಬಾಷ್ಪ’ ಪದವನ್ನೇ ಬಳಸಿದ್ದಾರೆ.

1. ಸಂ. ಎ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷ ಅಯ್ಯಂಗಾರ್, ಮದರಾಸು ವಿಶ್ವವಿದ್ಯಾನಿಲಯ, ಮದರಾಸು ; 1942.

'ಬಾಷ್ಪ' ಪದ ಹಸ್ತಪ್ರತಿಗಳಲ್ಲಿದೆ. ಇದರ ಬಳಿಕೆ ರೂಢಿಯಲ್ಲಿರುವುದನ್ನು ಕನ್ನಡ-ಕನ್ನಡ ನಿಘಂಟುವಿನಲ್ಲಿ ದಾಖಲಿಸಿದ್ದಾರೆ. ಇದಕ್ಕೆ ಸಂವಾದಿಯಾದ 'ಬಾಸಟಿ' ಪದ ತೆಲುಗಿನಲ್ಲಿದ್ದು ವಿಷ ಎಂಬ ಅರ್ಥವಿದೆ. ಅದುದರಿಂದ ಈ ಪದದ ಬಗೆಗೆ ಅನುಮಾನಕ್ಕೆ ಆಸ್ಪದವಿಲ್ಲ.

ಈ ಗ್ರಂಥದಲ್ಲಿ ದೊರೆಯುವಂತೆ ಬಾಷ್ಪವು ಪಿತ್ತ ಶ್ಲೇಷ್ಮ ವಾತ ಸನ್ನಿ ಮೊದಲಾದ ಇಪ್ಪತ್ತೆರಡು ತೆರದಿಂದ ಉಂಟಾಗುವುದನ್ನೂ ಅವುಗಳಿಗೆ ಚಿಕಿತ್ಸೆಗಳನ್ನೂ ಹೇಳಲಾಗಿದೆ. ಜಡತ್ವ ಹೊಂದಿರುವುದೂ ಒಂದು ಬಾಷ್ಪ ಎಂಬದನ್ನು

ಜಡ ಬಾಷ್ಪದವನ ನಾಲಗೆ
ಜಡಮುಕ್ಕುಂ ಸ್ಫೋಟಕಂಗಳಂಗದೊಳಕ್ಕುಂ
ನುಡಿಯುಂ ಬಱಲ್ಗುಂ ಮೂಗಿನ
ಯೆಡೆತುಱಿಸುಗುಮಿಂತಿವೆಯ್ದೆ ತಚ್ಚಿಹ್ನಂಗಳ್ ೧೫-೨೪

ಎಂದು ಅದರ ಲಕ್ಷಣವನ್ನು ವಿವರಿಸಿ, ಮುಂದೆ ಅದರ ನಿವಾರಣೆಗೆ ಮಾಡಬೇಕಾದ ಮದ್ದನ್ನು ಸೂಚಿಸಲಾಗಿದೆ.

೧-೨೦ನೆಯ ಪದ್ಯದಲ್ಲಿ ತಿಳಿಸುವಂತೆ ಇದು ಕೃತ್ರಿಮ ವಿಷವೇ ಆಗಿದೆ. ಆದರೆ ಇಲ್ಲಿ ಮಂಗರಾಜನು ೧೪ನೆಯದನ್ನು 'ಕೃತ್ರಿಮ ವಿಷ ಚಿಕಿತ್ಸಾ ಪ್ರಕರಣ'ವೆಂದೂ ೧೫ನೆಯದನ್ನು 'ಬಾಷ್ಪ ಚಿಕಿತ್ಸಾ ಪ್ರಕರಣ'ವೆಂದೂ ಬೇರೆ ಬೇರೆ ಮಾಡಿದ್ದಾನೆ. ಆಹಾರ ಪಾನೀಯ ನಖ ದಂತ ಕೆಯ್ಮ್ಮಸಕ ಮೊದಲಾದುವುಗಳ ಸೇವನೆ ಇಲ್ಲವೆ ನಾಟುವಿಕೆಯಿಂದ ಉಂಟಾಗುವ ವಿಷವನ್ನು ಕೃತ್ರಿಮ ವಿಷವೆಂದೂ ಪಿತ್ತ ಶ್ಲೇಷ್ಮಗಳ ಆಧಿಕ್ಯದಿಂದ ಸನ್ನಿ ಉರಿ ಮೊದಲಾದುವುಗಳಿಂದಾದ ವಿಷವನ್ನು ಬಾಷ್ಪ ಅಥವಾ ಬಾಷ್ಪದ ವಿಷವೆಂದೂ ನಿರೂಪಿಸಲಾಗಿದೆ.

ಈ ಎಲ್ಲವನ್ನೂ ವಿವೇಚಿಸಿ ನೋಡಿದರೆ, ಸ್ಥಾವರ ಜಂಗಮ ಕೃತ್ರಿಮ ವಿಷ ವಿಭಾಗಗಳಲ್ಲಿ ಮೂರನೆಯದಾದ ಕೃತ್ರಿಮ ವಿಷದಲ್ಲಿಯೇ ಬಾಷ್ಪವೂ ಬರುತ್ತದೆಂಬುದಾಗಿ ಹೇಳಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನಲ್ಲಿ "ಬಾಷ್ಪ-ನಂಜು, ವಿಷ, ಗಾಯ ಬಾಷ್ಪವೇರಿ ತುಂಬಾ ನೋವಾಗಿದೆ (ರೂಢಿ)" ಎಂದು ಮಾತ್ರ ಕೊಟ್ಟು ಯಾವುದೇ ಗ್ರಂಥ ಪ್ರಯೋಗವನ್ನು ದಾಖಲಿಸಿರುವುದಿಲ್ಲ. ಇದಕ್ಕೆ ಕಾರಣವೆಂದರೆ, ಈ ಗ್ರಂಥದಿಂದ ಪದ ಸಂಗ್ರಹ ಮಾಡಿದವರ ಅದಕ್ಷತೆ. ಅಪಕ್ವ ಪದಸಂಗ್ರಹ ಎಂಬುದರಲ್ಲಿ ಸಂಶಯವಿಲ್ಲ. ಈ ಗ್ರಂಥದಲ್ಲಿಯೇ ಬರುವ ಮತ್ತೂ ಹಲವಾರು ಅಪರೂಪ ಶಬ್ದಗಳನ್ನು ಅಲಕ್ಷಿಸಿರುವುದನ್ನೂ ಕಾಣಬಹುದು.

ಗ್ರಂಥ ವಿಮರ್ಶೆ

ಶ್ರೀ ಅನಂತಪದ್ಮನಾಭ ಕಥಾಮೃತ

ಸ್ವತಃ ಕವಿಯೂ ಗಮಕಿಯೂ ಆಗಿರುವ ಮಾನ್ಯ ಲೇಖಕರಾದ ಗಮಕಿ ಆರ್. ಶಂಕರನಾರಾಯಣರಾವ್ ಅವರು ಈ ಕೃತಿಯನ್ನು 1978ರಲ್ಲಿ ಕಾವ್ಯ ಪ್ರಚಾರ ಮಂಡಲಿಯ ಪ್ರಕಟನೆಯಾಗಿ ಹೊರತಂದಿದ್ದರು. ಇದೀಗ 1993ರಲ್ಲಿ ದ್ವಿತೀಯ ಆವೃತ್ತಿಯ ಸ್ವಯಂ ಪ್ರಕಟನೆಯಾಗಿದೆ. ಹಳಗನ್ನಡ ಛಂದಸ್ಸಿನಲ್ಲಿ ರಚನೆಯಾಗಿರುವ ಕೃತಿಯೊಂದು ಪುನರ್ಮುದ್ರಣವಾಗುತ್ತಿರುವುದು ವಿಶೇಷವಾಗಿದೆ. ಪುಣ್ಯ ವ್ರತಗಳಲ್ಲಿ ಶ್ರೇಷ್ಠವಾದ ಶ್ರೀ ಅನಂತಪದ್ಮನಾಭ ವ್ರತಾಚರಣೆಯ ಸಂದರ್ಭಗಳಲ್ಲಿಯೂ ಗಮಕ ಕಾರ್ಯಕ್ರಮಗಳಲ್ಲಿಯೂ ಈ ಕೃತಿ ಹತ್ತಾರು ಕಡೆ ಕಾವ್ಯವಾಚನದ ಬಳಕೆಗೆ ಬಂದು ಜನಪ್ರಿಯವಾಗಿದೆ. ಈ ಕೃತಿ ಸುಲಲಿತ ವಾರ್ಧಕ ಷಟ್ಪದಿಯಲ್ಲಿದೆ. ಐದು ನಾಂದೀ ಪದ್ಯಾನಂತರ ೮೧ ಪದ್ಯಗಳಲ್ಲಿ ಈ ಚಿಕ್ಕ ಕೃತಿ ಪೂರ್ಣಗೊಳ್ಳುತ್ತದೆ. ಕೊನೆಗೆ ಎಲ್ಲ ಪದ್ಯಗಳ ಗದ್ಯಾನುವಾದವಿದೆ. ಇದರಿಂದ ಕಾವ್ಯಾರ್ಥವನ್ನು ಸಾಮಾನ್ಯರಿಗೂ ತಿಳಿಯಲು ಅನುಕೂಲವಾಗಿದೆ.

ಈ ಪುಣ್ಯ ಕಥೆಯನ್ನು ನೈಮಿಷಾರಣ್ಯದಲ್ಲಿ ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ತಿಳಿಸಿದ ಹಿನ್ನೆಲೆ ಈ ಕೃತಿಗಿದೆ. ಪಾಂಡವರು ವನವಾಸದ ಸಂಕಷ್ಟದಲ್ಲಿದ್ದಾಗ ಶ್ರೀಕೃಷ್ಣನು ಅವರಿದ್ದಲ್ಲಿಗೆ ಬರುತ್ತಾನೆ. ಧರ್ಮರಾಯನು ತನ್ನ ಸಂಕಷ್ಟಪರಿಹಾರೋಪಾಯವನ್ನು ಕೇಳಿದಾಗ ಶ್ರೀಕೃಷ್ಣನು ಅವನಿಗೆ ತನ್ನ ವಿಶ್ವರೂಪವನ್ನು ತೋರಿಸಿದನಲ್ಲದೆ, ಈ ವ್ರತಾಚರಣೆಯನ್ನು ಧರ್ಮರಾಯನಿಗೆ ಬೋಧಿಸಿದನೆಂದು ಇದರ ಕಾರಣ ಕಥೆಯಿದೆ. ಭಕ್ತಿ ನೀತಿ ಬೋಧಕವಾಗಿ ಪುರುಷಾರ್ಥಸಾಧಕವಾಗಿ ಷಟ್ಪದಿಗಳ ನಾದಮಾಧುರ್ಯದಿಂದೊಪ್ಪುವ ಈ ಪುಟ್ಟ ಕೃತಿ ಓದುಗರಿಗೆಲ್ಲ ಸಂಗ್ರಹಯೋಗ್ಯವಾಗಿದೆ.

—ಟಿ. ಕೇಶವಭಟ್ಟ

1. ಪ್ರ : ಸತ್ಯಶ್ರೀ ಪ್ರಕಾಶನ, 67, ಐ.ಟಿ.ಐ. ಬಡಾವಣೆ, ವಿದ್ಯಾಪೀಠ, ಬನಶಂಕರಿ 3ನೆಯ ಹಂತ, ಬೆಂಗಳೂರು–85. ಪುಟಗಳು : ೪೮, ಬೆಲೆ : ೧೦–೦೦

ಮುಂಜಾವಿಗೆ ಕಾದವಳು [2]

ಶ್ರೀಮತಿ ತುಳಸಿ ವೇಣುಗೋಪಾಲರ ಮೊದಲ ಸಣ್ಣ ಕಥಾ ಸಂಕಲನ 'ಮುಂಜಾವಿಗೆ ಕಾದವಳು' ಎಂಬ ಕೃತಿ ಸದ್ಯದ ಮಹಿಳಾ ಕತೆಗಾರ್ತಿಯರ ನಡುವೆ ಶ್ರೀಮತಿ ತುಳಸಿಯವರ ಹೆಸರು ಸಾಹಿತ್ಯಾಸಕ್ತರ ಗಮನ ಸೆಳೆಯುವಲ್ಲಿ ಸಫಲವಾಗಿದೆ. ಈ ಸಫಲತೆಗೆ ಪ್ರಮುಖ ಕಾರಣ ಅವರ ಕಥನ ಕ್ರಮ ಮತ್ತು ಅದಕ್ಕೆ ದುಡಿಸಿಕೊಂಡಿರುವ ಭಾಷೆ.

ಈ ಸಂಕಲನದಲ್ಲಿರುವ ಎಲ್ಲ ಹತ್ತು ಕತೆಗಳೂ ಹೆಣ್ಣಿನ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವ ಕತೆಗಳೆ. ಶೋಷಣೆ, ನೋವು, ನಿರಾಶೆ, ಕಲಹ ಮುಂತಾದ ವಿಷಯಗಳೆ ಇಲ್ಲಿನ ವಸ್ತುಗಳಾದರೂ ಅವುಗಳನ್ನು ನಿರ್ವಹಿಸಿರುವ ಕ್ರಮದಿಂದ ವಿಶಿಷ್ಟ ಧ್ವನಿಶಕ್ತಿಯನ್ನು ಪಡೆದುಕೊಂಡು ಕಥೆ ಸಂಕೀರ್ಣಗೊಳ್ಳುವಂತೆ ಮಾಡಿದೆ. ಮುನ್ನುಡಿಯಲ್ಲಿ ಯಶವಂತ ಚಿತ್ತಾಲ ಅವರು ಇದನ್ನು ಹೀಗೆ ಗುರುತಿಸಿದ್ದಾರೆ: "ಪ್ರತಿಯೊಂದು ಕತೆ ಹೆಣ್ಣಿನ ಅನುಭವವೊಂದರಲ್ಲಿ ಬೇರು ಬಿಟ್ಟಿರುವಾಗಲೂ ಕೊನೆಕೊಳ್ಳುವುದು ನಮ್ಮೆಲ್ಲರಿಗೂ ಅರ್ಥಪೂರ್ಣವಾಗಬಲ್ಲ ಅನುಭವದಲ್ಲಿ, ಬದುಕಿನ ಬಗೆಗಿನ ಒಂದು ಹೊಸ ನೋಟದಲ್ಲಿ. ಅನುಭವವನ್ನು ಕೇವಲ ಸಾಹಿತ್ಯದ ವಸ್ತುವಾಗಲು ಬಿಡದೇ ಜೀವನವನ್ನು ನೋಡುವ ಹೊಸ ಇಂದ್ರಿಯವನ್ನಾಗಿಸುವ ಕಲೆಗಾರಿಕೆ ಇವರು ತಮ್ಮ ಚೊಚ್ಚಲು ಕೃತಿಯಲ್ಲೇ ಸಾಧಿಸಿದುದು ನಿಜಕ್ಕೂ ಕೌತುಕಾಸ್ಪದವಾಗಿದೆ.

ಈ ಸಂಕಲನದಲ್ಲಿ ಮುಖ್ಯವಾಗಿ ಗಮನ ಸೆಳೆಯುವ 'ಇದು ಬೇರೆ ಕತೆ' 'ತಪ್ತರು' ತುಳಸಿಯವರ ಕಲೆಗಾರಿಕೆಗೆ ಉತ್ತಮ ಉದಾಹರಣೆಗಳು. ವಿಶೇಷವಾಗಿ ಇಲ್ಲಿ ಹೇಳಬೇಕಾದ ಮುಖ್ಯವಾದ ಅಂಶವೆಂದರೆ ಕತೆಗಾರ್ತಿಯೇ ಹೇಳಿಕೊಂಡಿರುವಂತೆ "ಶ್ರೀ ಯಶವಂತ ಚಿತ್ತಾಲರ ಕತೆಗಳನ್ನು ಓದಿದಾಗಲೆಲ್ಲಾ ಇಂತಹ ಕತೆಗಳನ್ನು ಬರೆಯಬೇಕೆಂದು ಬಯಸಿದಾಕೆ ನಾನು" ಎಂಬ ಮಾತಿನಂತೆ ಇಲ್ಲಿನ ಎಲ್ಲಾ ಕತೆಗಳ ಮೇಲೆ ಚಿತ್ತಾಲರ ಪ್ರಭಾವ ದಟ್ಟವಾಗಿದೆ. ಇದು ಚಿತ್ತಾಲರ ಬರಹವೆ ಎಂದು ಅನುಮಾನ ಮೂಡುವಷ್ಟು ಪ್ರಬಲವಾಗಿದೆ. ಸದ್ಯಕ್ಕದು ಗುಣವಾಗಿ ಬಂದಿದೆ. ಮುಂದೆ? ಅಥವಾ ತುಳಸಿಯವರ ಸ್ವಂತಿಕೆ ಪ್ರಭಾವವನ್ನು ಅರಗಿಸಿಕೊಂಡು ಪ್ರಕಾಶಿಸುವಂತಾದರೆ ಸ್ವಾಗತವೆ.

—**ಕೆ. ಬಿ. ಲೋಕೇಶ್ವರಪ್ಪ**

---

2. ಪ್ರ : ಸಾಹಿತ್ಯ ಪ್ರಕಾಶನ, 72/2433, ನೆಹರು ನಗರ, ಮುಂಬಯಿ–400 024, 1993, ಪುಟ : 86, ಬೆಲೆ : 30–00

ಹಂಸಗಳು ಹರಿಣಗಳು [3]

ಈ ಕೃತಿ ಸದ್ಯೋಜಾತಮೂರ್ತಿ ಅವರ ಆರನೆಯ ಆದರೆ ಶಿಶುಗೀತೆಗಳ ಮೊದಲ ಸಂಕಲನ. ಮಕ್ಕಳಿಗಿಷ್ಟವಾಗುವ ಹಾಗೆ ಬೇರೆ ಬೇರೆ ಬಣ್ಣಗಳಲ್ಲಿ, ದಪ್ಪಕ್ಷರಗಳಲ್ಲಿ ಕವನಗಳನ್ನು ಮುದ್ರಿಸಲಾಗಿದೆ. ಪೂರಕವಾಗಿ ಅಲ್ಲಲ್ಲಿ ಉಚಿತ ಚಿತ್ರಗಳನ್ನು ಸೇರಿಸಿದ್ದಾರೆ.

ಒಟ್ಟು ಮೂವತ್ತೊಂದು ಕವನಗಳಿರುವ ಈ ಸಂಕಲನದಲ್ಲಿ ಶಿಶುಕವಿಗಳು ತಾವು ಕಂಡ ಎಲ್ಲಾ ವಸ್ತುಗಳ ಮೇಲೂ ಒಂದೊಂದು ಕವನ ಕಟ್ಟಿದ್ದಾರೆ. ಹಾಗೆ ಕಟ್ಟುವಾಗ ಪ್ರಾಸ, ಸರಳತೆ, ಬಣ್ಣ, ಚಿತ್ರ ದಪ್ಪಕ್ಷರಗಳಕಡೆ ಗಮನವಿತ್ತಿರುವಂತೆ, ಭಾವ, ಲಯ, ಏಕತೆ, ಮಾಧುರ್ಯ ಮುಂತಾದ ಪ್ರಾಥಮಿಕ ಆದರೆ ಮುಖ್ಯ ಲಕ್ಷಣಗಳ ಕಡೆಗೆ ಗಮನವಿಟ್ಟಿಲ್ಲದಿರುವುದು ಇದರ ದೊಡ್ಡ ಕೊರತೆಯಾಗಿದೆ. ಆದ್ದರಿಂದ ಕವನಗಳನ್ನೋದುವಾಗ ಬಲವಂತಕ್ಕೆ ಕಟ್ಟಿದವುಗಳೆಂದು ಅನಿಸುತ್ತದೆ. ಬಾಲಕರಿಗೆ ಕಷ್ಟವಾಗುವ, ನಿರ್ಮಲ, ತಿಳಿವಿನ, ಹೊಳಪಿನ, ಶುಭ್ರತೆ, ನಿರ್ಜಲ, ನೈದಿಲೆ, ಪರಿಸರ ಪ್ರೇಮಿ ಎಂಬ ಭಾವದೂರ ಶಬ್ದಗಳ ಬಳಕೆ ಶಿಶುಕವನಗಳಲ್ಲಿದ್ದರೆ, “ಸಕ್ಕರೆ ನಾಡಿನ ಸಿಹಿಗಳು ನಾವು, ಅಕ್ಕರೆ ತುಂಬುವ ಹಂಸಗಳು, ಬೆಳೆಬೆಳೆಯುತ ನಾವುಗಳು, ಪರಿಸರ ಪ್ರೇಮಿಗಳಾಗುವೆವು” ಎಂಬ ಅಸಹಜ ಕವನ ಘಟಗಳು ಜಾಸ್ತಿಯಾಗಿವೆ. ಕವನದ ಉದ್ದಿಷ್ಟಾರ್ಥಕ್ಕನುಗುಣವಾದ ಘಟನೆಗಳು ಯಾವುದೂ ಇಲ್ಲದೆ ಕೃತಕತೆ ಪ್ರಮುಖ ದೋಷವಾಗುತ್ತದೆ. “ಗುಡ್ಡದಿಂ ಬೆಟ್ಟಕೆ, ಬೆಟ್ಟದಿಂ ಶಿಖರಕೆ” ಎಂಬ ಅಪ್ರಕೃತ ಬಳಕೆಯೂ ಇದೆ. ಆದರೆ “ದಾಸಯ್ಯ, ಸಂತಸವೇ ನಿನಗೆ, ಮಳೆರಾಯ, ಭಟ್ಟರ ಜುಟ್ಟು, ಆನೆಮರಿಯಂಥ ಕೆಲವು ಕವನಗಳಾದರೂ ಶಿಶುಗೀತೆಗಳೆಂದು ಕರೆಯುವಷ್ಟರ ಮಟ್ಟಿಗೆ ಇವೆ. ಶ್ರಮವೇನೊ ಒಳ್ಳೆಯದೆ. ಆದರೆ ಪ್ರಕಟಿಸುವ ಮೊದಲು ಗುಣದ ಕಡೆಗೆ ಗಮನಬೇಡವೆ ?

—ಕೆ. ಬಿ. ಲೋಕೇಶ್ವರಪ್ಪ

“ಎಳೆಹೂಟೆ” (ನಾಟಕ)

“ಕಾವ್ಯೇಷು ನಾಟಕಂ ರಮ್ಯಂ” ಎಂಬ ಆರ್ಯೋಕ್ತಿಯಂತೆ ಸಾಹಿತ್ಯದ ಎಲ್ಲ ಪ್ರಕಾರಗಳಿಗಿಂತ ಹೆಚ್ಚು ಪರಿಣಾಮಕಾರಿಯಾದ ಮಾಧ್ಯಮ ನಾಟಕ. ಪಾತ್ರಗಳು ಕಣ್ಣಮುಂದೆಯೇ ಸುಳಿದಾಡಿದಾಗ ಆಗುವ ಅನುಭವ ಅನನ್ಯ. ಹೀಗಾಗಿ ನಾಟಕಗಳು ಸಾಹಿತ್ಯಕ್ಷೇತ್ರದಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತವೆ.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಮೈತಾಳಿದ ವಚನಕಾರರು ಸಾಹಿತ್ಯಕ್ಷೇತ್ರದಲ್ಲಿ ಒಂದು ಹೊಸ ವಿಕ್ರಮವನ್ನು ಸ್ಥಾಪಿಸಿದರು. ಅರ್ಥವಿಲ್ಲದ ಸಂಪ್ರ

---

3. ಗ್ರಂಥ ಗಂಗೋತ್ರಿ ಪ್ರಕಾಶನ, ಚಿಕ್ಕೋಡಿ–591 201, 1993, ಪುಟ : 68, ಬೆಲೆ : 10–00

ದಾಯಗಳನ್ನೂ ಕಟ್ಟುಕಟ್ಟಳೆಗಳನ್ನೂ ಕಿತ್ತೊಗೆದು ಒಂದು ನೂತನ ಸಮಾಜ ನಿರ್ಮಾಣಕ್ಕೆ ವಚನಕಾರರು ಬುನಾದಿಯನ್ನು ಹಾಕಿದರು. ಜಾತಿಮತ ಪಂಥಗಳ ಸಂಕೋಲೆಯಿಂದ ಜನತೆಯನ್ನು ಪಾರುಮಾಡಿ ಮಾನವಜಾತಿ ಒಂದೇ ಎಂಬುದನ್ನು ಸಾರಿದರು. ಇವೆಲ್ಲಾ ಕ್ರಾಂತಿಗೂ ಬಸವಣ್ಣನವರು ಕಾರಣಭೂತರು. ವಿವಿಧ ಧರ್ಮದವರು ವಿವಿಧ ವೃತ್ತಿಯವರು ಒಂದೆಡೆ ಸೇರಿ ಆತ್ಮೋದ್ಧಾರ ಮಾರ್ಗದತ್ತ ಚಿಂತನೆ ನಡೆಸಿದರು. ಈ ಹಿನ್ನೆಲೆಯಲ್ಲಿ ನಡೆದ ಒಂದು ಚರಿತ್ರಾರ್ಹ ಘಟನೆ ಅಂತ್ಯಜ ಹರಳಯ್ಯನ ಮಗನೊಡನೆ ವಿಪ್ರಮಧುವರಸನ ಮಗಳ ಮದುವೆ ನಡೆದದ್ದು. ಈ ಅಂತರ್ಜಾತೀಯ ವಿವಾಹ ಅರಸ ಬಿಜ್ಜಳನಿಗೆ ನುಂಗಲಾರದ ತುತ್ತಾಯಿತು. ಮಂತ್ರಿವರ್ಯರಾದ ಬಸವಣ್ಣನವರೇ ಇದಕ್ಕೆಲ್ಲಾ ಕಾರಣರೆಂದು ಚಾಡಿಕೋರರು ಹೇಳಿದ ಮಾತಿಗೆ ಬಿಜ್ಜಳ ಮನತೆತ್ತನು. ತತ್ಪರಿಣಾಮವಾಗಿ ಮುಗ್ಧ ಪ್ರೇಮಿಗಳಿಗೆ ಎಳೆಹೂಟೆ ಶಿಕ್ಷೆಯಾಯಿತು. ಬಸವಣ್ಣನವರು ಮಂತ್ರಿ ಪದವಿಯನ್ನು ತ್ಯಜಿಸಿದರು ; ಕಲ್ಯಾಣದಲ್ಲಿ ಕ್ರಾಂತಿ ತಲೆದೋರಿತು.

ಪ್ರಸ್ತುತ ನಾಟಕ 'ಎಳೆಹೂಟೆ'ಯ ಕಥಾವಸ್ತು ಈ ಅನುಲೋಮ ವಿವಾಹ. ಈ ನಾಟಕದಲ್ಲಿಯ ಪಾತ್ರಗಳು ಸಜೀವವಾಗಿವೆ. ಓದಿದಾಗ ಕಣ್ಣಮುಂದೆ ಸುಳಿದಾಡುತ್ತವೆ : ಅಂದಿನ ಸಮಾಜದಲ್ಲಿ ಈ ತೆರನ ಅಂತರ್ಜಾತೀಯ ವಿವಾಹಗಳಿಗೆ ಅವಕಾಶವಿರಲಿಲ್ಲ, ಅಲ್ಲದೆ ಅದು ನಿಷಿದ್ಧವೂ ಆಗಿತ್ತು. ಲೋಕಹಿತಾರ್ಥವಾಗಿ ಬದಲಾವಣೆಗೊಂಡ ಧಾರ್ಮಿಕ ಪರಿಸ್ಥಿತಿಯನ್ನು ಅಂದಿನ ಸಮಾಜ ಅರ್ಥಮಾಡಿಕೊಳ್ಳುವ ಮಟ್ಟವನ್ನು ಮುಟ್ಟಿರಲಿಲ್ಲ. ಆದುದರಿಂದಲೇ ಕಲ್ಯಾಣ ಕ್ರಾಂತಿಯಾಯಿತು. ರಾಜಕೀಯ ವಿಪ್ಲವವಾಯಿತು. ಮಂತ್ರಿ ಪದವಿಯಿಂದ ಬಸವಣ್ಣನವರ ನಿರ್ಗಮನವಾದ ಮೇಲೆ ಬಿಜ್ಜಳನ ಕೊಲೆಯಾಯಿತು. ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದ ಮುಗ್ಧ ಪ್ರೇಮಿಗಳ ಅಮಾನುಷ ಕೊಲೆಯಾಯಿತು. ಈ ಎಲ್ಲ ಸಂಗತಿಗಳನ್ನು ನಾಟಕಕಾರರಾದ ಆರ್. ಸಿ. ಭೂಸನೂರಮಠ ಅವರು ಈ ನಾಟಕದಲ್ಲಿ ಸೆರೆಹಿಡಿದಿದ್ದಾರೆ. ಪಾತ್ರಸೃಷ್ಟಿ, ಪ್ರಕರಣ ನಿರೂಪಣೆ ತುಂಬ ಸೊಗಸಾಗಿ ಮೂಡಿಬಂದಿದೆ. ಈ ನಾಟಕದ ಮತ್ತೊಂದು ವೈಶಿಷ್ಟ್ಯವೆಂದರೆ ಆಯಾ ಪಾತ್ರಗಳ ವಚನಗಳನ್ನು ಸಂದರ್ಭೋಚಿತವಾಗಿ ಕೋದಿರುವುದು. ಈ ನಾಟಕ ಹಲವಾರು ಭಾಷೆಗಳಿಗೆ ಭಾಷಾಂತರವಾಗಿ ಆಕಾಶವಾಣಿಯಲ್ಲಿ ಬಿತ್ತರಗೊಂಡಿದೆ. ಇಂತಹ ಉಪಯುಕ್ತ ಚಾರಿತ್ರಿಕ ನಾಟಕವನ್ನು ರಚಿಸಿ ಕನ್ನಡಿಗರ ಮನ್ನಣೆಗೆ ಪಾತ್ರರಾಗಿದ್ದಾರೆ. "ಎಳೆಹೂಟೆ" ವ್ಯಾಪಕವಾಗಿ ನಾಡಿನಾದ್ಯಂತ ಪ್ರದರ್ಶಿತಗೊಂಡು ಅನಾದಿಕಾಲದಿಂದ ಅಂಟಿ ಬಂದಿರುವ ಜಾತಿಯ ಪಿಡುಗನ್ನು ನಿವಾರಿಸುವಂತಾಗಲಿ ಎಂದು ಹಾರೈಸೋಣ.

—ಎನ್. ಬಸವಾರಾಧ್ಯ

ಪ್ರಕಾಶಕರು, ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು.

ವಸ್ತು ಸಂಗ್ರಹ

೧. ಕನ್ನಡ ಜಾಗೃತಿ ವರ್ಷ :

ಕರ್ನಾಟಕ ಸರ್ಕಾರ 1993–94ನೇ ವರ್ಷವನ್ನು 'ಜಾಗೃತಿ ವರ್ಷ'ವನ್ನಾಗಿ ಘೋಷಿಸಿ ಸಾಮಾನ್ಯ ಜನರ ಹತ್ತಿರಕ್ಕೆ ಹೋಗಿ ಕನ್ನಡ ನಾಡು-ನುಡಿ-ಜನಪದದ ಅಭಿವೃದ್ಧಿ ಕಾರ್ಯಗಳ ಸ್ವರೂಪವನ್ನು ಅದರಲ್ಲಿ ಅವರವರ ಪಾತ್ರಗಳನ್ನು ಮನವರಿಕೆ ಮಾಡಿಕೊಡುವುದು ; ಕನ್ನಡ ಆಡಳಿತ ಭಾಷೆಯ ಸುಲಭ ಬಳಕೆಯ ತಿಳುವಳಿಕೆಗಾಗಿ ಲಕ್ಷಾಂತರ ಪ್ರತಿಗಳಲ್ಲಿ 'ಕನ್ನಡ ರತ್ನಕೋಶ'ವನ್ನು ಅಗ್ಗದ ಬೆಲೆಯಲ್ಲಿ ಮುದ್ರಿಸಿ ವಿತರಿಸುವುದು; ಕನ್ನಡ ಪುಸ್ತಕಗಳನ್ನು ಮನೆಮನೆಗೆ ತಲುಪಿಸುವ 'ಪುಸ್ತಕ ಆಂದೋಲನ' ಹೀಗೆ ಹಲವು ಜನಪ್ರಿಯ ಕಾರ್ಯಯೋಜನೆಗಳನ್ನು ಒಳಗೊಂಡ 'ಕನ್ನಡ ಜಾಗೃತಿ ವರ್ಷದ ಉದ್ಘಾಟನೆಯನ್ನು ಮಾಡಿದೆ. ಸರ್ಕಾರದ ಮಟ್ಟದಲ್ಲಿ ಕನ್ನಡ ಪರವಾದ ಹಲವು ಉತ್ತಮ ನಿಲುವುಗಳನ್ನು ತೆಗೆದುಕೊಳ್ಳಲಾಗಿದೆಯಾದರೂ ಅವುಗಳನ್ನು ಜಾರಿಗೊಳಿಸುವಲ್ಲಿ ಅನಗತ್ಯ ವಿಳಂಬ ಮತ್ತು ಕುತಂತ್ರಗಳು ನಡೆಯುತ್ತಿವೆ. ಇಲಾಖೆಗಳಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಇನ್ನೂ ಪೂರ್ಣ ಮಟ್ಟದಲ್ಲಿ ಜಾರಿಯಾಗಿಲ್ಲ ಎಂಬ ಕೊರಗು ಇದ್ದೇ ಇದೆ. ಇವುಗಳೆಲ್ಲ ಪ್ರಾಮಾಣಿಕ ಮನಸ್ಸಿನ ದೃಢ ನಿರ್ಧಾರಗಳಿಂದ ಆಗಬೇಕೇ ವಿನಾ ಕೇವಲ ತೋರಿಕೆಗಾಗಿ ಮಾಡುವ ಘೋಷಣೆಗಳಿಂದ ಸಾಧ್ಯವಾಗುವುದಿಲ್ಲ.

೨. ಹೊಸ ಸಂಸ್ಥೆಗಳ ಉದಯ : (i) **ದೇವುಡು ಪ್ರತಿಷ್ಠಾನ** : ಪ್ರಮುಖ ಕಾದಂಬರಿಕಾರರಾಗಿದ್ದ ದೇವುಡು ಅವರ ಹೆಸರಿನಲ್ಲಿ ಡಿ. ಎನ್. ಗಂಗಾಧರ್ ಅವರು ದೇವುಡು ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ. ದೇವುಡು ಅವರ ಕೃತಿಗಳನ್ನು ಪ್ರಕಟಿಸುವ ಮತ್ತು ಉಪನ್ಯಾಸಗಳನ್ನು ಏರ್ಪಡಿಸುವ ಯೋಜನೆಯನ್ನು ಈ ಪ್ರತಿಷ್ಠಾನ ಹೊಂದಿದೆ.

(ii) **ವಚನಸಾಹಿತ್ಯ ಪರಿಷತ್ತು** : ವಿಶ್ವಸಾಹಿತ್ಯಕ್ಕೆ ಕನ್ನಡದ ಅಪೂರ್ವ ಕೊಡುಗೆಯಾದ ವಚನಸಾಹಿತ್ಯವನ್ನು ವ್ಯವಸ್ಥಿತವಾಗಿ ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶವನ್ನು ಇಟ್ಟುಕೊಂಡು 'ಕರ್ನಾಟಕ ವಚನ ಸಾಹಿತ್ಯ ಪರಿಷತ್ತು' ಎಂಬ ನೂತನ ಸಂಸ್ಥೆ ಮೈಸೂರಿನಲ್ಲಿ ಆರಂಭವಾಗಿದೆ. ಮಾಜಿ ಉಪಕುಲಪತಿಗಳೂ ಪ್ರಸಿದ್ಧ ಸಾಹಿತಿಗಳೂ ಆದ ಪ್ರೊ|| ದೇ. ಜವರೇಗೌಡ ಅವರು ಇದರ ಅಧ್ಯಕ್ಷರಾಗಿದ್ದಾರೆ.

೩. ಕನ್ನಡ ತಾಂತ್ರಿಕ ಸಾಧನೆಗಳು :

ತಂತ್ರಜ್ಞಾನ ಹೊಸ ಅವಿಷ್ಕಾರವನ್ನು ಪಡೆಯುತ್ತಿರುವ ಇಂದಿನ ಸಂದರ್ಭದಲ್ಲಿ ಮುದ್ರಣ ಕ್ಷೇತ್ರದಲ್ಲಿ ಶೀಘ್ರದಲ್ಲಿ ಹೊಸ ಹೊಸ ತಾಂತ್ರಿಕ ಸಾಧನೆಗಳು ಪ್ರವೇಶಿಸುತ್ತಿವೆ. ಈ ನಿಟ್ಟನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಲ್ಲ ಬಗೆಯ ನೂತನ ಯಂತ್ರಗಳು ಮತ್ತು

ಸಾಧನಗಳ ಪ್ರಾತ್ಯಕ್ಷಿಕೆಯೊಂದನ್ನು ವ್ಯವಸ್ಥೆಮಾಡಿತ್ತು. ಕನ್ನಡದಲ್ಲಿ ಡಿ.ಟಿ.ಪಿ. ಮುದ್ರಣ ತಂತ್ರ ಅತ್ಯಂತ ಶೀಘ್ರವಾಗಿ ಮುಂದುವರಿಯುತ್ತಿದ್ದು ಮಾರುಕಟ್ಟೆಯಲ್ಲಿ ಹಲವು ಕಂಪನಿಗಳ ಕನ್ನಡ ಸಾಫ್ಟ್‌ವೇರ್ ಗಳು ಲಭ್ಯವಿವೆ. ಆದರೂ ಯಾವುದರಲ್ಲೂ ಹಳಗನ್ನಡವನ್ನು ಸುಲಭವಾಗಿ ಮುದ್ರಿಸಲಾಗುವುದಿಲ್ಲ. ವಿಶೇಷವಾಗಿ ಹಳಗನ್ನಡ ಅಕ್ಷರಗಳಾದ ಱ ಮತ್ತು ೞ ಗಳಿಗೆ ಕೊಡುವ 'ಁ' ಮತ್ತು 'ೢ' ಗಳನ್ನು ಸರಿಯಾದ ರೀತಿಯಲ್ಲಿ ಹೊಂದಿಸಲಾಗುವುದಿಲ್ಲ. 'ೞ ಈ ಸಂಜ್ಞೆಯೇ ಸಾಫ್ಟ್‌ವೇರ್‌ನಲ್ಲಿ ಇರುವುದಿಲ್ಲ. ಈ ಬಗ್ಗೆ ಸುಧಾರಣೆ ಅತ್ಯಗತ್ಯ.

ಅದೇ ರೀತಿ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಗೆ ಈವರೆಗೆ ಇದ್ದ ಮೈಕ್ರೋಫಿಲಂ ಲ್ಯಾಮಿನೇಷನ್‌ಗಳ ಜೊತೆಗೆ ಈಗಿನ ಕಂಪ್ಯೂಟರೀಕರಣದ ಹೊಸ ತಂತ್ರಜ್ಞಾನ ಪ್ರಾಯೋಜಿತವಾಗುತ್ತಿದೆ. ಹಸ್ತಪ್ರತಿಗಳನ್ನು ಅವುಗಳ ಯಥಾಸ್ಥಿತಿಯಲ್ಲಿಯೇ ಕಂಪ್ಯೂಟರ್‌ಗೆ ಚಿತ್ರೀಕರಿಸಿಕೊಂಡು ಅದೇ ಸ್ಥಿತಿಯಲ್ಲಿ ಓದಬಹುದಾದ ಸುಲಭ ಮಾರ್ಗೋಪಾಯವೊಂದನ್ನು ನಮ್ಮ ಸದಸ್ಯರೇ ಆದ ಶ್ರೀ ಬಿ. ವಿ. ವೆಂಕಟಕೃಷ್ಣ ಅವರು ಅಭಿವೃದ್ಧಿಪಡಿಸುತ್ತಿದ್ದಾರೆ. ಈ ತಂತ್ರಸಫಲವಾದಲ್ಲಿ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಅಧ್ಯಯನ ಬಹಳ ಸುಲಭವೂ ಸುರಕ್ಷಿತವೂ ಆಗಿ ಮಾರ್ಪಡುತ್ತದೆ.

೪. ವಿಚಾರ ಗೋಷ್ಠಿಗಳು

(i) **ಕರ್ನಾಟಾಂಧ್ರ ಮಹಾರಾಷ್ಟ್ರ ಸಾಂಸ್ಕೃತಿಕ ಸಾಮ್ಯತೆ** : ಇತ್ತೀಚೆಗೆ ಶಂಬಾ ವಿಚಾರ ವೇದಿಕೆ ಈ ವಿಶಿಷ್ಟ ಬಗೆಯ ವಿಚಾರಗೋಷ್ಠಿಯನ್ನು ಹಮ್ಮಿಕೊಂಡು ಆಯಾ ರಾಜ್ಯಗಳ ಗಣ್ಯರಿಂದಲೇ ಆಯಾ ರಾಜ್ಯಗಳ ಸಾಂಸ್ಕೃತಿಕ ಸಾಮ್ಯತೆಯ ಬಗೆಗೆ ಚಿಂತನ-ಮಂಥನ ನಡೆಸಿತು. ತೌಲನಿಕ ಅಧ್ಯಯನ ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ಈ ಬಗೆಯ ಪರಸ್ಪರ ಚರ್ಚೆ ಅತ್ಯಗತ್ಯ.

(ii) **ಕನ್ನಡ ಸಾಹಿತ್ಯ ಪತ್ರಿಕೆಗಳು**: ಇವುಗಳ ಇತಿಹಾಸ-ವರ್ತಮಾನವನ್ನು ಕುರಿತಂತೆ ಸಂಚಯ ಎಂಬ ಸಾಹಿತ್ಯಾಸಕ್ತರ ಬಳಗ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಒಂದು ವಿಚಾರಗೋಷ್ಠಿಯನ್ನು ನಡೆಸಿದ್ದಲ್ಲದೆ ಸಮಗ್ರ ಸಾಹಿತ್ಯ ಪತ್ರಿಕೆಗಳ ಪ್ರದರ್ಶನವನ್ನು ನಡೆಸಿತು.

(iii) **ಅತ್ತಿಮಬ್ಬೆ ಸ್ಮರಣೆ** : ಕರ್ನಾಟಕ ಲೇಖಕಿಯರ ಸಂಘ ಕನ್ನಡ ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಅತ್ತಿಮಬ್ಬೆಯನ್ನು ಕುರಿತಂತೆ ಎರಡು ದಿನಗಳ ವಿಚಾರಗೋಷ್ಠಿಯೊಂದನ್ನು ನಡೆಸಿತು. ಹತ್ತನೇ ಶತಮಾನದಲ್ಲೇ ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಬೆಳೆಸಿ ಕವಿಗಳನ್ನು ಪೋಷಿಸಿದ್ದ, ಪೊನ್ನನ ಶಾಂತಿಪುರಾಣದ ಸಾವಿರ ಗ್ರಂಥಗಳ ದಾನದಿಂದ 'ದಾನ ಚಿಂತಾಮಣಿ' ಎಂದು ಬಿರುದಾಂಕಿತಳಾಗಿದ್ದ, ಅತ್ತಿಮಬ್ಬೆ ಕರ್ನಾಟಕದಲ್ಲೇ ಪ್ರಥಮ ಶ್ರೇಷ್ಠ ಮಹಿಳೆ ಎನಿಸಿದ್ದಾಳೆ. ಮಹಾರಾಣಿಯಾಗಿ ಆಳುವುದರ ಮೂಲಕ ಮಹಿಳಾ ಸಮಾನತೆಗೆ ದ್ಯೋತಕವೂ ಆಗಿದ್ದ ಅತ್ತಿಮಬ್ಬೆಯ

ಸಹಸ್ರಾಬ್ದಿ ವರ್ಷಾಚರಣೆಯನ್ನು ಕರ್ನಾಟಕ ವಿಶೇಷವಾಗಿ ಆಚರಿಸಬೇಕಾಗಿದೆ. 1994ನೇ ವರ್ಷವನ್ನು 'ಅತ್ತಿಮಬ್ಬೆ ವರ್ಷ' ಎಂದು ಘೋಷಿಸಬೇಕಾಗಿದೆ ಎಂದು ಕರೆನೀಡಿದ ಈ ವಿಚಾರಘೋಷ್ಠಿ ಅತ್ತಿಮಬ್ಬೆಯ ಜೀವನ-ಸಾಧನೆ-ತ್ಯಾಗಗಳ ಬಗ್ಗೆ ಮತ್ತು ಜೈನಧರ್ಮದ ಬಗೆಗೆ ವಿಶೇಷವಾದ ಚಿಂತನೆಗಳನ್ನು ನಡೆಸಿತು.

೫. ಸಮಗ್ರ ಹಾಸ್ಯ ಸಾಹಿತ್ಯ :

ಇತ್ತೀಚಿನ ದಿನಗಳಲ್ಲಿ ಸಮಗ್ರಸಾಹಿತ್ಯಗಳು ಹೆಚ್ಚಾಗಿ ಪ್ರಕಟವಾಗುತ್ತಿವೆ. ಆದರೂ ಕನ್ನಡದಲ್ಲಿ ಲೇಖಕಿಯರ ಸಮಗ್ರಸಾಹಿತ್ಯ ಈವರೆಗೆ ಬಂದಿರಲಿಲ್ಲ. ಇತ್ತೀಚೆಗೆ ಕನ್ನಡದ ಖ್ಯಾತ ಹಾಸ್ಯ ಲೇಖಕಿಯರಾದ ಶ್ರೀಮತಿ ಟಿ. ಸುನಂದಮ್ಮ ಅವರ ಸಮಗ್ರ ಹಾಸ್ಯ ಸಾಹಿತ್ಯ ಕೃತಿ ಬಿಡುಗಡೆಯಾಗುವುದರ ಮೂಲಕ ಆ ಕೊರತೆ ನೀಗಿದೆ.

೬. ಸಮ್ಮೇಳನಗಳು :

(i) **ಬೆಂಗಳೂರು ನಗರ ಜಿಲ್ಲಾ ಕನ್ನಡಸಾಹಿತ್ಯ ಸಮ್ಮೇಳನ :** ನಗರ ಜಿಲ್ಲಾ ಕ.ಸಾ.ಪ. ಪ್ರಥಮಬಾರಿಗೆ ಸಮ್ಮೇಳನವನ್ನು ಸಂಘಟಿಸಿತ್ತು. ಶ್ರೀ ಜಿ. ನಾರಾಯಣ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು. ಬೆಂಗಳೂರಿನ ಹಲವು ಮುಖಗಳನ್ನು ಪರಿಚಯಿಸುವ ವಿಚಾರಗೋಷ್ಠಿಗಳು, ಕವಿಗೋಷ್ಠಿ-ಸನ್ಮಾನ-ಬಹಿರಂಗ ಸಭೆ ಹೀಗೆ ಅತ್ಯಂತ ವ್ಯವಸ್ಥಿತವಾಗಿ, ಭವ್ಯವಾಗಿ ಸಮ್ಮೇಳನ ನಡೆಯಿತು. ಕನ್ನಡದ ಪ್ರಚಲಿತ ಸಮಸ್ಯೆಗಳನ್ನು ಸಮರ್ಥರೀತಿಯಲ್ಲಿ ವಿಶ್ಲೇಷಿಸಿದ ಸಮ್ಮೇಳನ ನಗರದ ಜನರಲ್ಲಿ ಕನ್ನಡ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು.

(ii) **ಇತಿಹಾಸ ಅಕಾಡೆಮಿಯ ಸಮ್ಮೇಳನ :** ಕರ್ನಾಟಕದ ಇತಿಹಾಸ ಅಕಾಡೆಮಿ ಪ್ರತಿವರ್ಷ ನಡೆಸುವ ವಾರ್ಷಿಕ ಸಮ್ಮೇಳನ ಮೈಸೂರಿನಲ್ಲಿ ನಡೆಯಿತು. ಜುಲೈ 23, 24, 25ರಂದು ಜೆ.ಎಸ್.ಎಸ್. ಮಹಾ ವಿದ್ಯಾಪೀಠದಲ್ಲಿ ನಡೆದ ಈ ಏಳನೇ ಸಮ್ಮೇಳನದಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಇತಿಹಾಸಜ್ಞರು, ತರುಣ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ಸಮ್ಮೇಳನದ ಅಧ್ಯಕ್ಷರಾಗಿ ಪ್ರಸಿದ್ಧ ಶಾಸನ, ಇತಿಹಾಸ ಮತ್ತು ಪುರಾತತ್ವ ಸಂಶೋಧಕರಾದ ಡಾ|| ಅ. ಸುಂದರ ಅವರು ಆಯ್ಕೆಯಾಗಿದ್ದರು. ಸಮ್ಮೇಳನದಲ್ಲಿ ಇತಿಹಾಸದರ್ಶನವನ್ನು ಒಳಗೊಂಡಂತೆ ಇನ್ನೂ ಎರಡು ಇತಿಹಾಸ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು. ಪ್ರತಿ ಸಮ್ಮೇಳನದಲ್ಲಿ ಬಿಡುಗಡೆ ಮಾಡುವ 'ಇತಿಹಾಸದರ್ಶನ' ಹಿಂದಿನ ಸಮ್ಮೇಳನದ ಪ್ರಬಂಧಗಳ ಸಂಪುಟ. ಇತಿಹಾಸ ಅಕಾಡೆಮಿಯು ಸಂಘಟಿಸುವ ಈ ಸಮ್ಮೇಳನ, ನಡೆಸುವ ಇತಿಹಾಸ ಪರೀಕ್ಷೆಗಳು ಕರ್ನಾಟಕ ಇತಿಹಾಸದ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸುವಲ್ಲಿ ಸಹಕಾರಿಯಾಗುತ್ತಿವೆ.

ಪ್ರತಿಷ್ಠಾನ ವಾರ್ತೆ

೧. **ಶ್ರೀ ಜಿ. ಚನ್ನವೀರಸ್ವಾಮಿ**, ಗೌ|| ಕಾರ್ಯದರ್ಶಿಗಳಾಗಿ 20-10-93ರ ಕಾರ್ಯ ಸಮಿತಿ ಸಭೆಯು ಈಗಿರುವ ಗೌ|| ಕಾರ್ಯದರ್ಶಿಗಳಾದ ಶ್ರೀ ಜಿ. ಎಸ್. ವೆಂಕಟರಾಜು ಮತ್ತು ಶ್ರೀನಾಗೀತಾಚಾರ್ಯ ಅವರುಗಳ ಜೊತೆಗೆ ಶ್ರೀ ಜಿ. ಚನ್ನವೀರಸ್ವಾಮಿ ಅವರನ್ನು ಗೌ|| ಕಾರ್ಯದರ್ಶಿಗಳನ್ನಾಗಿ ನೇಮಕಮಾಡಿದ್ದು ಶ್ರೀಯುತರು ಒಪ್ಪಿ ಸಹಕರಿಸಿದ್ದಾರೆ. ಶ್ರೀಯುತರು ವಿದ್ಯಾ ಇಲಾಖೆಯಲ್ಲಿ ನಿವೃತ್ತ ಉಪ ನಿರ್ದೇಶಕರಾಗಿದ್ದು ಸಂಸ್ಕೃತ ಎಂ.ಎ. ಪದವೀಧರರೂ ಆಗಿದ್ದಾರೆ. ಸಾಹಿತ್ಯ ಮತ್ತು ಸಮಾಜಸೇವೆಯಲ್ಲಿ ವಿಶೇಷ ಆಸಕ್ತಿಯುಳ್ಳ ಶ್ರೀ ಚನ್ನವೀರಸ್ವಾಮಿಗಳು ಕೆಲವುಕಾಲ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರೂ ಆಗಿ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲೂ ಗೌ|| ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಪ್ರತಿಷ್ಠಾನದ ವಾರ್ಷಿಕ ಅನುದಾನ ಮತ್ತು ನಿವೇಶನ ಸಂಬಂಧದಲ್ಲಿ ಸರ್ಕಾರದೊಂದಿಗೆ ವ್ಯವಹರಿಸುವಲ್ಲಿ ಶ್ರೀಯುತರು ಪ್ರತಿಷ್ಠಾನಕ್ಕೆ ವಿಶೇಷವಾಗಿ ನೆರವಾಗುತ್ತಿದ್ದಾರೆ. ಅವರ ಅಧಿಕಾರ ಅವಧಿಯಲ್ಲಿ ಪ್ರತಿಷ್ಠಾನ ಹೆಚ್ಚು ವ್ಯಾಪಕವಾಗಿ ಬೆಳೆಯಲಿ ಎಂದು ಆಶಿಸುತ್ತೇವೆ.

೨. **ವಿಚಾರ ಗೋಷ್ಠಿಗಳು :**

(i) **ಕನ್ನಡ ಜಾಗೃತಿ ಏಕೆ-ಹೇಗೆ ? ವಿಚಾರಗೋಷ್ಠಿ :** ಪ್ರತಿಷ್ಠಾನದಲ್ಲಿ ಎಂ.ವಿ.ಸೀ ಅಭಿಮಾನಿಗಳೂ, ಶಿಷ್ಯರೂ ಮತ್ತು ವಿಶೇಷವಾದ ಕನ್ನಡ ಕಾರ್ಯಕರ್ತರೂ ಸ್ಥಾಪಿಸಿರುವ, 'ಎಂ.ವಿ.ಸೀ. ಕನ್ನಡ ಪತ್ತಿಯ ಎರಡನೇ ವರ್ಷದ ಕಾರ್ಯಕ್ರಮವಾಗಿ ನಡೆದ ಕನ್ನಡ ಜಾಗೃತಿ ಕುರಿತ ಈ ವಿಚಾರಗೋಷ್ಠಿಯನ್ನು ಕನ್ನಡ ಶಕ್ತಿಕೇಂದ್ರದ ಸಹಯೋಗದಲ್ಲಿ ರವೀಂದ್ರ ಕಲಾಕ್ಷೇತ್ರದ ವಿಶ್ರಾಂತ ಗೃಹದಲ್ಲಿ ದಿನಾಂಕ 18-1-94ರಂದು ನಡೆಸಲಾಯಿತು. ಡಾ|| ಎಂ. ಚಿದಾನಂದಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಪ್ರೊ|| ಎಂ. ಎಚ್. ಕೃಷ್ಣಯ್ಯ, ಪ್ರೊ|| ಎಚ್. ಎಂ. ಮರುಳಸಿದ್ದಯ್ಯ, ಶ್ರೀ ವೇಣುಗೋಪಾಲ ಸೊರಬ ಮತ್ತು ಶ್ರೀಮತಿ ಇಂದಿರಹೆಗಡೆ ಅವರುಗಳು ವಿಚಾರಮಂಥನ ನಡೆಸಿದರು.

(ii) **ಎಂ. ಆರ್. ಶ್ರೀ ಜನ್ಮಶತಾಬ್ದಿ ಸ್ಮರಣೆಯ ವಿಚಾರಗೋಷ್ಠಿ :** ಎಂ. ಆರ್. ಶ್ರೀನಿವಾಸಮೂರ್ತಿಗಳ ಬದುಕು-ಬರಹ ಕುರಿತು ಆಗಸ್ಟ್ 1 ರಂದು ನಡೆದ ಈ ವಿಚಾರಗೋಷ್ಠಿಯನ್ನು ಪ್ರತಿಷ್ಠಾನದ ಗೌರವ ಸದಸ್ಯರೂ ಹಿರಿಯ ಸಾಹಿತಿಗಳೂ ಆದ ಪ್ರೊ|| ಎ. ಎನ್. ಮೂರ್ತಿರಾವ್ ಅವರು ಉದ್ಘಾಟನೆ ಮಾಡಿದರು. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸಿ. ಕೆ. ನಾಗರಾಜರಾವ್ ಅವರು ಮುಖ್ಯ ಅತಿಥಿಗಳಾಗಿದ್ದರು.

ನಂತರ ನಡೆದ ಎರಡು ಗೋಷ್ಠಿಗಳಲ್ಲಿ ಪ್ರೊ॥ ಎನ್. ಬಸವಾರಾಧ್ಯ ಅವರ ಅಧ್ಯಕ್ಷತೆಯಲ್ಲಿ ಡಾ॥ ಎನ್. ಎಸ್. ತಾರಾನಾಥ್, ಪ್ರೊ॥ ಜಿ. ಅಶ್ವತ್ಥನಾರಾಯಣ, ಶ್ರೀ ಡಿ.ವಿ. ಪರಮಶಿವಮೂರ್ತಿ ಅವರೂ ಪ್ರೊ॥ ಎಲ್.ಎಸ್.ಶೇಷಗಿರಿರಾವ್ ಅವರ ಅಧ್ಯಕ್ಷತೆಯಲ್ಲಿ ಡಾ॥ ಪಿ. ವಿ. ನಾರಾಯಣ, ಪ್ರೊ॥ ಅ. ರಾ. ಮಿತ್ರ, ಡಾ॥ ವಿಜಯ, ಶ್ರೀ ಕೆ. ವಿ. ಲೋಕೇಶ್ವರಪ್ಪ ಅವರೂ ಎಂ. ಆರ್. ಶ್ರೀ ಅವರ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತಂತೆ ಪ್ರಬಂಧಮಂಡಿಸಿದರು. ಸಂಜೆ ಡಾ॥ ಎಂ. ಚಿದಾನಂದಮೂರ್ತಿ ಅವರು ಮತ್ತು ಶ್ರೀ ತ್ರಿವಿಕ್ರಮ ಅವರು ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 'ಪುಸ್ತಕಮನೆ'ಯ ಶ್ರೀ ಹರಿಹರಪ್ರಿಯ ಅವರಿಂದ ಎಂ. ಆರ್. ಶ್ರೀ ಅವರ ಪುಸ್ತಕಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡಿದ್ದರು.

ಎಂ. ಆರ್. ಶ್ರೀ ದತ್ತಿ ಸ್ಥಾಪನೆ : ಇದೇ ಸಂದರ್ಭದಲ್ಲಿ ಎಂ. ಆರ್. ಶ್ರೀ ಅವರ ಮಕ್ಕಳಾದ ಶ್ರೀ ಎಂ. ಎಸ್. ಭೀಮರಾವ್ ಮತ್ತು ಎಂ. ಎಸ್. ಜನಾರ್ಧನ ಇವರುಗಳು ಪ್ರತಿಷ್ಠಾನದಲ್ಲಿ 'ಎಂ.ಆರ್.ಶ್ರೀ ದತ್ತಿನಿಧಿ'ಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 1000-00 ರೂ.ಗಳ ಅಧಿಕೃತ ಕೇವಣಿಯನ್ನು ನೀಡಿದರಲ್ಲದೆ ಶ್ರೀಯುತರು ನೀಡಿದ್ದ ಎಂ.ಆರ್.ಶ್ರೀ ಭಾವಚಿತ್ರವನ್ನೂ ಅನಾವರಣ ಮಾಡಿದರು.

(iii) **ಕಿಟ್ಟೆಲ್ ಕನ್ನಡ ನಿಘಂಟಿನ ಶತಮಾನೋತ್ಸವ ನೆನಪಿನ ವಿಚಾರಗೋಷ್ಠಿ :** ದಿನಾಂಕ 25-12-1993ರಂದು ನಡೆಸಿದ ವಿಚಾರಗೋಷ್ಠಿಯಲ್ಲಿ ಕಿಟ್ಟೆಲ್ ಅವರ ಜೀವನ ಸಾಧನೆ ಕುರಿತಂತೆ ವಿವಿಧ ವಿದ್ವಾಂಸರು ಉಪನ್ಯಾಸಗಳನ್ನು ನೀಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಉದ್ಘಾಟನೆ ಮಾಡಿದರು. ಪ್ರೊ॥ ಕೆ. ಎಸ್. ಮಧುಸೂದನ, ಡಾ॥ ವೈ. ಸಿ. ಭಾನುಮತಿ, ಪ್ರೊ॥ ಅ. ರಾ. ಮಿತ್ರ, ಪ್ರೊ॥ ಕೆ. ಆರ್. ಗಣೇಶ್ ಪ್ರೊ॥ ಜಿ. ಅಶ್ವತ್ಥನಾರಾಯಣ, ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ ಅವರುಗಳು ಭಾಗವಹಿಸಿದ್ದರು.

ಈ ಎರಡೂ ವಿಚಾರಗೋಷ್ಠಿಯ ಲೇಖನಗಳು ಪುಸ್ತಕ ರೂಪದಲ್ಲಿ ಮುಂದೆ ಪ್ರಕಟವಾಗುತ್ತವೆ.

೩. ಸಾವಿತ್ರಮ್ಮ ದತ್ತಿನಿಧಿ ಸಾಹಿತ್ಯ ಪ್ರಶಸ್ತಿ ಪ್ರದಾನ : 1992ನೇ ಸಾಲಿನ ಈ ಪ್ರಶಸ್ತಿಯನ್ನು 'ಮಹಿಳೆ ಬಿಡುಗಡೆಯ ಹಾದಿಯಲ್ಲಿ' ಕೃತಿಗಾಗಿ ಲೇಖಕಿ ಶ್ರೀಮತಿ ಎನ್. ಗಾಯಿತ್ರಿ ಅವರಿಗೆ ಕಿಟ್ಟೆಲ್ ವಿಚಾರಗೋಷ್ಠಿಯ ಸಮಾರೋಪ ಸಮಾರಂಭದಲ್ಲಿ ವಿತರಣೆಮಾಡಲಾಯಿತು. 1000.00 ರೂ.ಗಳನ್ನು ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

೪ 'ಸಾಹಿತ್ಯೋಪಾಸಕರು' ವಿಶೇಷ ಕಾರ್ಯಕ್ರಮ ಮಾಲಿಕೆ ಆರಂಭ :

10-9-93ರಂದು ಸಂಸ್ಥಾಪಕ ಎಂ. ವಿ. ಸೀತಾರಾಮಯ್ಯನವರ ಜನ್ಮದಿನದಂದು ಪ್ರತಿಷ್ಠಾನ 'ಸಾಹಿತ್ಯೋಪಾಸಕರು' ಎಂಬ ವಿಶೇಷ ಕಾರ್ಯಕ್ರಮ ಮಾಲಿಕೆಯನ್ನು ಆರಂಭಿಸಿತು. ಕಣ್ಮರೆಯಾಗಿರುವ ಕನ್ನಡ ಸಾಹಿತಿಗಳ, ನಾಡು–ನುಡಿಗಾಗಿ ಸೇವೆ ಸಲ್ಲಿಸಿರುವ ಗಣ್ಯರ ಸಂಸ್ಮರಣೆ ಮತ್ತು ಅವರ ಜೀವನ-ಸಾಹಿತ್ಯದ ಪುನರ್‌ಮೌಲ್ಯ ವಿವೇಚನೆ ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಪ್ರತಿ ತಿಂಗಳೂ ಒಬ್ಬೊಬ್ಬರನ್ನು ಕುರಿತು ಉಪನ್ಯಾಸ, ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗುವುದು. ಇದು ನಿರಂತರ ಕಾರ್ಯಕ್ರಮ ಮಾಲಿಕೆ. ಮೊದಲ ಹಂತವಾಗಿ 1800ರ ಆರಂಭದಿಂದ ಬರುವ ಮಹತ್ವದ ಲೇಖಕರನ್ನು ಈ ಮಾಲಿಕೆಯಲ್ಲಿ ಸ್ಮರಿಸಲಾಗುತ್ತದೆ. ವರ್ಷದ ಈ ಮಾಲಿಕೆಯ ಎಲ್ಲ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಆಲೋಚನೆಯೂ ಇದೆ. ಈ ಕಾರ್ಯಕ್ರಮಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಯ ನೆರವನ್ನೂ ಕೋರಲಾಗಿದೆ. ಗೋಖಲೆ ಸಂಸ್ಥೆ ಸಭಾಂಗಣದ ನೆರವನ್ನು ನೀಡಲು ಮುಂದೆ ಬಂದಿದ್ದರೆ ಪ್ರತಿಷ್ಠಾನದ ಹಿತೈಷಿಗಳಾದ ಶ್ರೀ ಎ. ನರಸಿಂಹಮೂರ್ತಿ ಅವರು ಪ್ರತಿ ಕಾರ್ಯಕ್ರಮಕ್ಕೂ ವನ್ನೂ 500-00 ರೂ.ಗಳ ಉದಾರ ನೆರವನ್ನು ನೀಡಲು ಮುಂದೆ ಬಂದಿದ್ದಾರೆ.

ಈ ಮಹತ್ವದ ಕಾರ್ಯಕ್ರಮ ಮಾಲಿಕೆಯನ್ನು ಕನ್ನಡ ಸಂಸ್ಕೃತಿ ನಿರ್ದೇಶಕರಾದ ಶ್ರೀ ಎ. ರ. ಕುಲಕರ್ಣಿ ಇವರು ಉದ್ಘಾಟಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ|| ಎಲ್. ಎಸ್. ಶೇಷಗಿರಿರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಬಾ. ಹ. ಉಪೇಂದ್ರ ಎಂ. ವಿ. ಸೀ. ಕುರಿತ ಸಾಹಿತ್ಯವನ್ನು ಸಮೀಕ್ಷಿಸಿದರು. ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದ ಶ್ರೀಮತಿ ಜಯಾ ಪಾರ್ಥಸಾರಥಿ ಮತ್ತು ಶ್ರೀ ಶ್ರೀಪಾದ ಅವರಿಂದ ಎಂ.ವಿ.ಸೀ. ಭಾವಗೀತೆಗಳ ಗಾಯನ ಕಾರ್ಯಕ್ರಮವೂ ಇತ್ತು.

ನಂತರ 30-10-93ರಂದು ಈ ಮಾಲಿಕೆಯ ಎರಡನೇ ಕಾರ್ಯಕ್ರಮವಾಗಿ ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಅಧ್ಯಕ್ಷತೆಯಲ್ಲಿ ಡಾ|| ಎನ್. ಎಸ್. ತಾರಾನಾಥ ಅವರು ಕಾನಕಾನಹಳ್ಳಿ ವರದಾಚಾರ್ ಅವರನ್ನು ಕುರಿತು ಉಪನ್ಯಾಸ ನಡೆಸಿಕೊಟ್ಟರೆ, ಮೂರನೇ ಕಾರ್ಯಕ್ರಮವಾಗಿ ಕಿಟ್ಟೆಲ್ ಕುರಿತ ವಿಚಾರಗೋಷ್ಠಿ ನಡೆಯಿತು.

ಈ ಕಾರ್ಯಕ್ರಮವನ್ನು ನಡೆಸಲು ಶ್ರೀ ಕೆ. ಬಿ. ಲೋಕೇಶ್ವರಪ್ಪ ಸಂಚಾಲಕರಾಗಿರುವ ಒಂದು ಸಮಿತಿಯನ್ನು ರಚಿಸಲಾಗಿದೆ.

೫. ಸಹೃದಯ ಗೋಷ್ಠಿ

ಶ್ರೀ ಕೆ. ಬಸವರಾಜಪ್ಪ ಮತ್ತು ಶ್ರೀ ಮುತ್ತುರಾಜು ಅವರು ಸಂಚಾಲಕರಾಗಿ ಸಹೃದಯಗೋಷ್ಠಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. 26-6-1993ರಂದು

ಶ್ರೀ ಬಸವರಾಜಪ್ಪ, 17-7-93ರಂದು ಶ್ರೀ ಅಳ್ಳ ಚಿರಂಜೀವಿ. 30-8-93ರಂದು ಶ್ರೀ ಪಿ. ವಿ. ಕೃಷ್ಣಮೂರ್ತಿ, 24-9-93 ರಂದು ವೈ. ಎಸ್. ಕೃಷ್ಣಮೂರ್ತಿ 27-10-93 ರಂದು ಶ್ರೀ ಎಂ. ಡಿ. ವಿಶ್ವೇಶ್ವರ, 26-11-93ರಂದು ಶ್ರೀ ತಾ. ಶಾ. ಗುರುರಾಜ್ ಅವರುಗಳು ಸಹೃದಯಗೋಷ್ಠಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

೬. ಹಸ್ತಪ್ರತಿಶಾಸ್ತ್ರ ತರಗತಿ :

ಸರಸ್ವತಿ ಪೂಜೆಯದಿನ 20-10-93ರಂದು ಪ್ರತಿಷ್ಠಾನ ನಡೆಸುತ್ತಿರುವ ಹಸ್ತಪ್ರತಿ ಶಾಸ್ತ್ರ ತರಗತಿಗಳ ನಾಲ್ಕನೇ ತಂಡದ ತರಗತಿಯನ್ನು ಡಾ|| ಸೂರ್ಯನಾಥ ಕಾಮತ್ ಅವರು ಉದ್ಘಾಟನೆ ಮಾಡಿದರು. ಇದೇ ಸಂದರ್ಭದಲ್ಲಿ ವ್ಯವಸ್ಥೆಮಾಡಿದ್ದ ಹಸ್ತಪ್ರತಿಗಳ ಪ್ರದರ್ಶನವನ್ನು ಶ್ರೀ ಜಿ. ನಾರಾಯಣ ಅವರು ಉದ್ಘಾಟನೆ ಮಾಡಿದರು.

೭. ಪುಸ್ತಕ ಪ್ರದರ್ಶನ ಮತ್ತು ಮನೆ ಮನೆಗೆ ಪುಸ್ತಕ ಮಾರಾಟ :

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಪ್ರಕಾಶಕರ ಸಂಘಗಳ ಸಹಯೋಗದೊಂದಿಗೆ ಸ್ಥಳೀಯ ನಗರಸಭಾ ಸದಸ್ಯರಾದ ಶ್ರೀ ಕೆ. ಚಂದ್ರಶೇಖರ್ ಅವರ ನೆರವಿನೊಂದಿಗೆ ಹನುಮಂತನಗರದ ಬಸ್ ನಿಲ್ದಾಣದಲ್ಲಿ ನಗರಸಭಾ ಕಟ್ಟಡದಲ್ಲಿ ಮೂರು ದಿನಗಳ ಪುಸ್ತಕ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಹಮ್ಮಿಕೊಂಡಿತ್ತು. ರಾಜ್ಯೋತ್ಸವದ ದಿನ 1-11-93ರಂದು ಕನ್ನಡ ಕಾರ್ಯಕರ್ತರ ನೆರವಿನಿಂದ ಹನುಮಂತನಗರ ಬಡಾವಣೆಯಲ್ಲಿ ಮನೆ ಮನೆಗೆ ಪುಸ್ತಕ ಮಾರಾಟವನ್ನು ವ್ಯವಸ್ಥೆಮಾಡಲಾಗಿತ್ತು.

೮. ಮಾಸ್ತಿ ನಗರ ಮತ್ತು ಎಂ. ವಿ. ಸೀತಾರಾಮಯ್ಯ ರಸ್ತೆ ನಾಮಕರಣ :

ಪ್ರತಿಷ್ಠಾನದ ಮತ್ತು ಬಡಾವಣೆಯ ಅಭಿಮಾನಿಗಳ ಕೋರಿಕೆಯಂತೆ ಬೆಂಗಳೂರು ಮಹಾನಗರ ಪಾಲಿಕೆಯು ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ವಾಸವಾಗಿದ್ದ ಬಡಾವಣೆಗೆ (ಗವೀಪುರ ವಿಸ್ತರಣ) ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬಡಾವಣೆ (ಮಾಸ್ತಿ ನಗರ) ಎಂದೂ,ಅದೇ ಬಡಾವಣೆ 3ನೇ ಕ್ರಾಸ್‌ಗೆ ಪ್ರೊ|| ಎಂ. ವಿ. ಸೀತಾರಾಮಯ್ಯ ರಸ್ತೆ' ಎಂದೂ ನಾಮಕರಣ ಮಾಡಿದೆ. ಮಹಾನಗರ ಪಾಲಿಕೆಗೂ ಬಡಾವಣೆಯ ಪಾಲಿಕೆಯ ಸದಸ್ಯರಾದ ಶ್ರೀ ಚಂದ್ರಶೇಖರ್ ಅವರಿಗೂ ಪ್ರತಿಷ್ಠಾನ ಕೃತಜ್ಞವಾಗಿದೆ.

ಅಭಿನಂದನೆ

ರಾಜ್ಯ ಪ್ರಶಸ್ತಿ ;

1993ನೇ ವರ್ಷದ ರಾಜ್ಯೋತ್ಸವ ಪ್ರಶಸ್ತಿಯನ್ನು ಶ್ರೀ ಗೌರೀಶ್ ಕಾಯ್ಕಿಣಿ, ಡಾ|| ಶಾಂತಿನಾಥ ದೇಸಾಯಿ, ಡಾ|| ಶ್ರೀನಿವಾಸ ಹಾವನೂರು, ಪ್ರೊ|| ರಾಮಚಂದ್ರ ಶಾಸ್ತ್ರಿ, ವಿದ್ವಾನ್ ಎನ್. ರಂಗನಾಥಶರ್ಮ ಮುಂತಾದ ಗಣ್ಯರಿಗೆ ರಾಜ್ಯ ಸರ್ಕಾರ ನೀಡಿ ಗೌರವಿಸಿದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಪ್ರೊ|| ಎಲ್. ಎಸ್. ಎಸ್. :

ರಾಜ್ಯ ಸರ್ಕಾರ ಹೊಸದಾಗಿ ಸ್ಥಾಪಿಸಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಪ್ರೊ|| ಎಲ್. ಎಸ್. ಶೇಷಗಿರಿರಾವ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕಮಾಡಿದೆ. ಪುಸ್ತಕ ಪ್ರಕಟನೆ, ಪ್ರಕಟನೆಗೆ ಧನ ಸಹಾಯ, ಪುಸ್ತಕ ಮಾರಾಟ, ಪುಸ್ತಕ ಕೊಳ್ಳುವುದು ಇತ್ಯಾದಿ ಪುಸ್ತಕೋದ್ಯಮಕ್ಕೇ ಮೀಸಲಾದ ಕನ್ನಡ ಪುಸ್ತಕ ಪ್ರಾಧಿಕಾರದ ರಚನೆಯಿಂದ ಸೊರಗಿರುವ ಕನ್ನಡ ಪುಸ್ತಕ ಪ್ರಕಾಶನ ಮತ್ತು ಮಾರಾಟ ಮತ್ತೆ ಚಿಗುರುವ ಭರವಸೆಯಿದೆ. ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಪ್ರೊ|| ಶೇಷಗಿರಿರಾವ್ ಅವರು ಈ ಪ್ರಾಧಿಕಾರಕ್ಕೆ ಸಮರ್ಥ ಆಯ್ಕೆಯಾಗಿದ್ದಾರೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ|| ಚದುರಂಗ :

ಮಂಡ್ಯದಲ್ಲಿ ಬರುವ ಫೆಬ್ರವರಿಯಲ್ಲಿ ನಡೆಯಲಿರುವ ಅಖಿಲಭಾರತ 63ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮೈಸೂರಿನ ಖ್ಯಾತ ಕಾದಂಬರಿಕಾರರಾದ ಡಾ|| ಚದುರಂಗ ಅವರನ್ನು ಆಯ್ಕೆಮಾಡಲಾಗಿದೆ. ಚದುರಂಗ ಅವರು ವಿಶಿಷ್ಟ ಶೈಲಿಯ ಕಾದಂಬರಿಕಾರರಾಗಿದ್ದಾರೆ. 'ವೈಶಾಖ'ಅಂತಹ ಕೃತಿಗಳ ಮೂಲಕ ಕನ್ನಡ ಓದುಗ ಲೋಕವನ್ನು ಆಕರ್ಷಿಸಿರುವ ಚದುರಂಗರು ಒಂದು ತಲೆಮಾರಿನ ಲೇಖಕರಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದಾರೆ. ಎಂ. ಸುಬ್ರಹ್ಮಣ್ಯರಾಜೇ ಅರಸ್ ಅವರು ತಮ್ಮ ಕಾವ್ಯನಾಮವಾದ 'ಚದುರಂಗ' ಎಂಬ ಹೆಸರಿನಿಂದಲೇ ಹೆಚ್ಚು ಪ್ರಸಿದ್ಧರಾಗಿದ್ದಾರೆ.

ಈ ಎಲ್ಲ ಮಹನೀಯರಿಗೆ ಪ್ರತಿಷ್ಠಾನ ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

——

ಶ್ರದ್ಧಾಂಜಲಿ

ಡಾ|| ಎ. ಕೆ. ರಾಮಾನುಜನ್

ತಮ್ಮ ಸೇವೆಯ ಬಹುಪಾಲನ್ನು ವಿದೇಶದಲ್ಲೇ ಕಳೆದಿದ್ದ ಅತ್ತಿಪ್ಪಟ್ ಕೃಷ್ಣ ಸ್ವಾಮಿ ರಾಮಾನುಜನ್ ಅವರು ತಮ್ಮ ಅರವತ್ತರ ಹರೆಯದಲ್ಲೇ ಜೂನ್ 14, 1993 ರಂದು ಇಲ್ಲವಾದರು. ಅಸಾಧ್ಯ ಪ್ರತಿಭೆಯ ಸಜ್ಜನಿಕೆ ಮತ್ತು ಸರಳ ಸ್ವಭಾವದ ಕವಿ ರಾಮಾನುಜನ್ 'ಹೊಕ್ಕುಳಲ್ಲಿ ಹೂವಿಲ್ಲ', 'ಹಳದಿ ಮೀನು' ಮುಂತಾದ ಅತ್ಯುತ್ತಮ ಕವನ ಸಂಕಲನಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾ ವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಪ್ರಾಧ್ಯಾಪಕರಾಗಿದ್ದ ರಾಮಾನುಜನ್ ಕಾದಂಬರಿ ಮತ್ತು ಜಾನಪದ ಕ್ಷೇತ್ರದಲ್ಲೂ ಕೆಲಸ ಮಾಡಿದವರು. ಇಂಗ್ಲಿಷ್‌ನಲ್ಲೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಕನ್ನಡದ ಕೆಲವು ಕೃತಿಗಳನ್ನು ಇಂಗ್ಲಿಷ್‌ನಲ್ಲಿ ಉತ್ತಮವಾಗಿ ಭಾಷಾಂತರಿಸಿದ್ದಾರೆ.

ಡಾ|| ವರದರಾಜ ಹುಯಿಲಗೋಳ

ಸಂಶೋಧಕರೂ, ಸೃಜನ ಶೀಲ ಬರಹಗಾರರೂ ಆದ ಡಾ|| ಹುಯಿಲಗೋಳರು ಅಕ್ಟೋಬರ್ 10ರಂದು ಕನ್ನಡ ಸಾರಸ್ವತ ಲೋಕವನ್ನು ಅಗಲಿದರು. ಅವರ ಪಂಚತಂತ್ರ ಕುರಿತ ಸಂಶೋಧನಾ ಮಹಾಪ್ರಬಂಧ ಶಾಶ್ವತವಾಗಿ ನಿಲ್ಲುವಂತಹುದು. ಎಪ್ಪತ್ತಾರು ವರ್ಷಗಳ ತುಂಬು ಜೀವನದಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಜಿ. ಬಿ. ಜೋಶಿ

'ಜಡಭರತ' ಎಂದೇ ಪ್ರಖ್ಯಾತರಾಗಿದ್ದ ಧಾರವಾಡದ ಗೋವಿಂದಾಚಾರ್ಯ ಭೀಮಾಚಾರ್ಯ ಜೋಶಿ ಅವರು ದಿನಾಂಕ 26-12-1993ರಂದು ನಮ್ಮನ್ನಗಲಿದರು. 'ಕದಡಿದ ನೀರು', 'ಸತ್ತವರ ನೆರಳು', 'ನಾನೇ ಬಿಜ್ಜಳ' ಇನ್ನೂ ಮುಂತಾದ ಪ್ರಸಿದ್ಧ ನಾಟಕಗಳನ್ನು 'ಧರ್ಮಸೆರೆ' (ಕಾದಂಬರಿ) 'ಜಡಭರತನ ಕನಸುಗಳು' (ಪ್ರಬಂಧ ಸಾಹಿತ್ಯ) ಮುಂತಾದ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿರುವ ಜಿ. ಬಿ. ಜೋಶಿ ಅವರು ಮಹತ್ವದ ಲೇಖಕರಲ್ಲಿ ಒಬ್ಬರು. 'ಮನೋಹರ ಗ್ರಂಥಮಾಲೆ' ಇವರ ಇನ್ನೊಂದು ಬಹಳ ದೊಡ್ಡ ಸಾಧನೆ. ಕನ್ನಡ ಸಾಹಿತ್ಯದ ಎಲ್ಲ ಪ್ರಮುಖ ಲೇಖಕರ ಕೃತಿಗಳೂ ಈ ಗ್ರಂಥಮಾಲೆಯಲ್ಲಿ ಬೆಳಕು ಕಂಡಿವೆ. ಇದರ ಮೂಲಕ ಜೋಶಿಯವರು ಪ್ರಕಟಿಸುತ್ತಿದ್ದ 'ಮನ್ವಂತರ' ಸಾಹಿತ್ಯಲೋಕದ ಮುಖ್ಯ ಪತ್ರಿಕೆಯಾಗಿದೆ. 'ನಡೆದುಬಂದ ದಾರಿ' 'ಪುಟ ಬಂಗಾರ'ಗಳು ಕ್ರಮವಾಗಿ ಗ್ರಂಥಮಾಲೆಯ ಬೆಳ್ಳಿ ಮತ್ತು ಸುವರ್ಣಮಹೋತ್ಸವ ಸಂಪುಟಗಳಾಗಿ ಕನ್ನಡ ವಿಮರ್ಶನ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ರಹಮಾನ್ ಖಾನ್

ರಹಮಾನ್‌ಖಾನ್ ಅಪಾರ ಕಾಳಜಿಯಿದ್ದ ಕನ್ನಡದ ನಿಷ್ಠಾವಂತ ಕಾರ್ಯಕರ್ತ. ಅತ್ಯಂತ ಉತ್ಸಾಹಶೀಲರಾದ ನಿರ್ಭಿಡೆಯ ಮನೋಭಾವದ ಖಾನ್ ಕನ್ನಡಕ್ಕೆ ಅನ್ಯಾಯವಾದ ಕಡೆ ಯಾರಿಗೂ ಹೆದರದೆ, ಜಗ್ಗದೆ ಜಗ್ಗಿಸುತ್ತಿದ್ದ, ಪ್ರತಿಭಟಿಸುತ್ತಿದ್ದ ಕೆಚ್ಚೆದೆಯ ವೀರ ಎಂದರೆ ತಪ್ಪಲ್ಲ. ಕನ್ನಡ ಹೋರಾಟ ಎಲ್ಲೇ ನಡೆಯಲಿ ಅಲ್ಲಿ ರಹಮಾನ್‌ಖಾನ್ ಇರುತ್ತಿದ್ದರು. ಪ್ರತಿಷ್ಠಾನದ ಅಧ್ಯಕ್ಷರಾದ ದಿವಂಗತ ಎಂ. ವಿ. ಸೀತಾರಾಮಯ್ಯನವರ ಜೊತೆ ಖಾನ್ ಸಂಪರ್ಕ ಕನ್ನಡ ಚಳವಳಿಯ ಸಂದರ್ಭದಲ್ಲಿ ಬಹಳ ನಿಕಟವಾಗಿತ್ತು. ಸೀತಾರಾಮಯ್ಯನವರನ್ನು ಸ್ಫೂರ್ತಿಯಾಗಿಟ್ಟುಕೊಂಡು ಹೋರಾಟದ ಬಿಸಿಯನ್ನು ಏರಿಸುತ್ತಿದ್ದರು. ಕಾರ್ಯಕರ್ತರನ್ನು ಹುರಿದುಂಬಿಸುತ್ತಿದ್ದರು. ತಾರಕ ಸ್ವರದಲ್ಲಿ ಘೋಷಣೆಗಳನ್ನು ಹಾಕಿಯೇ ಅವರು ಗಂಟಲಿನ ಶಸ್ತ್ರಕ್ರಿಯೆಗೆ ಒಳಗಾಗಿದ್ದರು. ವಿವಿಧ ಸಂಘಟನೆಗಳ ಜೊತೆಯಲ್ಲಲ್ಲದೆ ತಾನೇ ಕಟ್ಟಿದ್ದ ಕನ್ನಟ ಸಂಘರ್ಷ ಸಮಿತಿಯ ಮೂಲಕವೂ ಅವಿರತವಾಗಿ ಹೋರಾಡುತ್ತಾ ಕನ್ನಡ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದ ರಹಮಾನ್‌ಖಾನ್ ಮತೀಯವಾಗಿ ಮಹಮ್ಮದೀಯನಾದರೂ ಭಾಷಿಕನಾಗಿ ಅಚ್ಚಕನ್ನಡಿಗ. ಈ ಮಣ್ಣಿನಲ್ಲಿ ಹುಟ್ಟಿ, ಬೆಳೆದು ಈ ಮಣ್ಣಿನ ಋಣಕ್ಕಾಗಿ ಬದುಕುತ್ತಿದ್ದ ಭಾವಜೀವಿ. ಮತೀಯವಾಗಿ ಭಿನ್ನಾಭಿಪ್ರಾಯ ಮೂಡಿಸುವ, ಒಡಕುಂಟುಮಾಡುವ ಜನರಿಗೆ ರಹಮಾನ್‌ಖಾನ್ ಅಂತಹವರು ಏಕತೆಯ ಸೂತ್ರವಾಗಬೇಕು, ಮಾದರಿಯಾಗಬೇಕು. ಇಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದ ರಹಮಾನ್‌ಖಾನ್ 1993 ಅಕ್ಟೋಬರ್ 14ರಂದು ಅಸುನೀಗಿದರು.

ಶ್ರೀಮತಿ ವಿಶಾಲಾಕ್ಷಿ

ಆಚಾರ್ಯ ಬಿ. ಎಂ. ಶ್ರೀ ಅವರ ಮೊಮ್ಮಗಳಾಗಿದ್ದ ಶ್ರೀಮತಿ ವಿಶಾಲಾಕ್ಷಿ ಅವರು ಇತ್ತೀಚೆಗೆ ದೈವಾಧೀನರಾದರು. ಬಿ. ಎಂ. ಶ್ರೀ ಪ್ರತಿಷ್ಠಾನದ ಸದಸ್ಯರೂ ಹಿತೈಷಿಗಳೂ ಆಗಿದ್ದ ವಿಶಾಲಾಕ್ಷಿ ಅವರು ಪದೇ ಪದೇ ಪ್ರತಿಷ್ಠಾನಕ್ಕೆ ಭೇಟಿಕೊಟ್ಟು ಅದರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರಲ್ಲದೆ ಅಭಿಮಾನ ಹೊಂದಿದ್ದರು. ಸ್ವತಃ ಲೇಖಕಿಯೂ ಆಗಿದ್ದ ದಿವಂಗತರು ಕನ್ನಡ–ಇಂಗ್ಲಿಷ್ ಎರಡು ಭಾಷೆಯಲ್ಲೂ ಪರಿಣತರಾಗಿದ್ದರು. ಬಿ.ಎಂ.ಶ್ರೀ. ಜನ್ಮಶತಾಬ್ದಿ ಸಮಯದಲ್ಲಿ 'ಶ್ರೀ ಉತ್ಸವ' ಎಂಬ ಸಂಪುಟವನ್ನು ಸಿದ್ಧಪಡಿಸಿ ಪರಿಷತ್ತಿನ ಮೂಲಕ ಪ್ರಕಟಿಸಿದ್ದರು. ಬೆಳ್ಳೂರಿನಲ್ಲಿ ನಡೆದ ಶ್ರೀ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಬೆಳ್ಳೂರಿನಲ್ಲಿ ಸಿದ್ಧವಾಗಿರುವ ಬಿ.ಎಂ. ಶ್ರೀ. ಭವನದ ಉದ್ಘಾಟನೆಯಲ್ಲಿ ಪಾಲ್ಗೊಳ್ಳಲು ಆಸಕ್ತರಾಗಿದ್ದರು. ಪ್ರತಿಷ್ಠಾನದಲ್ಲಿ ಅವರ ಸೋದರರಾಗಿದ್ದ ದಿ|| ಎಸ್. ಜಿ. ಶ್ರೀಕಂಠಯ್ಯ ಅವರು ಸ್ಥಾಪಿಸಿದ್ದ ಬಿ.ಎಂ.ಶ್ರೀ.ದತ್ತಿ ನಿಧಿಯನ್ನು ಇನ್ನಷ್ಟು ಬೆಳೆಸುವ ಉದ್ದೇಶಕ್ಕಾಗಿ ಶ್ರೀಯವರ ಕೃತಿಗಳ ಹಕ್ಕುಗಳನ್ನು ಪ್ರತಿಷ್ಠಾನಕ್ಕೆ ನೀಡುವುದಾಗಿ ಹೇಳಿದ್ದರು. ಅಗಲಿದ ಈ ಎಲ್ಲ ಗೌರವಾನ್ವಿತರಿಗೂ ಪ್ರತಿಷ್ಠಾನ ತನ್ನ ಶ್ರದ್ಧಾಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಈ ಸಂಚಿಕೆಯ ಲೇಖಕರು

1. **ತಾಳ್ತಜೆ ಕೃಷ್ಣಭಟ್ಟ, ವಿದ್ವಾನ್**
   ಪಂಜಳ ಮನೆ, ಅಂಚೆ : ಉಪ್ಪಿನಂಗಡಿ
   574 241–ದಕ್ಷಿಣ ಕನ್ನಡ ಜಿಲ್ಲೆ

2. **ಟಿ. ಕೇಶವಭಟ್ಟ**
   754, 15ನೇ ಮೈನ್, 2ನೇ ಹಂತ
   ಬನಶಂಕರಿ, ಬೆಂಗಳೂರು-560 070

3. **ರಾ. ಲಕ್ಷ್ಮೀನಾರಾಯಣ**
   ರೀಡರ್, ಕನ್ನಡ ವಿಭಾಗ,
   ಸರ್ಕಾರಿ ಮಹಿಳಾ ಕಾಲೇಜು, ಕೋಲಾರ

4. **ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ**
   20, 'ಗಣೇಶಧಾಮ', 2ನೇ ಕ್ರಾಸ್,
   9ನೇ ಮೈನ್, ರಾಜಾಮಹಲ್ ವಿಲಾಸ
   ಬಡಾವಣೆ, ಬೆಂಗಳೂರು-560 080

5. **ದರ್ಭೆ ನಾರಾಯಣ ಭಟ್ಟ**
   1317-C/D ಬ್ಲಾಕ್, ಕುವೆಂಪುನಗರ
   ಮೈಸೂರು-23

6. **ಪ್ರೊ|| ಕೆ. ಎಸ್. ಮಧುಸೂದನ**
   'ಶೇಷಾಂಕ', 1557, 3ನೇ ರಸ್ತೆ,
   4ನೇ ಫೇಸ್, 7ನೇ ಬ್ಲಾಕ್. ಬನಶಂಕರಿ
   3ನೇ ಹಂತ, ಬೆಂಗಳೂರು-560 085

7. **ಶ್ರೀ ಹೆಚ್. ಎನ್. ಮುರಳೀಧರ**
   391, 2ನೇ ಕ್ರಾಸ್, ನರಸಿಂಹರಾಜ ಕಾಲೋನಿ
   ಬೆಂಗಳೂರು-560 019

8. **ಡಾ|| ಸ. ಸುಬ್ರಹ್ಮಣ್ಯಂ**
   274ಡಿ, 37ನೇ ಕ್ರಾಸ್, 8ನೇ ಬ್ಲಾಕ್
   ಜಯನಗರ, ಬೆಂಗಳೂರು-560 011

9. **ಶ್ರೀ ಎಂ. ಎನ್. ಪ್ರಭಾಕರ್**
   205. 7ನೇ ತಿರುವು, ಬ್ಯಾಂಕ್ ಕಾಲೋನಿ
   ಬನಶಂಕರಿ 1ನೇ ಹಂತ, ಬೆಂಗಳೂರು-50

10. **ಎಂ. ವಿ. ವಿಶ್ವೇಶ್ವರ**
50, 7ನೇ ಕ್ರಾಸ್. ಅಶೋಕನಗರ
ಬೆಂಗಳೂರು-560 050

11. **ಡಾ|| ಕೆಳದಿ ವೆಂಕಟೇಶ್**
ಕೆಳದಿ ಮ್ಯೂಸಿಯಂ, ಕೆಳದಿ-577 443

12. **ಪ್ರೊ|| ಸಿ. ಮಹದೇವಪ್ಪ**
ರಿಸರ್ಚ್ ಕಾರ್ನರ್, 197ನೇ, ಮುಖ್ಯರಸ್ತೆ
ಬೆಂಗಳೂರು-560 003

13. **ಪ್ರೊ|| ಡಿ. ವಿ. ಪರಮಶಿವಮೂರ್ತಿ**
18/2, 15ನೇ ಕ್ರಾಸ್, 'ಎ' ಬ್ಲಾಕ್,
ಭುವನೇಶ್ವರಿನಗರ, ಮಾಗಡಿ ರಸ್ತೆ
ಬೆಂಗಳೂರು-560 023

14. **ಶ್ರೀ ಎಂ. ಜಿ. ನಾರಿ**
ಬಾಣದಾರ ಓಣಿ, ಬಾದಾಮಿ-587 201

15. **ಡಾ|| ಉಪ್ಪಂಗಲ ರಾಮಭಟ್**
ಮುಖ್ಯಸ್ಥರು, ಕನ್ನಡ ವಿಭಾಗ
ಎಂ.ಜಿ.ಎಂ. ಕಾಲೇಜು, ಉಡುಪಿ-576 102

16. **ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ**
ಎ-6, ಕೈಲಾಸ ಕ್ವಾರ್ಟರ್ಸ್
ಮಣಿಪಾಲ,-576 119, ದಕ್ಷಿಣ ಕನ್ನಡ

17. **ಬಿ. ಎಸ್. ಸಣ್ಣಯ್ಯ**
33/1, 8ನೇ ಅಡ್ಡರಸ್ತೆ, ಜಯಲಕ್ಷ್ಮೀಪುರ
ಮೈಸೂರು-12

18. **ಕೆ. ಬಿ. ಲೋಕೇಶ್ವರಪ್ಪ**
493, 7ನೇ ಮುಖ್ಯರಸ್ತೆ,
ಹನುಮಂತನಗರ, ಬೆಂಗಳೂರು-560 019

19. **ಎನ್. ಬಸವಾರಾಧ್ಯ**
743, 12ನೇ ಮುಖ್ಯರಸ್ತೆ, 3ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560 010

ಪ್ರತಿಷ್ಠಾನದ ಗೌರವ ಸದಸ್ಯರು

1) ಡಾ॥ ಕುವೆಂಪು, 2) ಪ್ರೊ॥ ಎ. ಎನ್. ಮೂರ್ತಿರಾವ್ 3) ಡಾ॥ ಪು. ತಿ. ನ. 4) ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ 5) ಪ್ರೊ॥ ಎಸ್. ವಿ. ಪರಮೇಶ್ವರಭಟ್ಟ 6) ಪ್ರೊ॥ ತ. ಸು. ಶಾಮರಾವ್ 7) ಡಾ॥ ಜಿ. ಎಸ್. ದೀಕ್ಷಿತ್ 8) ಡಾ॥ ಜಿ. ಎಸ್. ಗಾಯಿ.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ,ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ,ಮೈಸೂರು. 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, ಬೆಂಗಳೂರು. 5) ಬಸವ ಪಥ, ಬೆಂಗಳೂರು. 6) ಶಂಕರಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು. 8) ಜಾನಪದ ಜಗತ್ತು, ಬೆಂಗಳೂರು. 9) ಅನ್ವೇಷಣೆ, ಬೆಂಗಳೂರು. 10) ಅಪರಂಜಿ, ಬೆಂಗಳೂರು. 11) ಕರ್ನಾಟಕ ಭಾರತಿ, ಧಾರವಾಡ. 12) ಸುಗುಣಮಾಲಾ, ಉಡುಪಿ. 13) ಸತ್ಯಶುದ್ಧ ಕಾಯಕ, ಸಿರಿಗೆರೆ 14) ತರಳಬಾಳು, ಸಿರಿಗೆರೆ
15) ಅಭಿಮತ, ದೆಹಲಿ.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ	:	ವ್ಯಕ್ತಿಗಳಿಗೆ ರೂ. 15-00 ಗ್ರಂಥಾಲಯ, ಸಂಘ-ಸಂಸ್ಥೆಗಳಿಗೆ ರೂ. 25-00
ಆಜೀವ	:	ರೂ. 150-00 ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ
ಪ್ರತಿಷ್ಠಾನದ ಸದಸ್ಯತ್ವ	:	ವಾರ್ಷಿಕ: ರೂ. 25-00 ಆಜೀವ: ರೂ. 250-00
		ಬಿಡಿ ಪ್ರತಿ ರೂ. 10-00

KARNATAKA LOCHANA Half Yearly Journal, Published by B M. Sri. Smaraka Prathishthana, 54, M. V. Seetharamaiah Road, Masthi Nagara, (Gavipuram Extension,) Bangalore-19.
Printed by : Prabhu Mudrana, Shakambari Nagara, Sarakki. Bangalore.560 078. Phone : 640976

Reg No. 03260/23/2/ALTC/83 KARNATAKA LOCHANA

ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

1.	ಸಂಗಮರ ಕಾಲದ ವಿಜಯನಗರ		75-00
2.	ಕುಮಾರವ್ಯಾಸ ಭಾರತ ಸಂಗ್ರಹ	ಸಾದಾ ಪ್ರತಿ	40-00
		ಉತ್ತಮ ಪ್ರತಿ	75-00
3.	ಕಾವ್ಯ-ಇತಿಹಾಸ (ದತ್ತಿ ಉಪನ್ಯಾಸಗಳು)		10-00
4.	ಶಂಬಾ ಕೃತಿ ಸಮೀಕ್ಷೆ		35-00
5.	ಎಂ. ವಿ. ಸೀ. ಸಂಸ್ಮರಣೆ		25-00
6.	ವೈಚಾರಿಕ ಜಾಗೃತಿ		15-00
7.	ಹಸ್ತಪ್ರತಿಶಾಸ್ತ್ರ ಪರಿಚಯ		15-00
8.	ಸಂವಿಧಾನ ಮತ್ತು ಕಾನೂನು		20-00
9.	ಮಾಸ್ತಿ ಕಥಾ ಸಮೀಕ್ಷೆ		20-00

ಸಿದ್ಧತೆಯಲ್ಲಿ

1. ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-1, ಸಮಗ್ರ ಸಂಶೋಧನಾ ಲೇಖನಗಳು)
2. ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2)
3. ತೌಲನಿಕ ಸಾಹಿತ್ಯ
4. ಸಾಹಿತ್ಯ ಮತ್ತು ಮನಶ್ಶಾಸ್ತ್ರ
5. ಶಾಸನ ಪದ್ಯ
6. ದತ್ತಿ ಉಪನ್ಯಾಸಗಳು
7. ತಿರುಕ್ಕುರಳ್ (ಕನ್ನಡಾನುವಾದ)